ಶ್ರೀ ಎಸ್. ಜಿ. ಸಿದ್ದರಾಮಯ್ಯನವರಿಗೆ
ಒಲವಿನಿಂದ
ಜಿ. ಶಿ.
11.7.67

ಕರ್ಣ ಕರ್ಣಾಮೃತ

ಸಂಪಾದಕರು:
ಜಿ. ವೆಂಕಟಸುಬ್ಬಯ್ಯ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಬೆಂಗಳೂರು-೧೮

ಮೊದಲನೆಯ ಮುದ್ರಣ : ೧೯೬೬
ಎರಡನೆಯ ಮುದ್ರಣ : ೧೯೬೭

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ
ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೧೮

ಕೃತಜ್ಞತೆ

ಕನ್ನಡ ಸಾಹಿತ್ಯ ಪರಿಷತ್ತಿನಂಥ ಹಿರಿಯ ಸಂಸ್ಥೆ ನಾಡಿಗೆ ನುಡಿಗೆ ಐವತ್ತು ವರುಷಗಳಿಂದ ಸಲ್ಲಿಸುತ್ತಿರುವ ಸೇವೆಯನ್ನು ನೆನೆದು, ಈ ಪುಸ್ತಕದಿಂದ ಬರುವ ಎಲ್ಲ ಆದಾಯವನ್ನೂ ಒಂದು ನಿಧಿಯಾಗಿ ಆ ಸಂಸ್ಥೆಗೆ ಕೃತಜ್ಞತೆಯಿಂದ ಅರ್ಪಿಸಿದ್ದೇನೆ.

ಬೆಂಗಳೂರು — ಜಿ. ವೆಂಕಟಸುಬ್ಬಯ್ಯ

೨೬-೫-೧೯೬೭ — ಸಂಪಾದಕ

ಶ್ರವಣಬೆಳಗುಳದ

ಸಾಹಿತ್ಯ ಸಮ್ಮೇಳನ ಪ್ರಾರಂಭವಾದ ದಿನ

ಪೀಠಿಕೆ

ಕುಮಾರವ್ಯಾಸ: ಕವಿ, ಕಾಲ, ಕೃತಿ

ಗದುಗಿನ ನಾರಣಪ್ಪ, ಕನ್ನಡ ಭಾರತ, ಕುಮಾರವ್ಯಾಸ – ಈ ಮಾತುಗಳು ನಾಡಿನ ನಾಡಿನಾಡಿಯಲ್ಲಿ ಮಿಡಿಯಲು ಎಂದು ಮೊದಲಾಯಿತೋ ನಾವು ಕಾಣೆವು. ಆದರೆ ಇಂದೂ ಆ ಮಿಡಿತ ಸ್ಪಷ್ಟವಾಗಿ, ನಿಸ್ಪೃಷ್ಟವಾಗಿ ನಾಡಿನ ಜೀವನದ ಚೈತನ್ಯಸ್ವರೂಪಿಯಾಗಿದೆ. ಕನ್ನಡದ ಹೆಸರು ಕೇಳುವ ಕಡೆಯೆಲ್ಲ ಕುಮಾರವ್ಯಾಸನ ಹೆಸರೂ ಕೇಳುತ್ತದೆ. ಇಲ್ಲಿಯವರೆಗೆ ನಡೆದಿರುವ ಸಾಹಿತ್ಯ ಸಂಶೋಧನೆಯೆಲ್ಲದರ ಫಲವಾಗಿ ಈ ಕವಿಯ ಕಾಲ ಮೂರು ಶತಮಾನಗಳ ಪರಿಮಿತಿಗೆ ಮಾತ್ರ ಸೀಮಿತವಾಗಿದೆ. ಹದಿಮೂರನೆಯ ಶತಮಾನದ ಆದಿಯಿಂದ ಹಿಡಿದು ಹದಿನಾರನೆಯ ಶತಮಾನದವರೆಗೆ ಈ ಸೀಮೆ ವಿಸ್ತಾರವಾಗಿದೆ. ಕುಮಾರ ವ್ಯಾಸನ ಭಾರತದಲ್ಲಿ ಬರುವ ಕೃಷ್ಣಪ್ರಾಧಾನ್ಯವೂ 'ಕೃಷ್ಣರಾಯ' ಎಂಬ ಪದವೂ ಅದಕ್ಕೆ ಪೂರಕವಾಗಿ ಬರುವ ಇತರ ಪದಗುಂಫನಗಳೂ ವಿಜಯನಗರದ ಕೃಷ್ಣದೇವರಾಯನನ್ನು ಸೂಚಿಸುತ್ತವೆಯೆಂದು ವಿದ್ವಾಂಸರ ವಾದ. ಅಲ್ಲದೆ ಕುಮಾರವ್ಯಾಸನು ಬರೆದ ಹತ್ತು ಪರ್ವಗಳ ಮುಂದಿನ ಕಥೆಯನ್ನು ಕೃಷ್ಣದೇವರಾಯನ ಆಸ್ಥಾನದ ತಿಮ್ಮಣ್ಣ ಕವಿ ಕಾವ್ಯವಾಗಿ ಬರೆದು ಪೂರೈಸಿದ್ದಾನೆ. "ಲೇಸೆನಿಸಿ ಮೊದಲಾ ಕುಮಾರವ್ಯಾಸ ದಶಪರ್ವಗಳ ಹೇಳಿದ ಭಾರತದ ಉಳಿದ ಪರ್ವಗಳ ನೀ ಹೇಳು" ಎಂದು ಕೃಷ್ಣದೇವರಾಯನೇ ತನಗೆ ಹೇಳಿದನೆಂದು ತಿಮ್ಮಣ್ಣ ಕವಿಯ ಮಾತಿದೆ. ಆದುದರಿಂದ ಕುಮಾರವ್ಯಾಸನೂ ವಿಜಯನಗರದ ಕಾಲಕ್ಕೆ ಸೇರಬೇಕೆಂಬುದು ಒಂದು ವಾದ.

ಈ ವಾದಕ್ಕೆ ಪ್ರತಿಯಾಗಿ ಕನ್ನಡ ಭಾರತದಲ್ಲಿ ಬರುವ ಅನೇಕ ಮರಾಠಿ ಪದಗಳ ಪರಿಶೀಲನೆಯಿಂದ, ಈ ಕವಿಯು ಇನ್ನೂ ಹಿಂದೆ ಬದುಕಿದ್ದಿರಬೇಕೆಂಬ ಮತವೂ ಇದೆ.

ನಾರಣಪ್ಪನ ಮತದ ವಿಚಾರವಾಗಿಯೂ ಹೀಗೆಯೇ ಭಿನ್ನಾಭಿಪ್ರಾಯಗಳಿವೆ.

ನಮಗೆ ನಾರಣಪ್ಪನ ಕಾಲವಾಗಲಿ ಆತನ ಮತವಾಗಲಿ ಮುಖ್ಯವಾಗಿಲ್ಲ. ನಾಡಿನ ಸುದೈವದಿಂದ ಈ ಕವಿಯ ಗ್ರಂಥವು ನಮಗೆ ಸಮಗ್ರವಾಗಿ ದೊರೆತಿದೆ. ಈ ಕಾವ್ಯವು ತುಂಬ ಜನಪ್ರಿಯವಾದುದರಿಂದ ಇದರ ಅನೇಕ ಓಲೆಪ್ರತಿಗಳು ನಾಡಿನಲ್ಲಿ ಪ್ರಚಾರದಲ್ಲಿದ್ದುವು. ಈಗ ಅವುಗಳಲ್ಲಿ ಅನೇಕ ಪ್ರತಿಗಳು ಸಿಕ್ಕಿವೆ. ಇವುಗಳ ಸಹಾಯದಿಂದ ಕುಮಾರವ್ಯಾಸ ಭಾರತದ ಶುದ್ಧಪ್ರತಿಯನ್ನು ಸಂಪಾದಿಸುವುದು ಈಗ ಸಾಧ್ಯ. ಈ ಕೆಲಸವನ್ನು ನಾಡಿನ ವಿದ್ವಾಂಸರು ಮಾಡಬೇಕಾಗಿದೆ.

ನಾರಣಪ್ಪನು ತನ್ನನ್ನು ಕುಮಾರವ್ಯಾಸನೆಂದು ಕರೆದುಕೊಂಡಿದ್ದಾನೆ. ಈತನ ಗ್ರಾಮ ಕೋಳಿವಾಡ. ಗದುಗಿನ ವೀರನಾರಾಯಣಸ್ವಾಮಿ ಈತನ ಕುಲದೈವ. ಆ ದೇವರಿಗೆ ಈ ಗ್ರಂಥವನ್ನು ಮೀಸಲಾಗಿಟ್ಟಿರುವುದು ಗ್ರಂಥಾಂತ್ಯದ, ಸಂಧಿಗಳ ಅಂತ್ಯದ ಗದ್ಯದಿಂದ ಸೂಚಿತವಾಗುತ್ತದೆ. ಈ ಕಾರಣದಿಂದಲೇ ಈ ಗ್ರಂಥಕ್ಕೆ ಗದುಗಿನ ಭಾರತ ಎಂದು ಹೆಸರು ಬಂದಿದೆ. ಇದಕ್ಕೆ ಮತ್ತೊಂದು ಹೆಸರು ಕನ್ನಡ ಭಾರತ. ಕವಿಯೇ ತನ್ನ ಕಾವ್ಯಕ್ಕೆ ಕೊಟ್ಟಿರುವ "ಕರ್ಣಾಟಕ ಭಾರತ ಕಥಾಮಂಜರಿ" ಎಂಬ ಹೆಸರು ಗ್ರಂಥದ ಪ್ರತಿಗಳಲ್ಲಿ ಮಾತ್ರ ನಿಂತಿದೆ; ಜನಮನಕ್ಕೆ ಈ ಗ್ರಂಥ ಇಂದಿಗೂ 'ಕನ್ನಡ ಭಾರತ' ಇಲ್ಲವೆ 'ಗದುಗಿನ ಭಾರತ' ಇಲ್ಲವೆ 'ನಾರಣಪ್ಪನ ಭಾರತ.'

ಕವಿಯು ತನ್ನ 'ಬಲುಹ' ನ್ನು ಹೇಳಿಕೊಳ್ಳುತ್ತ ತನ್ನದು "ಹಲಗೆ ಬಳಪವ ಹಿಡಿಯದೊಂದಗ್ಗಳಿಕೆ" ಎಂದು ಹೇಳಿದ್ದಾನೆ. ಬಹುಜನ ಈ ವಾಕ್ಯಭಾಗಕ್ಕೆ ವಿಪರೀತಾರ್ಥ ಮಾಡಿದ್ದುಂಟು. ಕವಿಗೆ ಅಕ್ಷರಗಳನ್ನು ಬರೆಯುವುದಕ್ಕೂ ಬರುತ್ತಿರಲಿಲ್ಲವೆಂದೂ ವೀರನಾರಾಯಣನ ಕೃಪೆಯಿಂದ, ದೇವಸ್ಥಾನದಲ್ಲಿದ್ದಾಗ ಮಾತ್ರ ಕಾವ್ಯಾವೇಶವುಂಟಾಗಿ, ಸ್ನಾನಮಾಡಿದ ಬಟ್ಟೆ ಒಣಗುವವರೆಗೆ ಕಾವ್ಯಧಾರೆ ಹೊರಸೂಸುತ್ತಿತ್ತೆಂದೂ ಅದನ್ನು ಇತರರು ಯಾರೋ ಬರೆದುಕೊಳ್ಳುತ್ತಿದ್ದರೆಂದೂ ಒಂದು ಕಥೆ. ಕಾಳಿದಾಸನ ವಿಚಾರದಲ್ಲಿ ದೈವಾನುಗ್ರಹದ ಕಥೆಯಿಲ್ಲವೆ? ಆದರೆ "ಹಲಗೆ

ಬಳಪವ ಪಿಡಿಯದೊಂದಗ್ಗಳಿಕೆ" ಎಂಬುದಕ್ಕೆ ಇರುವ ಅರ್ಥ ಅದಲ್ಲವೆಂದು ಕಾಣುತ್ತದೆ. ಸಾಮಾನ್ಯರು ತಾವು ಬರೆದ ಕಾವ್ಯವನ್ನು ಅನೇಕ ಸಲ ತಿದ್ದಿ, ಸರಿಮಾಡಿ, ಛಂದಸ್ಸನ್ನು ಪರೀಕ್ಷಿಸಿ ತಪ್ಪಿಲ್ಲದಂತೆ ಮಾಡಲು ಪ್ರಯತ್ನಿಸುತ್ತಾರೆ. ಈ ಪ್ರಯತ್ನ ತನಗೆ ಅನಗತ್ಯವಾಗಿತ್ತು ಎಂಬುದು ಕುಮಾರ ವ್ಯಾಸನ ಅರ್ಥ. ಇಂಥ ಕಾವ್ಯಾವೇಶ ಕವಿಗೆ ಇದ್ದಿತೆಂಬುದು ಈ ಕಾವ್ಯದ ಯಾವ ಭಾಗವನ್ನು ಓದಿದರೂ ಸ್ಪಷ್ಟವಾಗುತ್ತದೆ.

ವ್ಯಾಸಮಹಾಭಾರತವೂ ಪಂಪಭಾರತವೂ ಕುಮಾರ ವ್ಯಾಸನಿಗೆ ಪ್ರೇರಕ ಗ್ರಂಥಗಳಾಗಿವೆ. ಮೂಲ ವ್ಯಾಸಭಾರತವನ್ನು ಈ ಕವಿ ಆಮೂಲಾಗ್ರವಾಗಿ ಓದಿ ಮೆಚ್ಚಿಕೊಂಡಿದ್ದಾನೆ. ಜೊತೆಗೆ ಪಂಪನ ಕಾವ್ಯದ ಹಿರಿಮೆಯನ್ನು ಅರ್ಥಮಾಡಿಕೊಂಡಿದ್ದಾನೆ. ಆದುದರಿಂದ ನಾರಣಪ್ಪನ ಭಾರತದಲ್ಲಿ ಮುಖ್ಯಕಥೆ, ಇತರ ಪ್ರಸಂಗಗಳು ಇವೆಲ್ಲ ಈ ಸಂಸ್ಕೃತ ಭಾರತದಂತಿದ್ದರೂ, ಅಲ್ಲಲ್ಲಿ ಕಥಾವ್ಯತ್ಯಾಸದಲ್ಲಿ ಪಾತ್ರಗಳ ಗುಣಶೀಲ ನಿರೂಪಣೆಯಲ್ಲಿ ಪಂಪನ ಪ್ರಭಾವ ವ್ಯಕ್ತವಾಗುತ್ತದೆ. ಎರಡು ಮಹಾಕಾವ್ಯಗಳ ಪ್ರಭಾವದಿಂದ ಪುನೀತವಾದ ಈ ಮಹಾಕಾವ್ಯವು ನಮ್ಮ ದೇಶದ ಸೌಭಾಗ್ಯವೆಂಬುದನ್ನು ನಾವು ನೆನಪಿಡಬೇಕು. ಈ ಕಾವ್ಯದ ನಾಯಕ ಶ್ರೀ ಕೃಷ್ಣ.

ಶ್ರೀಕೃಷ್ಣ

ಕಾಲಕಾಲಕ್ಕೆ ವಿಭೂತಿ ಪುರುಷರು ಅವತರಿಸಿ ಜನತೆಯನ್ನು ಸನ್ಮಾರ್ಗದಲ್ಲಿ ನಡೆಸಿಕೊಂಡು ಹೋಗುತ್ತಾರೆ. ಅವರ ಸಮಕಾಲೀನರಿಗೆ ಆ ಮಹಾಪುರುಷರ ಮಾತುಗಳು ವೇದಕ್ಕೆ ಸಮಾನವಾಗುತ್ತವೆ. ಅವರ ಕೆಲಸಗಳು ಎಲ್ಲರಿಗೂ ಮೇಲ್ಪಂಕ್ತಿಯಾಗುತ್ತವೆ. ಅವರನ್ನು ಅನುಸರಿಸುವವರಿಗೆ ಅಚ್ಚಳಿಯದ ಕೀರ್ತಿ ಲಭಿಸುತ್ತದೆ. ಜೀವಿತದ ಕಾಲದಲ್ಲಿಯೇ ಜನರ ಮೆಚ್ಚುಗೆಯನ್ನು ಪಡೆದ ಅಂತಹ ಮೇಧಾವಿಗಳ ಪುಣ್ಯಚರಿತೆಯು ಮುಂದಿನ ತಲೆಮಾರುಗಳಿಗೆ ಪಾವನವಾದ ಕಥೆಯಾಗುತ್ತದೆ. ಇದು ಪ್ರಕೃತಿಸಿದ್ಧವಾದುದು.

ಶ್ರೀ ಕೃಷ್ಣನ ಜೀವನದಲ್ಲಿ ವಿಶ್ವಪ್ರೇಮದ ಪವಿತ್ರ ತತ್ತ್ವವು ಅಡಗಿದೆ. ಮಹಾಭಾರತದಲ್ಲಿ ಶ್ರೀ ಕೃಷ್ಣನ ಪೂಜೆಯೆ ಮುಖ್ಯವಾದ ಗುರಿ. ಆ ಗ್ರಂಥದ ಅನುಕ್ರಮಣಿಕೆಯಲ್ಲಿ ಶ್ರೀ ಕೃಷ್ಣನ ಮಹಿಮೆಯನ್ನೂ ಅವನ ಯಶಸ್ಸನ್ನೂ ಹೇಳುವುದು ತನ್ನ ಕೆಲಸದಲ್ಲಿ ಒಂದು ಎಂದು ಕವಿಯೇ ಸೂಚಿಸಿದ್ದಾನೆ. ಭಾರತದಲ್ಲಿ ಮೊದಲಿನಿಂದಲೂ ಶ್ರೀ ಕೃಷ್ಣನನ್ನು ಮಹಾ ಮಹಿಮಾಮಯನಾದ ದೇವನೆಂದೇ ಕರೆದಿದೆ. ಸತ್ಯ ಧರ್ಮಗಳನ್ನು ಉದ್ಧರಿಸಿ, ಅಸತ್ಯ ಅಧರ್ಮಗಳನ್ನು ಮುರಿಯುವುದೇ ಅವನ ಕೆಲಸ.

ಮೊಟ್ಟಮೊದಲು ಒಬ್ಬ ಪರಾಕ್ರಮಶಾಲಿಯಾದ ಯೋಧನಾಗಿಯೂ ಆಮೇಲೆ ನ್ಯಾಯದ ಆಧಾರಸ್ತಂಭವಾಗಿಯೂ ಅಲ್ಲಿಂದ ಮುಂದೆ ಶತ್ರು ಮಿತ್ರರಿಬ್ಬರಿಗೂ ಒಂದೇ ವಿಧವಾದ ಪ್ರೇಮವನ್ನು ತೋರುವವನಾಗಿಯೂ ಕೊನೆಗೆ ವಿಶ್ವಪ್ರೇಮದಲ್ಲಿ ಮಗ್ನನಾಗಿರುವಂತೆಯೂ ಭಾರತದಲ್ಲಿ ಶ್ರೀ ಕೃಷ್ಣನು ಚಿತ್ರಿತನಾಗಿದ್ದಾನೆ. ಅವನ ಶೀಲದ ಬೆಳವಣಿಗೆಯಲ್ಲಿ ಮಾನವ ಪ್ರೇಮವು ದೇವತ್ವಕ್ಕೆ ಏರುವ ಒಂದು ಕ್ರಮವು ಸೂಚಿತವಾಗಿದೆ. ಆದರೆ ಭಾರತದಲ್ಲಿ ಶ್ರೀಕೃಷ್ಣನ ಬಾಲ್ಯ ಯೌವನಗಳ ಪರಾಕ್ರಮವನ್ನು ಚಿತ್ರಿಸಿಲ್ಲ. ಅದು ಭಾರತದ ಉದ್ದೇಶವೂ ಅಲ್ಲ. ಭಾರತದಲ್ಲಿ ಮೊಟ್ಟಮೊದಲು ಶ್ರೀಕೃಷ್ಣನು ಕಾಣಬರುವುದು ದ್ರೌಪದಿಯ ಸ್ವಯಂವರದಲ್ಲಿ. ಪಾಂಡವರನ್ನು ಕೊಂದೆವೆಂದು ಹಿಗ್ಗಿ ತಮ್ಮ ಸ್ವಾರ್ಥದಲ್ಲಿ ನಿರತರಾಗಿ ಅನ್ಯಾಯ ಮಾಡಿದ್ದ ಕೌರವರೆದುರು, ಭರತಖಂಡದ ಇತರ ಎಲ್ಲ ರಾಜರೆದುರು ಪಾಂಡವರನ್ನು ನಾಟಕೀಯವಾಗಿ ಪ್ರಕಾಶಕ್ಕೆ ತಂದು ಅವರ ಪರಾಕ್ರಮವನ್ನು ಪ್ರಪಂಚಕ್ಕೆ ತೋರಿದ ಶ್ರೀಕೃಷ್ಣನ ರಾಜನೀತಿಯನ್ನು ಮೆಚ್ಚದವರಿಲ್ಲ. ಒಟ್ಟು ಪ್ರಪಂಚಕ್ಕೆ ಕೌರವರ ಅನ್ಯಾಯ ಅಂದು ಹೊಳೆಯಿತು. ಅಂದಿನಿಂದ ಕೌರವರ ಶಿಕ್ಷೆಗೆ ಮೊದಲಾಯಿತು. ಅಲ್ಲಿಂದ ಮುಂದೆ ಪಾಂಡವರಿಗೆ ಪಟ್ಟಾಭಿಷೇಕವಾಗುವವರೆಗೂ ಶ್ರೀಕೃಷ್ಣನು ಪಾಂಡವರ ರಕ್ಷಾನಿಧಿಯಾಗಿದ್ದನು.

ಹೀಗೆ ಶ್ರೀಕೃಷ್ಣನ ಚರಿತೆಯಲ್ಲಿ ಕಾಣಬರುವುದು ವಿಶ್ವಪ್ರೇಮದ ತತ್ತ್ವ. ವಿಶ್ವಪ್ರೇಮವೇ ದೇವರು, ದೇವರೇ ವಿಶ್ವಪ್ರೇಮ ಎಂಬ ಗಾಢವಾದ ಅಂತರಾರ್ಥ ಅವನ ಜೀವನದಿಂದ ಪ್ರತಿಪಾದಿತವಾಗಿದೆ. ಈ ತತ್ತ್ವದ

ಆಧಾರದಿಂದಲೇ ಶ್ರೀಕೃಷ್ಣನು ನಮ್ಮ ಜನಕ್ಕೆ ದೇವರ ದೇವನಾದನು. ಅವನು ಸರ್ವಶಕ್ತನಾದ ಅಂತರ್ಯಾಮಿಯೆಂಬುದನ್ನು ಜನರು ಒಪ್ಪಲಿ ಒಪ್ಪದಿರಲಿ, ಈ ತತ್ವವನ್ನು ಎಲ್ಲರೂ ಒಪ್ಪಬೇಕು. ಅದೇ ಭಾರತದ ಮುಖ್ಯ ಮಂತ್ರ. ಶ್ರೀ ಭಗವದ್ಗೀತೆಯಲ್ಲಿ ಅವನೇ ಹೇಳಿರುವ ಹಾಗೆ –

ಯದ್ಯದ್ವಿಭೂತಿಮತ್ ಸತ್ವಂ ಶ್ರೀಮದೂರ್ಜಿತಮೇವ ವಾ
ತತ್ತದೇವಾವಗಚ್ಛ ತ್ವಂ ಮಮ ತೇಜೋಂಶ ಸಂಭವಂ

ಪ್ರಪಂಚದಲ್ಲಿ ಯಾವ ಯಾವುವು ಯಶಸ್ಸು, ಸೌಂದರ್ಯ ಮತ್ತು ಶಕ್ತಿಗಳಿಂದ ಕೂಡಿವೆಯೋ ಅವೆಲ್ಲವೂ ಆತನ ತೇಜಸ್ಸಿನ ಭಾಗವೊಂದರಿಂದ ಉಂಟಾದುವು. ಆದುದರಿಂದಲೇ ಧರ್ಮರಾಜ, ದ್ರೌಪದಿ, ಅರ್ಜುನ ಮುಂತಾದ ಮಹಾಮಹಿಮರು ಶ್ರೀಕೃಷ್ಣನಿಗೆ ಪರಮ ಆಪ್ತರಾದುದು. ಇದನ್ನು ಅರಿತ ಮೇಲೆ ಶ್ರೀಕೃಷ್ಣನ ಎಲ್ಲ ಕಾರ್ಯಗಳಿಗೂ ಸರಿಯಾದ ಸಮನ್ವಯ ದೊರಕುವುದು ಕಷ್ಟವೇನಲ್ಲ.

ವ್ಯಾಸಮಹಾಭಾರತದ ಕೃಷ್ಣನ ಈ ಗುಣಗಾನ ಕನ್ನಡ ಕವಿ ಪಂಪನಿಗೆ ಹಿಡಿಸಲಿಲ್ಲ. ಭಾರತವನ್ನು ಕಥಾವಸ್ತುವಾಗಿ ಆರಿಸಿದರೂ ಶ್ರೀಕೃಷ್ಣನ ಪಾರಮ್ಯವನ್ನು ಅವನು ಬಿಟ್ಟುಬಿಟ್ಟನು. ತನ್ನ ಜೈನಮತದ ಅಭಿಮಾನದಿಂದ ವ್ಯಾಸರ ಕೃಷ್ಣನ ಪ್ರತಿಕೃತಿಯನ್ನು ರಚಿಸುವುದು ಅವನಿಗೆ ಅಸಾಧ್ಯವಾಯಿತು. ಆದುದರಿಂದ ಪಂಪನಲ್ಲಿ ಕೃಷ್ಣನೊಬ್ಬ ಪರಾಕ್ರಮಶಾಲಿಯಾದ ರಾಜಕುಮಾರ ಅಷ್ಟೇ. ಅವನಲ್ಲಿ ಎಲ್ಲರನ್ನೂ ಆಕರ್ಷಿಸುವ ಅನೇಕ ಗುಣಗಳು ತುಂಬಿವೆ. ಆದುದರಿಂದ ಅವನು ಜನರೆಲ್ಲರ ಮೆಚ್ಚಿಗೆಗೆ ಪಾತ್ರನಾಗಿದ್ದಾನೆ. ಅವನನ್ನು ಎದುರಿಸಿದವರು ಬದುಕುವುದೂ ಕಷ್ಟ. ಈ ಒಂದು ಕಾರಣದಿಂದ ಜರಾಸಂಧ, ಶಿಶುಪಾಲ, ಕಂಸ ಮುಂತಾದ ರಾಕ್ಷಸರೂ ಕೌರವ, ದುಶ್ಶಾಸನ ಮುಂತಾದ ಹಟಮಾರಿಗಳೂ, ಉದಾತ್ತನಾದರೂ ಅನ್ಯಾಯದ ಕಡೆಗೆ ಸೇರಿದ ಕರ್ಣನೂ ಮಡಿಯಬೇಕಾಯಿತು. ಈ ಎಲ್ಲ ಕಾರ್ಯಗಳಲ್ಲಿ ಯಾವ ಅತಿಮಾನುಷತೆಯೂ ಇಲ್ಲ.

ಪಂಪನಿಗೆ ಈ ದೃಷ್ಟಿ ಇದ್ದದ್ದರಿಂದ ಭಾರತದ ಅನೇಕ ಸ್ವಾರಸ್ಯವಾದ ಭಾಗಗಳು ಅವನಲ್ಲಿ ಇಲ್ಲವಾಗಿವೆ. ಅಕ್ಷಯ ವಸ್ತ್ರದಾನ, ದೂರ್ವಾಸರ

ಆತಿಥ್ಯ ಮುಂತಾದ ರಸಪ್ರಕರಣಗಳು ಮಾಯವಾಗಿವೆ. ದುಶ್ಶಾಸನನು ದ್ರೌಪದಿಯ ಸೀರೆಯನ್ನು ಎಳೆಯುವುದರ ಬದಲು ಧಮ್ಮಿಲ್ಲವನ್ನು ಮಾತ್ರ ತೆಗೆಯುತ್ತಾನೆ. ಆಗ ಕೆದರಿದ ಕೇಶ ಪುನಃ ಮುದುರುವುದು ದುಶ್ಶಾಸನನು ಮಡಿದ ಮೇಲೆ ಮಾತ್ರ.

ಹೀಗಾಗಿ ಕೃಷ್ಣನ ದೃಷ್ಟಿಯಿಂದ ಪಂಪ ಭಾರತದಲ್ಲಿ ಹೆಚ್ಚಿಲ್ಲವೆಂದೇ ಹೇಳಬೇಕು.

ಕುಮಾರವ್ಯಾಸನು ಭಕ್ತಕವಿ. ಅವನು ಪರಮ ವೈಷ್ಣವ. ಆದುದರಿಂದ ವ್ಯಾಸಭಾರತದಲ್ಲಿ ಹೇಳಿರುವ ಕೃಷ್ಣಪಾರಮ್ಯವೂ ಅವನಿಗೆ ಸಾಲದಾಯಿತು. ಎದ್ದರೆ ಕೂತರೆ ಶ್ರೀಕೃಷ್ಣನ ಮಹಿಮೆಯನ್ನು ವಿವರಿಸುವುದೇ, ಅವನ ಅಗಾಧ ಸಾಮರ್ಥ್ಯವನ್ನು ಬಣ್ಣಿಸುವುದೇ ಕುಮಾರವ್ಯಾಸನ ಕೆಲಸವಾಯಿತು. ಮಹಾಭಾರತವು ಅವನಿಗೆ ಶ್ರೀಕೃಷ್ಣ ಚರಿತೆ. ಗ್ರಂಥವು ಪಾವನವಾಗಿರುವುದು ಅವನ ನಾಮಸ್ಮರಣೆಯಿಂದ. ಇಂಥ ಭಾರತವನ್ನು ಓದುವುದೊಂದೇ ಸಾಕು, ಎಲ್ಲ ಪುಣ್ಯಲೋಕಗಳನ್ನೂ ಸಾಧಿಸಿಕೊಡುವುದಕ್ಕೆ.

ವೇದಪಾರಾಯಣದ ಫಲ ಗಂ
ಗಾದಿ ತೀರ್ಥಸ್ನಾನ ಫಲ ಕೃ
ಚ್ಛ್ರಾದಿ ತಪಸಿನ ಫಲವು ಜ್ಯೋತಿಷ್ಟೋಮಯಾಗ ಫಲ
ಮೇದಿನಿಯನೊಲಿದಿತ್ತ ಫಲ ವ
ಸ್ತ್ರಾದಿ ಕನ್ಯಾದಾನ ಫಲವಹು
ದಾದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ

ಈ ಭಾರತದ ಒಂದಕ್ಷರವನ್ನು ಕೇಳಿದರೇ ಸಾಕು!

ನಮ್ಮ ಗದುಗಿನ ಕವಿಗೆ ಕೃಷ್ಣನ ಪಾರಮ್ಯವನ್ನು ಹೇಳಿದಷ್ಟೂ ಹೆಚ್ಚಿಗೆ ಹೇಳಬೇಕೆನ್ನಿಸುತ್ತಿತ್ತು. ಪ್ರಪಂಚವೆಲ್ಲವೂ ಕೃಷ್ಣನ ಇಚ್ಛೆಗೆ ಅಡಿಯಾಳು. ಅವನು ಯಂತ್ರಿ; ಲೋಕ ಯಂತ್ರ. ಈ ಅಭಿಪ್ರಾಯವನ್ನು ಭೀಷ್ಮನ ಬಾಯಿಯಲ್ಲಿ ಕವಿ ಸ್ಪಷ್ಟವಾಗಿ ಹೇಳಿಸಿಬಿಟ್ಟಿದ್ದಾನೆ.

ಭೀಷ್ಮನನ್ನು ಚಕ್ರದಿಂದ ಕೊಲ್ಲುತ್ತೇನೆಂದು ಕೃಷ್ಣನು ರಥದಿಂದ ಭೂಮಿಗಿಳಿದಾಗ ಭೀಷ್ಮನು ಹೀಗೆ ಹೇಳುತ್ತಾನೆ:

ಯಂತ್ರಿ ಮಿಡಿದರೆ ಕಾದಿ ಬೀಳ್ವುವು
ಯಂತ್ರಮಯ ಹಾಹೆಗಳು ವಧೆಯಾ
ಯಂತ್ರಿಗೋ ಹಾಹೆಗಳಿಗೋ ಹೇಳಾರ ನೆಮ್ಮುವುದು
ಯಂತ್ರಿ ಕೃಷ್ಣನು ನಾವು ನೀವೀ
ತಂತ್ರವಖಿಲ ಚರಾಚರಂಗಳು
ಯಂತ್ರ ರೂಪುಗಳೆಲ್ಲ

ಶ್ರೀಕೃಷ್ಣನು ಅರ್ಜುನನಿಗೆ ವಿಶ್ವರೂಪದರ್ಶನ ಮಾಡಿಸಿದ ಮೇಲೆ ಅರ್ಜುನನು ಅವನನ್ನು ಕುರಿತು ಹೇಳುವ ಮಾತುಗಳಲ್ಲಿಯೂ ಇದೇ ತತ್ವ ಅಡಗಿದೆ:

" ವಿಶ್ವ ನಿನ್ನಯ ಮಾಯೆ ನಿರ್ಮಲ
ವಿಶ್ವರೂಪವನು ನೀನು ಬಗೆವೊಡೆ
ವಿಶ್ವ ನಿನ್ನೊಳು ಸುಳಿವುದಳಿವುದು ಲಲಿತ ಲೀಲೆಯಲಿ "

ಈ ಮಾತುಗಳಲ್ಲಿ ಕವಿಯ ಅಭಿಪ್ರಾಯ ತುಂಬಿದೆ. ಇಂತಹ ಅಭಿಮಾನನ್ನುಳ್ಳ ಕವಿಗೆ ಕೃಷ್ಣನ ಒಂದು ಸಾಹಸ ಕಾರ್ಯ, ಒಂದು ಕರುಣೆಯ ತೋರಿಕೆ ಸಿಕ್ಕಿದರೆ ಸಾಕು, ಭಕ್ತಿಯ ಹೊನಲು ಹರಿದುಬಿಡುತ್ತದೆ. ಕವಿಯ ಭಾವ ಭಾಷೆಗಳೆರಡೂ ಹೊಂದಿಕೊಂಡು ಈ ಪ್ರವಾಹದಲ್ಲಿ ಓದುಗನನ್ನು ತೇಲಿಸಿಬಿಡುತ್ತವೆ. ಸನ್ನಿವೇಶಕ್ಕೆ ಈ ದೀರ್ಘವಾದ ಸ್ತೋತ್ರಗಳು ಹೆಚ್ಚು. ಆದರೂ ನಮಗೆ ಅದರಿಂದ ಬೇಸರವಾಗುವುದರ ಬದಲು ಇನ್ನಷ್ಟು ಕೇಳೋಣವೆನ್ನಿಸುತ್ತದೆ.

ದ್ರೌಪದಿಗೆ ಮಾನಭಂಗವಾಗುವ ಸಂದರ್ಭವೊದಗಿದಾಗ ಅನೇಕ ಪದ್ಯಗಳಲ್ಲಿ ಕೃಷ್ಣನ ಪೂರ್ವಕಥೆಗಳೆಲ್ಲವನ್ನು ವಿಸ್ತಾರವಾಗಿ ಹೇಳಿ ತನ್ನನ್ನು ಕಾಪಾಡಬೇಕೆಂದು ಅವಳು ಕೇಳಿಕೊಳ್ಳುತ್ತಾಳೆ.

ಸುಲಿವರೂರೊಳಗುಟ್ಟ ಸೀರೆಯ
ನೆಲೆ ಮುರಾಂತಕ ರಕ್ಷಿಸೈ ಶಶಿ
ಕಳೆಗೆ ಸಪರಪೆ ರಾಹು ರಚಿಸಿದ ತುಟಿಯ ತೋಟಿಯದು
ಸೆಳೆವರಸುವನು ಖಳರು ಸೀರೆಯ
ಸೆಳೆಯಲುಳಿವೆನೆ ಕೃಷ್ಣ ಕರುಣಾ
ಜಲಧಿಯೇ ಕೈಗಾಯಬೇಕೆಂದೊರಲಿದಳು ತರಳೆ

ಇಂತಹ ಸನ್ನಿವೇಶ ಭಾರತದಲ್ಲಿ ನೂರಾರು. ಎಲ್ಲವನ್ನೂ ಸಮದೃಷ್ಟಿಯಿಂದ ಪರಿಹರಿಸಿ ಎಲ್ಲರಿಗೂ ಕನಿಕರವನ್ನು ಹರಡುವುದು ಕೃಷ್ಣನ ಕೆಲಸ. ಅವನು ಕರುಣಾನಿಧಿ, ದಯಾಸಾಗರ. ದ್ರೌಪದಿಯ ಮಾತು ಅವನಿಗೆ ಕೇಳಿಸಿ ಪಗಡೆಯಾಡುವ ನೆಪದಿಂದ ಆಕೆಯ ಸೀರೆಯನ್ನು ಅಕ್ಷಯವನ್ನಾಗಿಸಿದ.

ಮೊದಲ ನೋಟಕ್ಕೆ ಅನ್ಯಾಯವೆಂದು ಕಾಣುವುದೂ ವಿಮರ್ಶೆಯಲ್ಲಿ ಸೋಸಿದಾಗ ಕೃಷ್ಣನಲ್ಲಿ ನಿಷ್ಕಲ್ಮಷವಾದ ಗುಣವಾಗಿ ಕಾಣುತ್ತದೆ. ಹಟವಾದಿಯಾದ ಕೌರವನಿಗೂ ಇದು ಗೊತ್ತು. "ಕಾವನಾತನು, ಕೊಲುವನಾತನು; ಕೃಷ್ಣನನು ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲ" ಎಂಬ ಮಾತುಗಳು ಶ್ರೀಕೃಷ್ಣನನ್ನು ಮನಸಾರೆ ಬೈದು-

ಮರಳುಗಳಲಾ ಬೊಪ್ಪನವರೀ
ಮುರಹರನ ಹರಿಯೆಂದು ಮನ್ನಿಸಿದಿಹೆನು

ಎಂದು ಹೇಳಿದ ಸುಯೋಧನನು.

ಅಂತಹ ಕೌರವನಿಗೂ ಶ್ರೀಕೃಷ್ಣನಿಂದ ಮುಕ್ತಿ ದೊರಕಿತು. ಕರ್ಣನು "ಆದರೇನು ಕುರುನೃಪತಿ" ಎಂದು ತನ್ನ ಮನಸ್ಸಿನ ದ್ವಿಧವನ್ನು ತಿಳಿಸಿದಾಗ ಕೃಷ್ಣನು, "ನೀ ಸುಖಿಯಾಗು ಹೋಗು" ಎಂದು ಹೇಳಿಕಳುಹಿಸಿದನು. ಕರ್ಣನು ರಣರಂಗದಲ್ಲಿ ಮಡಿಯುವುದರಲ್ಲಿದ್ದಾಗ-

ಪರಮ ಕರುಣಾಸಿಂಧು ಕರ್ಣಂ
ಗಿರದೆ ನಿಜಮೂರ್ತಿಯನು ತೋರಿಸಿ
ಗುರುತರ ಪ್ರೇಮದಲಿ ಮುಕ್ತಿಯ ಪದವ ನೇಮಿಸಿದ

ಹೀಗಾಗಿ ಭೀಷ್ಮನು ಕೃಷ್ಣನನ್ನು ಹೊಗಳುವಾಗ ಹೇಳುವಂತೆ 'ಇದು ಮುರಾರಿಯ ಲೀಲೆಗೋಸುಗ ಉದಯಿಸಿದ ಜಗ'. ಅವನು ಇಲ್ಲಿ ಅನೇಕ ನಾಟಕಗಳನ್ನು ಆಡುತ್ತಿದ್ದಾನೆ. ಅವನ ಭಕ್ತಿಯಿಂದ ಜಗತ್ತಿನ ಜನ ಉದ್ಧಾರವಾಗಬೇಕು. ಪಾಂಡವರು ವಿಜಯಿಗಳಾದುದು ಈ ಕಾರಣದಿಂದ.

ದೇವಸಂತತಿ ನಲಿಯೆ ಪಾಂಡವ
ಜೀವಿ ಹರಿಯೆಂಬೀ ಪ್ರತಿಜ್ಞೆಯ
ಭಾವ ಸಂದುದು ಧರ್ಮಜನ ಪಟ್ಟಾಭಿಷೇಕದಲಿ

ಇಷ್ಟೆಲ್ಲ ಆದರೂ ಕುಮಾರವ್ಯಾಸನ ಭಾರತದಲ್ಲಿ ಕೇವಲ ಕೃಷ್ಣ ಮಹಿಮೆಯೊಂದೇ ವರ್ಣಿತವಾಗಿಲ್ಲ. ಅದರೊಡನೆ ಅನೇಕ ರಸಸಂದರ್ಭಗಳೂ ತಮ್ಮ ಸಂಪೂರ್ಣ ವರ್ಣವೈಖರಿಯೊಡನೆ ಚಿತ್ರಿತವಾಗಿವೆ. ಅವನ ಕಥಾನಾಯಕನಂತೆಯೇ ಅವನ ಗ್ರಂಥವೂ ಒಂದು ಮಹಾಮಾಯಾ ನಾಟಕಶಾಲೆ.

ಕರ್ಣ ಕರ್ಣಾಮೃತ

ಕುಮಾರವ್ಯಾಸ ಭಾರತದಿಂದ ಕರ್ಣನ ಕಥೆಯಲ್ಲಿನ ಕೊನೆಯ ಭಾಗವನ್ನು ಮಾತ್ರ ಆರಿಸಿ ಈ ಕರ್ಣ ಕರ್ಣಾಮೃತವನ್ನು ಸಿದ್ಧಗೊಳಿಸಿದೆ. ಮಹಾಭಾರತದ ಯುದ್ಧದಲ್ಲಿ ದ್ರೋಣರು ಮರಣಹೊಂದಿದ ಮೇಲೆ ಕರ್ಣನಿಗೆ ಸೇನಾನಾಯಕ ಪಟ್ಟಾಭಿಷೇಕವಾಯ್ತು. ಅಲ್ಲಿಂದ ಮುಂದೆ ಕರ್ಣಾವಸಾನದವರೆಗಿನ ಕಥೆಯನ್ನು ಕವಿ ಕರ್ಣಪರ್ವದಲ್ಲಿ ಚಿತ್ರಿಸಿದ್ದಾನೆ. ಈ ಭಾಗ ಭಾರತದಲ್ಲಿ ಬಹು ರಸವತ್ತಾದ ಪ್ರಸಂಗಗಳನ್ನು ಒಳಗೊಂಡಿದೆ. ಕರ್ಣನ ವ್ಯಕ್ತಿತ್ವದ ಪರಿಚಯವು ಚೆನ್ನಾಗಿ ಆಗಲೆಂಬ ಉದ್ದೇಶದಿಂದ ಕರ್ಣನ ಪೂರ್ವಕಥೆಯನ್ನೂ ಈ ಗ್ರಂಥದಲ್ಲಿ ಬರುವ ಕಥಾಭಾಗವನ್ನೂ ಮುಂದೆ ಸಂಗ್ರಹಿಸಿ ಹೇಳಿದೆ.

ಕರ್ಣ ಕಥೆ: ಪೂರ್ವಾರ್ಧ

ದೂರ್ವಾಸ ಮುನಿಯು ಸೇವೆ ಮಾಡಿದ ಕುಂತಿಯನ್ನು ಆ ಮುನಿಯು ವಾತ್ಸಲ್ಯದಿಂದ ಕಂಡು, "ಮಗಳೆ, ಬಾ, ಕೊಳ್ ಐದು ಮಂತ್ರಾಳಿಗಳನು. ಸೊಗಸು ದಿವಿಜರೊಳಾರ ಮೇಲುಂಟು ಅವರ ನೆನೆ ಸಾಕು ಮಗನು ಜನಿಸುವನು." ಎಂದು ವರವನ್ನಿತ್ತು, ಐದು ಮಂತ್ರಗಳನ್ನು ಹೇಳಿಕೊಟ್ಟು ತನ್ನ ಆಶ್ರಮಕ್ಕೆ ಹಿಂದಿರುಗಿದನು. ಬಾಲಕಿಯಾದ ಕುಂತಿಯು ಬೊಂಬೆಯಾಟ ವಾಡುತ್ತಿದ್ದವಳು ನಿಜವಾದ ಮಗನನ್ನೇ ಏಕೆ ತರಬಾರದು ಎಂದು ಆಲೋಚಿಸಿ. ಗಂಗಾ ನದಿಯ ಬಳಿಗೆ ಬಂದು ಮಿಂದು ಮಡಿಯುಟ್ಟು. ದಿನಪನ ಮಂತ್ರವನು ನಾಲಿಗೆಗೆ ತಂದಳು. ಸೂರ್ಯನನ್ನು ಪ್ರಾರ್ಥಿಸಿ ಸೂರ್ಯನ ಕಡೆಗೆ ದೃಷ್ಟಿ ಬೀರಿ, ಪ್ರಾರ್ಥನೆಯಲ್ಲಿ ಕಣ್ಮುಚ್ಚಿದಳು. ಒಡನೆಯೇ ಸೂರ್ಯದೇವನು ಸಾಕ್ಷಾತ್ಕಾರಗೊಂಡು "ಎನ್ನ ರೂಪದ ಮಗನಾದಾನು ನೀನಂಜಬೇಡ" ಎಂದು ಕನ್ನಿಕೆಯಾದ ಕುಂತಿಯನ್ನು ಮುಟ್ಟಿದನು. ಜೊತೆಗೆ "ನಿನ್ನ ಕನ್ನೆತನ ಕೆಡದಿರಲಿ" ಎಂದೂ ಹರಸಿ ಹಿಂದಿರುಗಿದನು. ಕಣ್ದೆರೆವನಿತರಲ್ಲಿ "ತಾವರೆಯ ಮಿತ್ರನ ಕರಗಿ ಕರುವಿನೊಳೆರೆದ ಲಿಂಪೆಸೆ". ಬಳಿಯಲ್ಲಿ ಕಂಡ ಮಗುವನ್ನು ನೋಡಿ ಕುಂತಿಗೆ "ಬೆರಗಾ" ಯಿತು. ಕುಲದಮೇಲೆ ಅಪವಾದ ಬರುತ್ತದೆಂಬ ಹೆದರಿಕೆ ಒಡನೆಯೇ ಮೊಳೆಯಿತು. ಏನೂ ತೋಚದ ಮುಗ್ಧ ಬಾಲಿಕೆ ಗಂಗಾ ನದಿಯನ್ನು ಪ್ರಾರ್ಥಿಸಿ, ಮುದ್ದು ಮಗುವನ್ನು ಆ ನದಿಯ ನೀರಿನಲ್ಲಿ ಹಾಕಿಬಿಟ್ಟಳು. ಎಷ್ಟು ದುಃಖ, ಎಷ್ಟು ಹೆದರಿಕೆ ಇದ್ದಿತೋ ಮನದಲ್ಲಿ; ಗಂಗೆಯನ್ನು ಹೀಗೆ ಪ್ರಾರ್ಥಿಸಿದಳು. "ತಾಯೆ ಬಲ್ಲಂದದಲಿ ಕಾಯಿ, ಮೇಣ್ ಕೊಲ್ಲು." ಲೋಕಕ್ಕೆಲ್ಲ ಮಾತೆಯಾದ ಜಾಹ್ನವಿಯು ಮಗುವನ್ನು ಮುಳುಗಲೀಯದೆ ದಡಕ್ಕೆ ತೇಲಿಸಿಬಿಟ್ಟಳು. ಈ ಶಿಶುಗಳರಸನನ್ನು ಒಬ್ಬ ಸೂತನು ಕಂಡು ತನ್ನ ಮನೆಯಲ್ಲಿ ಕಾಪಾಡಿದನು. ಆತನ ಹೆಂಡತಿಯ ಹೆಸರು ರಾಧೆ. ಈ ಮಗು "ರಾಧೇಯ" ನಾಗಿ ಬೆಳೆದನು.

ದೊಡ್ಡವನಾದ ಮೇಲೆ ಪರಶುರಾಮರ ಬಳಿಗೆಹೋಗಿ ತಾನೂ ಬ್ರಾಹ್ಮಣ ಕುಮಾರನೆಂದು ಸುಳ್ಳು ಹೇಳಿ ಧನುರ್ವಿದ್ಯಾಭ್ಯಾಸವನ್ನು ಮಾಡಿದನು.

ಇನ್ನು ಯುದ್ಧವಿದ್ಯಾನಿಪುಣನಾದ ಯುವಕನಿಗೆ ಮನ್ನಣೆ ದೊರೆಯುವ ಸ್ಥಾನವಾವುದು? ಹಸ್ತಿನಾನಗರಿ. ಅಲ್ಲಿಗೇ ಬಂದನು ಕರ್ಣ. ಕೌರವೇಶ್ವರನನ್ನು ಕಂಡನು. "ಅಂದು ಮೊದಲಾಗವರ ಸಖ್ಯಕ್ಕೆ ಸಂದ ಕಾಣೆನು. ಕರ್ಣ ಕುರುಪತಿಗೊಂದೆ ಜೀವನ" ಆಯಿತು. ಬೇಟೆ, ಆಟ, ಷಡುರಸದೂಟ, ಶಸ್ತ್ರಾಭ್ಯಾಸ ಇವುಗಳಲ್ಲೆಲ್ಲ "ತಾವಿಬ್ಬರೊಂದೆನಿಸಿದರು ಜಗವರಿಯೆ." ಹೀಗೆ ಜತೆ ಸ್ನಿಗ್ಧವಾಯಿತು.

ಒಂದು ಸಲ ದ್ರೋಣಾಚಾರ್ಯರು ತಮ್ಮ ಶಿಷ್ಯರ "ಓದನ್ನು" ಭೀಷ್ಮಧೃತರಾಷ್ಟ್ರರು ಪರಿಶೀಲಿಸಬೇಕೆಂದು ಕೇಳಿಕೊಂಡರು. ದೊಡ್ಡ ವಿದ್ಯಾಪರೀಕ್ಷಾರಂಗ ಸಿದ್ಧವಾಯಿತು. ಪ್ರದರ್ಶನ ನಡೆಯುತ್ತಿದ್ದಾಗ ಕುಂತಿ ಗಾಂಧಾರಿಯರೂ ಅದನ್ನು ವೀಕ್ಷಿಸುತ್ತಿದ್ದರು. ಅರ್ಜುನನ ಅಸ್ತ್ರಶಸ್ತ್ರಪ್ರಯೋಗನೈಪುಣ್ಯವನ್ನು ಕಂಡು ಕುಂತಿಗೆ ಸಂತೋಷವೂ ಗಾಂಧಾರಿಗೆ ದುಮ್ಮಾನವೂ ಉಂಟಾದುವು. ದುರ್ಯೋಧನನ ವ್ಯಸನವನ್ನು ಅರಿತು ಕರ್ಣನು ಒಡನೆಯೇ ಹೊರಹೊಮ್ಮಿ ಬಾಣವನ್ನು ತೂಗುತ್ತ ಪರೀಕ್ಷಾರಂಗಕ್ಕೆ ಇಳಿದುಬಿಟ್ಟನು. ಅರ್ಜುನನು ಯಾವ ಯಾವ ಧನುರ್ವಿದ್ಯಾ ನೈಪುಣ್ಯವನ್ನು ತೋರಿಸಿದನೋ ಅದೆಲ್ಲವನ್ನೂ ಅದೇ ರೀತಿಯಲ್ಲಿ ಕರ್ಣನೂ ಪ್ರದರ್ಶಿಸಿದನು. ಕರ್ಣ-ಅರ್ಜುನರ ಹೋರಾಟವಾಯಿತು. ಈ ಸಂದರ್ಭದಲ್ಲಿ ಕೃಪಾಚಾರ್ಯನು ಕರ್ಣನನ್ನು ಮೂದಲಿಸಿ ಕರ್ಣನು ಕ್ಷತ್ರಿಯನಲ್ಲವೆಂದೂ ಕುಲಗೋತ್ರವಿಲ್ಲದವನೆಂದೂ ಅವನೊಡನೆ ಅರ್ಜುನನು ಹೋರಾಡುವುದು ಯೋಗ್ಯವಲ್ಲವೆಂದೂ ಹೇಳಿ ಆ ಪ್ರಸಂಗವನ್ನು ಅಷ್ಟಕ್ಕೆ ಸಾಕು ಮಾಡಿದನು.

ಕರ್ಣನು ಕ್ಷತ್ರಿಯನಲ್ಲವೆಂದು ಕೃಪನೂ ಹೀಯಾಳಿಸಿದುದು ಕೌರವನಿಗೆ ನೋವನ್ನುಂಟುಮಾಡಿತು. "ಆ ತತುಕ್ಷಣದಲಿ ಸುಯೋಧನನೆದ್ದು ರಭಸದಲಿ, ತರಿಸಿ ಭದ್ರಾಸನದೊಳೀತಂಗರನು ಪವನಿಯೊಳಂಗದೇಶದ ಸಿರಿಯನಿತ್ತನು." ರಾಧೇಯನು ಅಂಗಾಧಿಪತಿಯಾದನು. ಈ ಪ್ರಸಂಗವನ್ನು ಪ್ರಜನರು ಒಬ್ಬೊಬ್ಬರು ಒಂದೊಂದು ವಿಧವಾಗಿ ಟೀಕಿಸುತ್ತ ಊರನ್ನು ಸೇರಿಕೊಂಡರು.

ಹೀಗೆ ಬೆಸುಗೆಗೊಂಡ ಕರ್ಣ ಕೌರವರ ಸ್ನೇಹವು ಪಾಂಡವ ಕೌರವರ ವೈರದ ಆಶ್ರಯದಲ್ಲಿ ಸೊಂಪಾಗಿ ಬೆಳೆಯಿತು.

ಶ್ರೀಕೃಷ್ಣನು ರಾಯಭಾರಿಯಾಗಿ ಹಸ್ತಿನಾವತಿಗೆ ಬಂದ ದಿನ, ಸಂಧಿ ಮುರಿದ ದಿನ, ಕರ್ಣನ ಜೀವಿತದಲ್ಲಿ ವಿಚಿತ್ರಾನುಭಾವವನ್ನು ತಂದಿತ್ತ ದಿನ. ಕೃಷ್ಣನು ತನ್ನನ್ನು ಬೀಳ್ಕೊಡಲು ಬಂದವರನ್ನೆಲ್ಲ ಉಚಿತ ವಚನದಲ್ಲಿ ಹಿಂದಕ್ಕೆ ಕಳುಹಿಸಿ ರವಿಸುತನನ್ನು ಮಾತ್ರ ಕರೆದು ಸ್ವಲ್ಪ ದೂರ ಬಂದು ಕಳುಹಿಸಬೇಕೆಂದು ಕೋರಿದನು.

ಇನತನೂಜನ ಕೂಡೆ ಮೈದುನ
ತನದ ಸರಸವನೆಸಗಿ ರಥದೊಳು
ದನುಜರಿಪು ಕುಳ್ಳಿರಿಸಿದನು ಪೀಠದಲಿ.

ಈ ಉಪಚಾರದ ಹಿಂದೆ ಯಾವ ಅಪಚಾರವಿದೆಯೋ ಎಂದು ಹೆದರಿದ ಕರ್ಣನು "ಎನಗೆ ನಿಮ್ಮಡಿಗಳಲಿ ಸಮಸೇವನೆಯೆ?" ಎಂದು ಪ್ರಶ್ನಿಸಿದನು. ಕೃಷ್ಣನು ಕರ್ಣನಿಗೆ ಇನ್ನಷ್ಟು ಮನ್ನಣೆ ಮಾಡಿ ಹೀಗೆ ಹೇಳಿದನು:

"ನೀನು ನಮಗೆ ಹವಣೆ, ನೀನು ರಾಮನಿಗೆ ಸಮಾನ. ನಿನ್ನ ಕುಲವು ನಿನಗೆ ತಿಳಿಯದಲ್ಲಾ. ನೀನು ಸುಯೋಧನನಲ್ಲಿ ಸೇವಕನಾಗಿರಬೇಕಾಗಿಲ್ಲ. ಕುಂತಿಯು ಮುನಿಯಿಂದ ಪಡೆದ ಐದು ಮಂತ್ರಗಳಲ್ಲಿ ನೀನೇ ಮೊದಲನೆಯವನಾಗಿ ಹುಟ್ಟಿದೆ. ಆಮೇಲೆ ಯುಧಿಷ್ಠಿರ, ಭೀಮ, ಅರ್ಜುನರು. ಐದನೆಯ ಮಂತ್ರದ ಸಹಾಯದಿಂದ ಮಾದ್ರೀದೇವಿಯಲ್ಲಿ ನಕುಲಸಹದೇವರು ಜನಿಸಿದರು. ಇದು ಸತ್ಯವಾದ ಸಮಾಚಾರ. ನೀನು ಅಭ್ಯುದಯಗೊಳ್ಳಬೇಕೆಂಬುದು ನನ್ನಿಷ್ಟ. ಐವರು ಪಾಂಡವರನ್ನೂ ನಿನ್ನ ಪಾದಗಳಿಗೆ ಬೀಳಿಸುತ್ತೇನೆ. ನಿನಗೆ ಹಸ್ತಿನಾಪುರದ ರಾಜ್ಯದ ಒಡೆತನವನ್ನೂ ಕೊಡಿಸುತ್ತೇನೆ. ಪಾಂಡವರೂ ಕೌರವರೂ ಓಲೈಸುತ್ತಾರೆ. ಹೀಗಿರುವಾಗ ನೀನು ದುರ್ಯೋಧನನ ಬಾಯ್ದಂಬುಲಕ್ಕೆ ಕೈಯೊಡ್ಡಬೇಕೆ? ಕೌರವರು ಪಾಂಡವರು ಮಾದ್ರಮಾಗಧ ಯಾದವಾದಿಗಳು ಇರುವ ಓಲಗದಲ್ಲಿ ನೀನು ವಿಲಾಸದಲ್ಲಿರುವುದನ್ನು ಬಿಟ್ಟು, ಕುರುಪತಿ ಮಾತನಾಡಿಸಿದರೆ, "ಜೀಯ! ಹಸಾದ!"

ಎಂಬುದು ಕಷ್ಟವಲ್ಲವೆ? ಸೂರ್ಯಪುತ್ರನಾದ ನಿನಗೆ ಶೌರ್ಯದಲ್ಲಿ ಯಾರೂ ಇದಿರಿಲ್ಲ. ನಡೆ, ಧಾರಿಣೀಪತಿಯಾಗು."

ಈ ಮಾತನ್ನು ಕೇಳಿದ ಕರ್ಣನಿಗೆ ಕೊರಳಸೆರೆ ಬಿಗ್ಗಿ, ಕಣ್ಣೀರು ಸುರಿದು, ಅಂತರಂಗ ಕಲಕಿಹೋಯಿತು. ಅವನಿಗೆ ಮೊದಲು ಹೊಳೆದ ಭಾವ—" ಅಕಟಾ! ಕುರುಪತಿಗೆ ಕೇಡಾದುದು." ಮಿಕ್ಕ ಭಾವಗಳೆಲ್ಲ ಆ ಬಳಿಕ ಬಂದುವು. ಯುದ್ಧ ಮಾಡೋಣವೆಂದರೆ ಪಾಂಡವರು ತಮ್ಮಂದಿರು. ಅವರನ್ನು ಕೊಲ್ಲುವಂತಿಲ್ಲ. ಕೊಲ್ಲದಿದ್ದರೆ ಕೌರವನಿಗೆ ರಾಜ್ಯವಿಲ್ಲ. "ಭೇದದಲ್ಲಿ ಹೊಕ್ಕಿರಿದನೋ ಮಧುಸೂದನನೆಗಟಕಟೆನುತ ಘನಚಿಂತೋದಧಿಯಲದ್ದವೊಲು ಮೌನದೊಳಿದ್ದನಾ ಕರ್ಣ."

ಮತ್ತೆ ಕೃಷ್ಣನೇ ಮಾತನ್ನು ಮೊದಲು ಮಾಡಿದನು. "ನಿನ್ನ ಅಭಿಪ್ರಾಯವನ್ನು ಹೇಳು ಕರ್ಣ. ಪಾಂಡವರ ಕೈಲಿ ಸೇವೆ ಮಾಡಿಸಿಕೊಳ್ಳಲು ಇಷ್ಟವಿಲ್ಲವೆ? ನಾನು ನಿನ್ನಪದೆಸೆಯನು ಬಯಸುವವನಲ್ಲ. ಕೇಳು" ಕರ್ಣನಿಗೆ ಈ ವಿಶ್ವಾಸವೂ ಬೇಡ, ಈ ಐಶ್ವರ್ಯವೂ ಬೇಡ! ಅವನು ನಿರ್ಧಾರವಾಗಿ ಹೇಳಿಯೇ ಬಿಟ್ಟನು: "ಎಲೈ ಕೃಷ್ಣನೆ! ನೀನು ಹಿಂದಿರುಗು! ನಾನು ರಾಜ್ಯದ ಸಿರಿಗೆ ಸೋಲುವವನಲ್ಲ. ಪಾಂಡವರೂ ಕೌರವರೂ ನನಗೆ ಸೇವೆ ಮಾಡುವುದರಲ್ಲಿ ನನಗೆ ಇಷ್ಟವಿಲ್ಲ. ನನ್ನನ್ನು ಕಾಪಾಡಿದ ಕೌರವನಿಗೆ ತಲೆಯೊಪ್ಪಿಸಬೇಕೆಂದಿದ್ದೆನು. ನೀನು ಕೌರವೇಂದ್ರನನ್ನು ಕೊಂದೆ! ನಾನು ಪಾಂಡವರ ಒಡನೆ ಹುಟ್ಟಿದವನು ಎಂಬುದನ್ನು ಎಡೆಬಿಡದೆ ವಿಸ್ತರಿಸಿದ್ದೀಯೆ. ಪಾಂಡವರ ಅಡಗು ಈ ಬಾಣಕ್ಕೆ ಬಲಿಯಾಗಬೇಕೆಂಬ ನನ್ನ ಹಟ ನಾಶವಾಯಿತು. ನಾನಿನ್ನು ಎನ್ನೊಡೆಯನಾದಂತಹೆನು! ನಿನ್ನ ಜೊತೆ ನಾನು ಬರುವುದಿಲ್ಲ! ನಿನ್ನ ಪಾಂಡವರನ್ನು ನೀನು ರಾಜ್ಯಾಧಿಪತ್ಯದಲ್ಲಿ ನಿಲ್ಲಿಸು. ನನಗೆ ವೀರ ಕೌರವರಾಯನೇ ದಾತಾರ, ಆತನ ಹಗೆ ನನಗೂ ಹಗೆ. ಅವನ ಕೈವಾರವೇ ಕೈವಾರ. ಕುರುಪತಿಗಾದದ್ದೇ ನನಗೂ ಆಗಲಿ. ನಾಳೆ ಯುದ್ಧವಾದಾಗ ನನ್ನ ಶೌರ್ಯವನ್ನು ತೋರಿಸುತ್ತೇನೆ. ನಾನು ಕೌರವೇಶ್ವರನನ್ನು ಹೇಗೆತಾನೆ ಮರೆಯಲಿ. ನನ್ನನ್ನು ನೋಡಿ ದಣಿಯನು. ಬಿರುದನ್ನು ಹೊಗಳಿಸಿ ದಣಿಯನು. ನಿತ್ಯವೂ ಬಹುಮಾನ ಕೊಟ್ಟು ತೃಪ್ತಿಪಡನು. ಮಾನನಿಧಿಯಾದ ಕೌರವನನ್ನು

ಹೇಗೆತಾನೆ ಮರೆಯಲಿ? ಎಲೈ ಕೃಷ್ಣನೇ, ಕೋಪಗೊಳ್ಳಬೇಡ, ನಾನು ನಿನ್ನೊಡನೆ ಬಂದರೆ ನನ್ನನ್ನು ಜನ ಮೆಚ್ಚುವುದಿಲ್ಲ. ನನಗೆ ಕೌರವನ ಗೆಲುವು ಕೆಲಸವೇ ಕರ್ತವ್ಯ. ಹೆಚ್ಚು ಮಾತೇಕೆ? ನಾನು ಆಹವಯಜ್ಞ ದೀಕ್ಷಿತನಾಗುತ್ತೇನೆ. ಕೌರವನ ಋಣ ಹಿಂಗುವಂತೆ ಆ ಸುಭಟಕೋಟಿಯನ್ನು ನಾಶ ಮಾಡಿ ನನ್ನ ಒಡೆಯನ ಕಾರ್ಯಕ್ಕಾಗಿ ನನ್ನ ಶರೀರವನ್ನು ನೂಕುತ್ತೇನೆ. ನಿನ್ನ ಐದು ಜನ ವೀರರನ್ನು ನೋಯಿಸುವುದಿಲ್ಲ—ನನ್ನ ತಂದೆಯಾಣೆ.”

ಈ ಮಾತನ್ನು ಕೇಳಿ ಕೃಷ್ಣನಿಗೆ ಮೆಚ್ಚಿಕೆಯಾಯಿತು. ಕೊನೆಗೆ ಅವನು “ಬಂದುದೊಳ್ಳಿತು! ಜಾಣದಿದ್ದರೆ ಮಂದಮತಿಯಾದ ಕೌರವನನ್ನು ಮಧುರವಚನದಿ ತಿಳುಹಿ ತಮ್ಮಂದಿರಿಗೆ ರಾಜ್ಯವನ್ನು ಕೊಡಿಸು. ನಿನ್ನ ಮಾತನ್ನು ಕೌರವನು ಹಿಂದುಗಳೆಯುವುದಿಲ್ಲ” ಎನ್ನುತ್ತಾನೆ. ಕರ್ಣನಿಗೆ ಕೃಷ್ಣನ ಉಪಾಯ ಇಷ್ಟುಹೊತ್ತಿಗೆ ಸ್ಪಷ್ಟವಾಗಿ ಹೋಗಿತ್ತು. ಅವನು “ಕಟ್ಟಾಳು ಮಂತ್ರದೊಳೆಸಗಲಾಗದು. ತನ್ನ ವೀರತೆ ಮಸುಳಕೂಡದು. ಈಗ ಸಂಪ್ರತಿಯುಳಿದ ಹೊತ್ತಿಂದು. ಕಾಲುಸರವಿ ಹಾವಹುದು ಹುತ್ತಿನ ಬಳಿಯಲಿರೆ. ಕಳುಹಬೇಕು.” ಎಂದು ಮತ್ತೆ ನಿಶ್ಚಿತವಾಗಿ ಹೇಳಿದನು. ಕೃಷ್ಣ ಕರ್ಣರ ಸಂವಾದ ಕೊನೆಗಂಡಿತು. ಕರ್ಣನು ಮನೆಗೆ ಬಂದು “ಈ ಗೋಪಾಲ ಬರಿದೇ ಬಿಡನು; ಜೀವವ ಕೊಳ್ಳದಿರನು” ಎಂದು ಚಿಂತೆಯಲ್ಲಿ ಮುಳುಗಿದನು.

ಮತ್ತೆ ಕೃಷ್ಣನ ಸೂಚನೆಯಂತೆ ಕುಂತಿಯು ಕರ್ಣನ ಬಳಿಗೆ ಬಂದು ಮತ್ತೊಂದು ದರೋಡಿಯನ್ನು ನಡೆಸಿಬಿಟ್ಟಳು. ರವಿಸುತನು ಭಾಗೀರಥಿಯ ತೀರದಲ್ಲಿ ಸೂರ್ಯನಿಗೆ ಅರ್ಘ್ಯವನ್ನು ಕೊಡುತ್ತಿರುವಾಗ ಕುಂತಿ ಬಂದಳು. “ಮಗನೆ ತಮ್ಮಂದಿರನು ಪಾಲಿಸು. ಇತರರ ಸೇವೆಯೇಕೆ? ನನ್ನ ಮಾತನ್ನು ಕೇಳು” ಎಂಬ ತಾಯಿಯ ಮಾತಿಗೆ ಕರ್ಣನು ಹೇಳಿದನು:—“ನಾನು ಕೌರವ ಪಾಂಡವರಿಬ್ಬರಿಗೂ ಪಟ್ಟದ ಹಿರಿಯ ನಿಜ. ಕೌರವನು ನನ್ನನ್ನು ನಂಬಿ ಕಾಪಾಡಿದ್ದಾನೆ. ನಾನು ಅವನಿಗಾಗಿ ಸಾಯಲು ಹೆದರುತ್ತೇನೆಯೇ? ನೀವೀಗ ನನ್ನನ್ನು ರವಿನಂದನನೆಂದಾಗ ನನಗೆ ಅದು ತಿಳಿಯಿತು, ಸರಿ. ಆದರೆ ದುರ್ಯೋಧನನು ನನ್ನನ್ನು ಕಾಪಾಡುವಾಗ ಯಾವ ನಂಟತನವನ್ನು

ನೋಡಿದನು? ಆ ಮಾತು ಹಾಗಿರಲಿ. ನೀವು ಬಂದಿರುವ ಕಾರ್ಯವನ್ನು ಹೇಳಿ." ಕುಂತಿಯು ಇಷ್ಟೇ ಅವಕಾಶ ಸಾಕೆಂದು ತನ್ನ ಐದು ಮಕ್ಕಳ ತಲೆಯನ್ನು ಕಾಯಬೇಕೆಂದೂ ಪೋಷಬಾಣವನ್ನು ಮರಳಿ ತೊಡಬಾರದೆಂದೂ ಕೇಳಿಕೊಂಡಳು. ಕರ್ಣನು "ಪ್ರಸಾದ" ಎಂದು ಒಪ್ಪಿ ತಾಯನ್ನು ಹಿಂದಕ್ಕೆ ಕಳುಹಿಸಿಕೊಟ್ಟನು.

ಭಾರತ ಯುದ್ಧ ಮೊದಲಾಯಿತು. ಮೊದಲ ಹತ್ತು ದಿನ ಭೀಷ್ಮನು ಯುದ್ಧ ಮಾಡಿ, ಅಪಾರ ವೀರವನ್ನು ಮೆರೆದು, ಶರಶಯನವನ್ನು ಏರಿದನು. ಬಳಿಕ ದ್ರೋಣನು ಐದು ದಿನ ಯುದ್ಧ ಮಾಡಿ ತನ್ನ ಶರೀರವನ್ನು ತ್ಯಜಿಸಿದನು. ಹದಿನಾರನೆಯ ದಿನ ಕರ್ಣನು ಕೌರವಸೇನಾನಾಯಕನಾದನು. ಕರ್ಣನ ಕಥೆಯ ಕೊನೆಯ ಭಾಗ ಇಲ್ಲಿಂದ ಮೊದಲಾಗುತ್ತದೆ.

ಉತ್ತರಾರ್ಧ:

ಕರ್ಣನು ಸೇನಾನಾಯಕತ್ವವನ್ನು ವಹಿಸಿಕೊಂಡುದು ಕೌರವನ ಕಡೆಯವರಿಗೆಲ್ಲ ಉತ್ಸಾಹವನ್ನುಂಟುಮಾಡಿತು. "ಇಂದು ಬರಹೇಳರ್ಜುನನ, ಹಿಂದೆ ಸಂಜಿಸಿ ಭೀಷ್ಮ ಗುರುವನು ಕೊಂದ ಗೆಲುವಿನಲುಬ್ಬಬೇಡಿ. ಎಮಗಿಂದು ದಳವಾಯ್ ಕರ್ಣ!" ಎಂದು ಭಟರು ಬೊಬ್ಬಿರಿದರು.

ಕೌರವ ಪಾಂಡವ ದಳಗಳೆರಡೂ ಪರಸ್ಪರ ಮೂದಲಿಸಿ ಯುದ್ಧ ಮಾಡಿದುವು. ಮೊದಲನೆಯ ದಿನದ ಯುದ್ಧದಲ್ಲಿ ಎರಡು ಕಡೆಯವರೂ ತಮತಮಗೆ ಜಯವಾಯಿತೆಂದುಕೊಂಡರು.

ಅಂದು ರಾತ್ರಿ ಓಲಗ ಸೇರಿದಾಗ ಕೌರವನೇ "ಇಂದಿನಾಹವದೊಳಗೆ ಕುಂತೀನಂದನರ ಬೊಬ್ಬಾಟ ಬಲುಹಾಯ್ತು" ಎಂದು ಮಾತು ತೆಗೆದನು. ಕರ್ಣನು ಶತ್ರುಗಳ ಅಗ್ಗಳಿಕೆಗೆ ಅರ್ಜುನನ ಸಾರಥಿಯ ಹಿರಿಮೆಯೇ ಕಾರಣವೆಂದೂ ಸರಿಯಾದ ಸಾರಥಿ ದೊರಕಿದರೆ ಜಂಬುಕ ಕಾಕಸಂತತಿಗೆ ಹೆಣದೌತಣವನ್ನು ತಾನು ಉಣಬಡಿಸುವವನೆಂದೂ ಸೂಚಿಸಿದನು. ಕೌರವನು ಅವನಿಗೆ ಬೇಕಾದ ಸೂತಕರ್ಮಾಭ್ಯಾಸಿಯನ್ನು ಜೋಡಿಸುವುದಾಗಿ

ಮಾತುಕೊಟ್ಟನು. ತನಗೆ ಶಲ್ಯನ ಸಾರಥ್ಯಬೇಕೆಂದು ಕರ್ಣನ ಅಪೇಕ್ಷೆ ಯಿತ್ತು. ಕೌರವನು ನೆಟ್ಟಗೆ ಶಲ್ಯನ ಬಿಡಾರಕ್ಕೆ ಬಂದು ನಿಧಾನವಾಗಿ ಅವನು ಕರ್ಣನಿಗೆ ಸಾರಥಿಯಾಗಬೇಕೆಂಬ ಬೇಡಿಕೆಯನ್ನು ಮುಂದಿಟ್ಟನು. ಮಾದ್ರ ರಾಜನಿಗೆ ತುಂಬ ಕೋಪ ಬಂದಿತು. “ನಿನ್ನನ್ನು ಖೂಳನೆನ್ನೋಣ ವೆಂದರೆ ಎಲ್ಲ ಕಲೆಗಳಲ್ಲಿಯೂ ನಿಪುಣನಾಗಿದ್ದೀಯೆ. ಹುಡುಗತನವೆನ್ನೋಣ ವೆಂದರೆ ತಲೆಯಲ್ಲಿ ನರೆಕೂದಲು ತುಂಬಿದೆ, ನಮ್ಮನ್ನು ಕರ್ಣನಿಗೆ ಸಾರಥಿ ಯಾಗಿ ಮಾಡುತ್ತೀಯಾ. ಇನ್ನೆಷ್ಟು ಹೇಳು ಕೇಳೋಣ?” ಎಂದು ಅವನು ಹಾಸ್ಯ ಮಾಡಿಬಿಟ್ಟನು. ಮಾತುಕತೆಗಳಾದ ಮೇಲೆ ಪ್ರಾರ್ಥನಾ ಪರವಾದ ಕೌರವನ ನಿರ್ಬಂಧಕ್ಕೆ ಒಳಗಾಗಿ, “ಅವನಿಪತಿಗಳ ಸೇವೆಯಿಂದು ಕಷ್ಟ” ಎಂದು ಹೇಳಿ, ಶಲ್ಯನು ಸಾರಥಿಯಾಗಲು ಒಪ್ಪಿದನು. ಆದರೆ ಅವನದು ಒಂದು ನಿಯಮವಿತ್ತು. ತನ್ನ ಮಾತನ್ನು ಕರ್ಣನು ಮೀರಿದರೆ ವಾಘೆಯನ್ನು ಎಸೆದು ಸಾರಥಿತನವನ್ನು ತಾನು ಬಿಡುವುದು ನಿಶ್ಚಯ ವೆಂಬುದನ್ನು ಆಗಲೇ ಹೇಳಿಬಿಟ್ಟನು.

ಮಾರನೆಯ ಬೆಳಗ್ಗೆ ಯುದ್ಧರಂಗಕ್ಕೆ ಕರ್ಣನು ಬರುತ್ತಿದ್ದಾಗ ಅನೇಕ ಅಪಶಕುನಗಳಾದುವು. ಆದರೆ ಅವೆಲ್ಲವೂ ಕರ್ಣನಿಗೆ ಹುಲ್ಲಿಗೆ ಸಮಾನ: ಅವುಗಳಿಗೆ ಹೆದರುತ್ತಾನೆಯೇ? ಅವನು ಅತಿರಥರನ್ನೆಲ್ಲ ಸೇರಿಸಿ ಅವರನ್ನು ಹುರಿದುಂಬಿಸಿದನು. “ನೊಂದವರು ನಿಲಿ, ಸ್ವಾಮಿಕಾರ್ಯಕೆ ಹಿಂದುಗಳೆವರು ಮರಳಿ. ಓಡಿ ನಾಚಿಸುವವರು ನಿಲಿ; ಸಂದಸುಭಟರು ಬನ್ನಿ, ಸ್ವರ್ಗದ ಬಂದಿಕಾರರು ಬನ್ನಿ” ಎಂದು ಹೇಡಿಗಳಿಗೂ ರಣಸಾಹಸಿಗಳಿಗೂ ಇರುವ ಕರ್ತವ್ಯಭೇದವನ್ನು ವಿಶದಪಡಿಸಿದನು. ಶಲ್ಯನು ಈ ಸಂದರ್ಭ ದಲ್ಲಿ ಅರ್ಜುನನನ್ನು ಹೊಗಳಲು ಕರ್ಣನು ಅವನಿಗೆ “ಈಗ ನೀನರ್ಜುನನ ಪಕ್ಷಪಾತಿಯೇ? ಮುನಿದೆನಾದರೆ ಕೋಟಿ ಕೃಷ್ಣಾರ್ಜುನರ ಕೊಂಬೆನೆ?” ಎಂದು ತನ್ನ ಪರಾಕ್ರಮವನ್ನು ಮೆರೆದನು. ಆದರೆ ತನಗೆ ಪರಶುರಾಮನಿತ್ತ ಶಾಪದಿಂದ ಕಾಳೆಗದಲ್ಲಿ ಅಸ್ತ್ರಗಳು ನಿರರ್ಥಕವಾಗುವವೇನೋ ಎಂಬ ಹೆದರಿಕೆಯನ್ನು ವ್ಯಕ್ತಪಡಿಸಿದನು ಕರ್ಣ. ಇವರ ಕಲಹಕ್ಕೆ ಹೆಚ್ಚಿಗೆ ಅವಕಾಶ ಕೊಡದೆ ಕೌರವನು ಶಲ್ಯನನ್ನು ಸಮಾಧಾನ ಮಾಡಿ ಅವರಿಬ್ಬ ರನ್ನು ಯುದ್ಧರಂಗಕ್ಕೆ ಕಳುಹಿಸಿಕೊಟ್ಟನು.

ಯುದ್ಧದಲ್ಲಿ ಕರ್ಣನು ಧರ್ಮರಾಯನನ್ನು ಎದುರಿಸಿದ ಪ್ರಸಂಗ ಮಹಾಭಾರತದ ರಸಸ್ಥಾನಗಳಲ್ಲಿ ಒಂದು. ಕರ್ಣನ ಬಾಣಗಳು ಧರ್ಮರಾಯನ ಎದೆಯಲ್ಲಿ ಹೊಕ್ಕು ಬೆನ್ನಿನಲ್ಲಿ ಕಾಣಿಸಿಕೊಂಡುವು. ಈ ಮಾತನ್ನು ಕೇಳಿದ ಭೀಮನು "ನೊಂದನೇ ಧರ್ಮಜನು, ಭಂಗಕೆ ತಂದನೇ ರಾಧೇಯನು?" ಎಂದು ಕಣ್ಣೀರು ಮಿಡಿದು, ಮತ್ತೆ ವೀರ ವಾಣಿಯನ್ನು ಮೊಳಗಿ ಕರ್ಣನನ್ನು ಹೊಡೆದು ಕೆಡಹಿದನು. "ಮುರಿಯೊದೆದನು ಎದೆಯನು ಹಾಯ್ದು ಮುಂದಲೆಗೆ" ಕರ್ಣ ಮಂತ್ರೌಷಧಿಗಳ ಸಹಾಯದಿಂದ ಎಚ್ಚರಗೊಂಡನು. ಮತ್ತೆ ಯುದ್ಧ ಮೊದಲಾಯಿತು.

ಇದೊಂದೂ ತಿಳಿಯದೆ ಆ ಸನ್ನಿವೇಶಕ್ಕೆ ಬಂದ ಪಾರ್ಥನು ಭೀಮನನ್ನು ಕುರಿತು "ನೀನಾದರಿಸು ನಡೆ ನೃಪತಿಯನು, ನಾ ಕಾದುವೆನು" ಎಂದು ಹೇಳಿದ ಮಾತು ಭೀಮನ ಕೋಪಾಗ್ನಿಗೆ ತುಪ್ಪವನ್ನು ಹೊಯ್ದಂತಾಯಿತು. "ಎಲೆ ಧನಂಜಯ ನೀನೆ ಬಲುಗೈ, ಉಳಿದವರು ರಣಹೇಡರು" ಎಂದು ಮೂದಲಿಸಿ ನುಡಿದು, ತಾನು ಮಾಡಿದ ಮಹಾ ಪರಾಕ್ರಮದ ಕಾರ್ಯವನ್ನು ತಿಳಿಸಿ, ನೃಪನನ್ನು ಸಮಾಧಾನ ಪಡಿಸುವ ಕಾರ್ಯವನ್ನು ಅರ್ಜುನನೇ ವಹಿಸಿಕೊಳ್ಳಬೇಕೆಂದನು.

ಅರ್ಜುನನು ಧರ್ಮರಾಯನ ಬಳಿಗೆ ಬಂದು ಸಮಾಧಾನದ ಮಾತಾಡಿದರೆ, ಅವನು ಅರ್ಜುನನ ಧನುಸ್ಸನ್ನೇ ಹಂಗಿಸಿದನು. "ಗಾಂಡೀವವನು ಹರಿಗೆಕೊಡು, ಸಾರಥಿಯಾಗು ನೀನು" ಎಂದನು. ಪಾರ್ಥನು ಗಾಂಡೀವವನ್ನು ಹಾಸ್ಯ ಮಾಡಿದವರನ್ನು ಕೊಂದುತೀರುವೆನೆಂಬ ಶಪಥವನ್ನು ಮಾಡಿದ್ದನು, ಹಿಂದೆ. ಅದು ನೆನಪಿಗೆ ಬಂದು ಧರ್ಮರಾಯನ ಮೇಲೆ ಅರ್ಜುನನು ಕೈಮಾಡಲು ಮುನಿದು ಹಾತೊರೆದಾಗ ಕೃಷ್ಣನು ಅವನನ್ನು ಸಮಾಧಾನಮಾಡಿ ಹಿಂದಕ್ಕೆ ಕಳುಹಿಸಿದನು.

ಕರ್ಣಾರ್ಜುನರ ಕಾಳಗ ಈ ಪರ್ವದಲ್ಲಿ ಕಾಣಬರುವ ಕರುಣರಸ ಪ್ರವಾಹ. ಇವರಿಬ್ಬರ ವೀರಪ್ರದರ್ಶನ ಕುಮಾರವ್ಯಾಸನ ವಾಣಿಯಲ್ಲಿ ಬಹು ರಸವತ್ತಾಗಿ ಚಿತ್ರಗೊಂಡಿದೆ. ಅರ್ಜುನನ ಬಾಣಘಾತದಿಂದ ಕರ್ಣನ ತೇರು ಒಂದು ಯೋಜನದವರೆಗೆ ತಿರ್ರನೆ ತಿರುಗಿತು. ಕರ್ಣನು ಅರ್ಜುನನ

ಮೇಲೆ ಬಾಣ ಬಿಟ್ಟಾಗ ಅರ್ಜುನನ ತೇರು ಒಂದು ಬಿಲ್ಲಿನಷ್ಟು ಹಿಂದಕ್ಕೆ ಹೋಯಿತು. ಇದನ್ನು ಕಂಡು ಕೃಷ್ಣನು ಕರ್ಣನನ್ನು ಹೊಗಳಿದನು. ತಾನು ಕರ್ಣನ ತೇರನ್ನು ಯೋಜನದವರೆಗೆ ಹಿಂಗಿಸಿದರೂ ಸುಮ್ಮನಿದ್ದ ಕೃಷ್ಣನು ಈಗ ಕರ್ಣನನ್ನು ಹೊಗಳುವುದನ್ನು ಕೇಳಿ ಅರ್ಜುನನಿಗೆ ಅವಮಾನವಾದಂತಾಯಿತು. ಅವನು ತನ್ನ ಆಯುಧವನ್ನು ಕೆಳಗಿಟ್ಟುಬಿಟ್ಟನು. ಆಗ ಕೃಷ್ಣನೇ ಅವನನ್ನು ಸಮಾಧಾನ ಮಾಡಿ, "ಬಸುಱೊಳಗೆ ಬ್ರಹ್ಮಾಂಡ ಕೋಟಿಯ ಮುಸುಕಿಕೊಂಡಿಹ ನಾ ಸಹಿತ, ಮೇಲೆಸವ ಸಿಂಧದ ಹನುಮ ಸಹಿತ, ಈ ದಿವ್ಯಹಯಸಹಿತ, ಎಸುಗೆಯಲು ತೊಲಗಿಸುವ ಕರ್ಣನ ಅಸಮಸಾಹಸ ಹೆಚ್ಚಲ್ಲವೇ?" ಎಂದು ಕೇಳಿದನು. ಅರ್ಜುನನಿಗೆ ಸಮಾಧಾನವಾಗಿ ಮತ್ತೆ ವೀರರ ಕಾಳಗ ಮುಂದುವರಿಯಿತು; ಅಸ್ತ್ರಪ್ರತ್ಯಸ್ತ್ರಗಳ ಸುರಿಮಳೆಯಾಯಿತು.

ಕರ್ಣನು ಸರ್ಪಾಸ್ತ್ರವನ್ನು ಬಿಲ್ಲಿಗೆ ಹೂಡಿದನು. ಅದರ ರೌದ್ರವನ್ನು ಕಂಡು ಕೌರವನಿಗೆ ರೋಮಾಂಚವಾಯಿತು. ಶಲ್ಯನೂ ಕೂಡ ಕರ್ಣನನ್ನು ಹೊಗಳಿ ಒಂದು ಸೂಚನೆಯನ್ನಿತ್ತನು. "ಕೊರಳಿಗೊಡ್ಡಲು ಪೊಳ್ಳುಮಾಡಿದ ಸರಳು ಮಕುಟವನು ತಾಗುವುದು ಮೇಣುರಕೆ ತೊಟ್ಟರೆ ಕೊಯ್ವುದೀಗಳೆ ಕೊರಳನರ್ಜುನನ." ಈ ಪಥ್ಯವಚನವನ್ನು ಕರ್ಣನು ಸ್ವೀಕರಿಸಲಿಲ್ಲ. "ಒಂದು ಶರಸಂಧಾನ, ನಾಲಗೆಯೊಂದು ನಮ್ಮಲಿ ಕುಟಿಲವಿದ್ಯವನೆಂದು ಕಂಡ್ಯೆ ಶಲ್ಯ" ಎನ್ನುತ್ತ ಕರ್ಣ ಬಾಣವನ್ನು ಬಿಟ್ಟನು. ಪಾರ್ಥನ ತೇರಿನಲ್ಲಿದ್ದ ಕೃಷ್ಣನು ಉರಗಾಸ್ತ್ರದ ಪ್ರಭಾವವನ್ನು ವಿಫಲಮಾಡುವ ಉದ್ದೇಶದಿಂದ ತೇರನ್ನು ಐದಂಗುಲದಷ್ಟು ಭೂಮಿಯಲ್ಲಿ ನೆಡಿಸಿದನು. ಉರಗಾಸ್ತ್ರವು ಅರ್ಜುನನ ಕಿರೀಟವನ್ನು ಬಡಿದು ಅದರ ವಜ್ರದ ಮಾಣಿಕ್ಯದ ಹರಳುಗಳನ್ನು ಚೆಲ್ಲಾಪಿಲ್ಲಿಯಾಗಿಸಿತು. ಆ ಬಾಣವು ಮತ್ತೆ ಕರ್ಣನ ಬಳಿಗೆ ಬಂದು, "ತೊಡುತೊಡಿನ್ನೊಮ್ಮೆ ಶಿವನ ಮಱೆಯನು ಹೊಗಲಿ, ತಿವಿವೆ ಪಾರ್ಥನನು" ಎಂದು ಬೇಡಿಕೊಂಡಿತು. ಕರ್ಣನು ಸರ್ಪಾಸ್ತ್ರದ ಈ ವಿಚಿತ್ರ ವರ್ತನೆಗೆ ಆಶ್ಚರ್ಯಪಟ್ಟು ಅದರ ಕಥೆಯನ್ನು ಕೇಳಿದನು. ಬಳಿಕ ತಾನು "ಲೋಗರ ಮಱೆಯಲರಿಗಳ ಗೆಲುವು"ನಲ್ಲವೆಂದೂ ಆ ಬಾಣವನ್ನು ಮತ್ತೆ ತೊಡುವುದಿಲ್ಲವೆಂದೂ ಹೇಳಿಬಿಟ್ಟನು. ಶಲ್ಯನೂ ಮತ್ತೆ

ಹೇಳಿನೋಡಿದನು. ಅವನ ಬುದ್ಧಿವಾದವೂ ವ್ಯರ್ಥವಾದಾಗ ಶಲ್ಯನು ವಾಘೆಯನ್ನು ಬಿಸಾಡಿ ರಥದಿಂದ ಭೂಮಿಗೆ ಧುಮುಕಿ ಹೊರಟುಹೋದನು.

ಇನ್ನು "ಕರ್ಣಾಮೃತದ ಮಳೆಗಾಲ ಮಾದು ವಿಲೋಚನದ ಮಳೆಗಾಲವಾಯ್ತು." ಮತ್ತೆ ಪಾರ್ಥ ಕರ್ಣರ ಕಾಳಗಕ್ಕೆ ಹುರುಪು ಹುಟ್ಟಿತು. ಈ ಸಮಯದಲ್ಲಿಯೇ ಕರ್ಣನ ತೇರು ರಣರಂಗದ ರಕ್ತದ ಕೆಸರಿನಲ್ಲಿ ಹೂತುಹೋಯಿತು. ಇದನ್ನು ಕಂಡು ಕರ್ಣನು "ನಿರ್ಭಾಗಧೇಯನು ರಾಯನಕಟಾ" ಎಂದು ಮರುಗಿದನು. ಅವನು ಅರ್ಜುನನನ್ನು ಕುರಿತು ಅರೆಗಳಿಗೆ ತಡೆಯುವಂತೆ ಹೇಳಿ, ತೇರಿನ ಗಾಲಿಯನ್ನೆತ್ತಲು ಮಂಡಿಯೂರಿ ಕುಳಿತನು.

ದನುಜರಿಪುವಾದ ಕೃಷ್ಣನು ಅರ್ಜುನನನ್ನು ಚಾವಟಿಯಿಂದ ತಿವಿದು "ಎಸು ಮರಳೆ ಗಾಂಡೀವಿ, ಅಪತ್ತಿನಗಿದಾಗಲಿ ಹಗೆಯ ಗೆಲುವುದು ವಸು ಮತೀಶರ ನೀತಿ, ತೊಡು ತೊಡು ದಿವ್ಯ ಮಾರ್ಗಣವ. ವಿಷಮ ವೀರನು ರಥವ ಮೇಳಾಪಿಸದ ಮುನ್ನವೆ ಹಜೀವ ನೆನೆ. ಸ್ಮರಿಸಿದ ಬಳಿಕೀ ಕರ್ಣ ಕೈಕೊಂಬನೆ ತ್ರಿಯಂಬಕನ!" ಎಂದು ಬುದ್ಧಿವಾದವನ್ನು ಹೇಳಿದನು. ಆದರೆ ಏಕೋ, ಏನೋ ಅರ್ಜುನನು "ಕರುಣಾಲತಾಂಗಿಯ ತೆಕ್ಕೆಯಲ್ಲಿ ಸಿಕ್ಕಿದನು." ಕರ್ಣನನ್ನು ಕೊಲ್ಲುವುದು ಅವನಿಗೆ ಬೇಡವಾಯಿತು; "ಕರ್ಣನಾರು?" ಎಂದು ವಿಧವಿಧವಾಗಿ ಪ್ರಶ್ನೆಮಾಡಿದನು. "ಕರ್ಣನು ಕೊಲ್ಲುವವನಲ್ಲ" ಎಂದು ಹಟ ಹಿಡಿದನು. ಕೃಷ್ಣನು ಅರ್ಜುನನ ಮರ್ಮವನ್ನು ಮಿಡಿಯುವಂತೆ "ಕೊಲ್ಲನೇ ಅಭಿಮನ್ಯುವನು? ಮಾರುತಿಯ ಕೊರಳನು ಬಿಲ್ಲಿ ಕೊಪ್ಪಿನೊಳೆಳೆಯನೇ?" ಎಂದು ಪ್ರಶ್ನಿಸಿ ನಿಜಮಾಯೆಯನ್ನು ಬೀಸಿದನು. ಕೃಷ್ಣನ ಮಾಯೆಯ ಮುಂದೆ ನಿಲ್ಲುವವರಾರು?

ಅರ್ಜುನನು ಬಿಲ್ಲು ಹಿಡಿದು ಸಿದ್ಧವಾಗುವುದರಲ್ಲಿ ಕರ್ಣನೂ ತೇರನ್ನು ಯುದ್ಧಕ್ಕೆ ಸಿದ್ಧಮಾಡಿದನು. ಕೃಷ್ಣನ ಮಾಯೆ ಕರ್ಣನ ಮೇಲೆಯೂ ಕೆಲಸಮಾಡದೆ ಇರಲಿಲ್ಲ. ತನ್ನ ಹೃದಯಾಂಬುಜದ ಮಧ್ಯದಲ್ಲಿಯೂ ಫಲಗುಣನ ಮಣಿರಥದಗ್ರಭಾಗದಲ್ಲಿಯೂ ಒಬ್ಬನೇ ಹರಿಯಿರುವುದನ್ನು ನೆನೆದು "ನಿಜಪೆಚ್ಚರ ಸಮಾಧಿಯೊಳಿರ್ದನಾ ಕರ್ಣ." ಪರಮ ಕರುಣಾ

ಸಿಂಧುವಾದ ಕೃಷ್ಣನು ಕರ್ಣನಿಗೆ ನಿಜಮೂರ್ತಿಯನ್ನು ತೋರಿಸಿ ಪ್ರೇಮದಲ್ಲಿ "ಮುಕುತಿಯ ಪದವನ್ನು" ಸೇವಿಸಿದನು. ಅರ್ಜುನನು ಅಂಜನ ಬಾಣವನ್ನು ತೆಗೆದು ಕರ್ಣನಿಗೆ ಗುರಿಯಿಟ್ಟು ಹೊಡೆದನು. ದುರ್ಯೋಧನನ ಬೆಳುಗೊಡೆ ನೆಲಕ್ಕೆ ಬೀಳುವಂತೆ ಕರ್ಣನ ತಲೆ ಭೂಮಿಗೆ ಬಿದ್ದು ಹೋಯಿತು. "ದ್ಯುಮಣಿ ಕರ್ಣದ್ಯುಮಣಿ ಸಹಿತ ಅಸ್ತಮಿ"ಸಿದನು. ಕೌರವನ ಮುಖಕಮಲ ಬಾಡಿತು. ಕರ್ಣನ ಬಾಳು ಕೊನೆಯಾಗಿ ಅವನ ಕೀರ್ತಿ ಶಾಶ್ವತವಾಯಿತು.

ದುಶ್ಯಾಸನ ವಧೆ

ಭಾರತದ ಕರ್ಣಪರ್ವದಲ್ಲಿ ವರ್ಣಿತವಾಗಿರುವ ದುಶ್ಯಾಸನ ವಧೆಯೊಂದು ಬೀಭತ್ಸ ಪ್ರಸಂಗ. ಅನೇಕ ವರುಷಗಳ ದ್ವೇಷವನ್ನು ಮನಸ್ಸಿನಲ್ಲಿ ಹುದುಗಿಟ್ಟಿದ್ದ ಭೀಮನು ದುಶ್ಯಾಸನನೊಡನೆ ಯುದ್ಧದ ಅವಕಾಶ ಸಿಕ್ಕಿದಾಗ, ತನ್ನ ಪ್ರತಿಜ್ಞೆಯನ್ನು ನೆರವೇರಿಸಿ ದ್ವೇಷವನ್ನು ಸಾಧಿಸಿದ ಸನ್ನಿವೇಶ, ಇದು. ಸಂಜಯನು ಧೃತರಾಷ್ಟ್ರನಿಗೆ ಯುದ್ಧವನ್ನು ವರ್ಣಿಸುತ್ತ "ಧಾರುಣೀಪತಿ ಕೇಳು ನಿನ್ನ ಕುಮಾರರಲಿ ತೊಂಬತ್ತ್ರಯೆಂಟಜ ಪಾರುಖಾಣೆಯ ಲೆಕ್ಕ ಸಂದುದು . . . ಇಬ್ಬರ ಜೀವನವು ಮೇಲಿನ್ನು ಕೇಳು" ಎಂದು ಹೇಳುತ್ತಾನೆ. ಆ ಇಬ್ಬರಲ್ಲಿ ಒಬ್ಬ ದುಶ್ಯಾಸನ; ಮತ್ತೊಬ್ಬ ದುರ್ಯೋಧನ. ದುಶ್ಯಾಸನನ ವಧೆಯ ಪ್ರಸಂಗದಲ್ಲಿ ಭೀಮನ ಮಹಾಕ್ರೋಧದ ಚಿತ್ರವಿದೆ.

ದುಶ್ಯಾಸನನೂ ಹೇಡಿಯೇನಲ್ಲ. ಅವನೂ ಭೀಮನೂ ಬಿಲ್ಲುಬಾಣಗಳಲ್ಲಿ ಹೊಡೆದಾಡಿ, ತೃಪ್ತಿಯಾಗದೆ ಕತ್ತಿ ಹಿರಿದು ಹೊಯ್ದಾಡಿದರು. ಭೀಮನಿಗೆ ಹಿಂದಿನ ಜೂಜಿನ, ದ್ರೌಪದೀ ವಸ್ತ್ರಾಪಹರಣದ, ಕಥೆಗಳೆಲ್ಲ ನೆನಪಿಗೆ ಬಂದುವು. ದುಶ್ಯಾಸನನು ಇವರನ್ನು ಬೈದಿದ್ದುದೆಲ್ಲ ಮನಸ್ಸಿನಲ್ಲಿ ಎದ್ದು ಅವನನ್ನು ಕೆರಳಿಸಿದುವು. "ತೊತ್ತಲಾ ಪಾಂಚಾಲಿ! ನಾವ್ ನಿಮ್ಮತ್ತುಗಳಲಾ! ಹಿಂದೆ ಕಿಚ್ಚಿನ ತುತ್ತು ವಿಷದುಬ್ಬಟೆಗಳನು ನೆನೆ!" ಎನ್ನುತ್ತ ಭೀಮನು ದುಶ್ಯಾಸನನ ಮೇಲೆ ಬಿದ್ದನು; ಯುದ್ಧರಂಗದಲ್ಲಿದ್ದ

ವೀರರನ್ನೆಲ್ಲ-ಶತ್ರುಪಕ್ಷದವರಾದರೂ ಸರಿಯೆ, ತಮ್ಮ ಕಡೆಯುವರಾದರೂ ಸರಿಯೆ - ಕರೆದು ಕೈಲಾದರೆ ದುಶ್ಶಾಸನನನ್ನು ರಕ್ಷಿಸಿಕೊಳ್ಳುವಂತೆ ಸ್ಪರ್ಧೆಯನ್ನು ನೀಡಿದನು; ಅರ್ಜುನನನ್ನೂ ಬಿಡಲಿಲ್ಲ. ಈ ಆಹ್ವಾನವನ್ನು ಕೇಳಿ ಅರ್ಜುನನು ಭೀಮನ ಮೇಲೆಯೇ ಯುದ್ಧಕ್ಕೆ ಹೊರಟನು. ಆಗ ಶ್ರೀಕೃಷ್ಣನೇ ಭೀಮನ ಪರಾಕ್ರಮವನ್ನೂ ರೌದ್ರವನ್ನೂ ಅರ್ಜುನನಿಗೆ ವರ್ಣಿಸಿ "ನಾವಂಜುವೆವು ನಿರ್ವಹಿಸಬಹುದೇ ಕಾಲರುದ್ರನ ಕೆಣಕಿ ಕದನದಲಿ" ಎಂದು ಸಮಾಧಾನಮಾಡಬೇಕಾಯಿತು. ಅರ್ಜುನನಿಗೆ ಭೀಮನು ಭೂತಗಣಗಳೊಡನಿರುವ ಶಿವನಂತೆಯೆ ಕಂಡನು. ದುಶ್ಶಾಸನನನ್ನು ಕೊಂದು ಅಲ್ಲಿ ರಿಂಗಣಗುಣಿದನು ಭೀಮ; ದ್ರೌಪದಿಗೆ ಹೇಳಿಕಳುಹಿಸಿ ಅವಳಿಗೆ ದುಶ್ಶಾಸನನ ಇರವನ್ನು ತೋರಿಸಿದನು. ಅವಳು "ನಸುನಗುತ ಚರಣದ ಚಾರುನೇವುರವುಲಿಯಲೊದೆದಳು ಖಳನ ಮಸ್ತಕವ." ಅವಳ ಕೂದಲಿಗೆ ದುಶ್ಶಾಸನನ ರಕ್ತವನ್ನು ಸುರಿದು, ಅವನ ದಂತಶ್ರೇಣಿಯಿಂದ ಅದನ್ನು ಬಾಚಿ,ಅವನ ಕರುಳನ್ನು ಕಿತ್ತು ಅದಕ್ಕೆ ಮುಡಿಸಿ "ನುಡಿದ ನುಡಿ ಸಲೆ ಸಂದುದೇ!" ಎಂದು ದ್ರೌಪದಿಯನ್ನು ಸಮಾಧಾನ ಮಾಡಿದನು ಭೀಮ.

ಈ ಸನ್ನಿವೇಶವು ಭೀಮನ ಪ್ರೇಮಪೂರ್ಣ ರುದ್ರ ಭಯಂಕರ ವ್ಯಕ್ತಿತ್ವವನ್ನು ನಮ್ಮ ಕಣ್ಮುಂದೆ ಚಿತ್ರವತ್ತಾಗಿ ಕಟುತ್ತದೆ.

ಕರ್ಣನ ಪಾತ್ರನಿರೂಪಣೆಯಲ್ಲಿ ತೋರುವ ಒಂದು ಸಂದೇಹ

ಕರ್ಣನು ವೀರನೂ ಕೌರವನಿಗೆ ಕೃತಜ್ಞನೂ ಸತ್ಯವಂತನೂ ದಾನಿಯೂ ನಿಜ. ಆದರೆ ಕೃಷ್ಣನಿಗೆ ಆತನು "ನಿನ್ನೈವರನು ನೋಯಿಸೆನು" ಎಂದು ಆಶ್ವಾಸನೆಯನ್ನೇಕೆ ಕೊಟ್ಟನು: ಕುಂತಿ ಬಂದು ಕೇಳಿದಾಗ ತೊಟ್ಟ ಬಾಣವನ್ನು ತೊಡದಿರುವುದಕ್ಕೂ ತಮ್ಮಂದಿರನು ತಲೆಗಾಯುವುದಕ್ಕೂ ಏಕೆ ಒಪ್ಪಿಕೊಳ್ಳುತ್ತಾನೆ? ಇದಕ್ಕೆ ಸರಿಯಾಗಿ ಸರ್ಪಬಾಣವನ್ನು

ಮತ್ತೆ ತೊಡುವುದಿಲ್ಲ. ಕರ್ಣನಿಗೆ ಸೂರ್ಯನಿಂದ ಬಂದ ಎಚ್ಚರಿಕೆಯೊಂದಿದೆ. ಸೂರ್ಯನು ಪ್ರತ್ಯಕ್ಷನಾಗಿ ತಾಯಿಯ ಮಾತಿಗೆ ಸೋಲ ಹೋಗಬೇಡ ಎಂದು ಎಚ್ಚರಿಸಿದ್ದಾನೆ. ಶಸ್ತ್ರಗಳನ್ನು ತರಿದು ತನ್ನ ದೇಹವನ್ನು ಬಳಿಕ ಒಪ್ಪಿಸುವುದಾಗಿ ಅವನ ಮನಸ್ಸಿನ ಬಯಕೆಯಿದೆ. ಹೀಗಿದ್ದೂ ಕರ್ಣನ ವ್ಯವಹಾರದಲ್ಲಿ ಅಚಾತುರ್ಯಗಳು ಏಕೆ ನಡೆದುವು? ಈ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. ಬಹುಶಃ ಕುಮಾರವ್ಯಾಸನು ಕೃಷ್ಣಮಹಿಮೆಯ ವರ್ಣನೆಯಲ್ಲಿ ತಲ್ಲೀನನಾಗಿರುವುದರಿಂದ ಕರ್ಣನನ್ನೂ ಒಬ್ಬ ಭಕ್ತನನ್ನಾಗಿಯೂ ಕೃಷ್ಣನ ನಾಟಕದ ಪಾತ್ರಧಾರಿಯನ್ನಾಗಿಯೂ ಚಿತ್ರಿಸಿದ್ದಾನೆಂದು ಸಮಾಧಾನಪಟ್ಟುಕೊಳ್ಳಬಹುದೇನೋ? ಸಂಸ್ಕೃತ ಭಾರತಕ್ಕೂ ಕುಮಾರವ್ಯಾಸ ಭಾರತಕ್ಕೂ ಈ ಪ್ರಸಂಗದಲ್ಲಿರುವ ವ್ಯತ್ಯಾಸಗಳನ್ನು ಪರಿಶೀಲಿಸುವುದೂ ಒಂದು ಸ್ವಾರಸ್ಯವಾದ ಅಭ್ಯಾಸವಾಗುತ್ತದೆ.

ಕರ್ಣನ ಕಥೆ ಕರುಣರಸಪೂರ್ಣವಾದುದು. ಅವನ ವ್ಯಕ್ತಿತ್ವ ಅಸಾಧಾರಣವಾದುದು. ಯಾವ ಸಂದೇಹ ತಲೆದೋರಿದರೂ, ಆ ಸೂರ್ಯಸನ್ನಿಭ ಪ್ರಕಾಶದೆದುರಿನಲ್ಲಿ ಅದು ಮರೆಯಾಗಿ ಹೋಗುತ್ತದೆ. ಕರ್ಣನ ಕಥೆಯನ್ನು ಓದುವಾಗ ಆತನ ಪರಮಾದ ಆತ್ಮೀಯತೆಯಿಂದ ಕಣ್ಣೀರು ಕೋಡಿವರಿದು, ನಮ್ಮ ಮನಸ್ಸು ಪಾವನವಾಗಿ, ಭಕ್ತಿಯನ್ನು ಆಲಿಂಗಿಸಿಕೊಳ್ಳುತ್ತದೆ. ಶ್ರೀಕೃಷ್ಣನಲ್ಲಿ ಸಾಯುಜ್ಯವನ್ನಪೇಕ್ಷಿಸಿ ಕೃತಾರ್ಥವಾಗುತ್ತದೆ. ಕವಿಗೆ ಇನ್ನೇನು ಹಿರಿಮೆ ಬೇಕು?

ಜಿ. ವೆಂಕಟಸುಬ್ಬಯ್ಯ

ಪರಿವಿಡಿ

ಕರ್ಣ ಕರ್ಣಾಮೃತ

[illegible]

ಪ್ರಾರ್ಥನಾ ಪದ್ಯಗಳು

ಶ್ರೀವನಿತೆಯರಸನೆ ವಿಮಲ ರಾ
ಜೀವ ಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನನಿಕರದಾತಾರ
ರಾವಣಾಸುರಮಥನ ಶ್ರವಣಸು
ಧಾವಿನೂತನಕಥನಕಾರಣ
ಕಾವುದಾನತ ಜಗವ ಗದುಗಿನ ವೀರನಾರಯಣ

ಹಲಗೆ ಬಳಪವ ಪಿಡಿಯದೊಂದ
ಗ್ಗಳಿಕೆ ಪದವಿಟ್ಟಳುಪದೊಂದ
ಗ್ಗಳಿಕೆ ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ
ಬಳಸಿ ಬರೆಯಲು ಕಂಠಪತ್ರದೊ
ಳುಲುಹುಗೆಡದಗ್ಗಳಿಕೆಯೆಂಬೀ
ಬಲುಹು ಗದುಗಿನ ವೀರನಾರಾಯಣನ ಕಿಂಕರಗೆ

ಅರಸುಗಳಿಗಿದು ವೀರ ದ್ವಿಜರಿಗೆ
ಪರಮ ವೇದದ ಸಾರ ಯೋಗೀ
ಶ್ವರರ ತತ್ವವಿಚಾರ ಮಂತ್ರಿಜನಕ್ಕೆ ಬುದ್ಧಿ ಗುಣ
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ

೧. ಇಂದು ಬರಹೇಳರ್ಜುನನ

ಕೇಳು ಜನಮೇಜಯ ಧರಿತ್ರೀ
ಪಾಲ ತೆಗೆದವು ಬಲವೆರಡು ನಿಜ
ಪಾಳಯಕೆ ಪರಿತೋಷಖೇದ ಸ್ತಿಮಿತ ವಿಕ್ರಮರು
ಕೋಲ ಗುರುವಿನ ಮರಣ ವಾರ್ತಾ
ಕಾಲಸರ್ಪನ ತಂದು ಸಂಜಯ
ಹೇಳಿಗೆಯನೀಡಾಡಿದನು ಧೃತರಾಷ್ಟ್ರನಿದಿರಿನಲಿ ೧

ಕೆತ್ತುಕೊಂಡಿರಲೇಕೆ ನೀವಿ
ನ್ನುತ್ತರಾಯಿಗಳೆಮ್ಮ ಭಾಗ್ಯದ
ಬಿತ್ತು ಹುರಿದರೆ ಬಿರುದ ಭಟರಿದ್ದೇನ ಮಾಡುವರು
ಮೆತ್ತಿದಂಬಿನ ಮೆಯ್ಯ ಭೀಷ್ಮನು
ಹೊತ್ತ ಕೈದುವ ಬಿಸುಟ ಕಳಶಜ
ನುತ್ತಮಿಕೆಗಳ ಮೆಱೆದರೆಂದನು ಕೌರವರ ರಾಯ ೨

ಜಗಿದ ತಿಮಿರದ ಕೆಚ್ಚು ಸೂರ್ಯನ
ಸೊಗಡು ಹೊಯ್ದರೆ ಮುರಿಯದೇ ಕಾ
ಳಗಕೆ ಕರ್ಣನ ಕೈದು ಭಂಡಾರಿಸಿದುದಿನ್ನೆಬರ
ತೆಗೆಸುವೆವು ನಾಳಿನಲಿ ನಿಮ್ಮಾಯು
ಮೊಗದ ದುಗುಡದ ದಡ್ಡಿಯನು ಮೈ
ದೆಗೆಯದಿರಿ ಕಲಿಯಾಗಿಯೆಂದನು ನೃಪತಿ ಸುಭಟರಿಗೆ ೩

ಜೀಯ ಸಂಶಯವಿಲ್ಲ ಗುರು ಗಾಂ
ಗೇಯರಳುಕಿದರೇನು ಕಲಿರಾ
ಧೇಯನೇ ವಜ್ರಾಂಗಿಯಲ್ಲಾ ನಮ್ಮ ಮೋಹರಕೆ
ರಾಯ ನೀ ಪತಿಕರಿಸಿದರೆ ಚ
ಕ್ರಾಯುಧನ ಚಾತುರ್ಯ ಕೊಳ್ಳದು
ಜೀಯ ಕರ್ಣನ ಮುಂದೆಯೆಂದುದು ನಿಖಿಳ ಪರಿವಾರ ೪

ಬೇಱಿ ತನಗಗ್ಗಳಿಕೆಯೋಲೆಯು
ಕಾಱತನವೇ ರಾಯ ಮನವೊಲಿ
ದೇಱಿಸಿದರೇಱುವುದು ದೊರೆ ಮನಮುರಿಯೆ ಕುಂದುವುದು
ತೋಱಿ ನುಡಿದರೆ ಭೀಷ್ಮದ್ರೋಣರು
ಜಾಱಿಸಿದ ರಣವೆಮಗೆ ಸದರವೆ
ದೂಱುವವರಾವಲ್ಲವೆಂದನು ಭಾನುಸುತ ನಗುತ ೫

ಸಾಕದಂತಿರಲಿನ್ನು ಘಟ್ಟಿಂ
ಗಾಕೆವಾಳರ ಮಾಡು ಸಾಕಾ
ಸ್ತ್ರೀಕಪುಣ್ಯರ ಮಾತದೇತಕೆ ಗುರುನದೀಸುತರ
ಸಾಕೆ ಸಲಹಿದೆ ಕರ್ಣನನು ಹುರು
ಡೇಕೆ ಗುಣದೊಳಗೀತ ಸೇನಾ
ನೀಕ ಭಾರದ ಹೊಱಿಗೆಗಹನೆಂದನು ಕೃಪಾಚಾರ್ಯ ೬

ಎಮ್ಮ ತೋಱಿಸಬೇಡ ಸುಖವಲಿ
ನಿಮ್ಮ ಚಿತ್ತಕೆ ಬಹುದ ಮಾಡುವು
ದೆಮ್ಮ ಹೃದಯ ವ್ಯಥೆಯು ನಾವಿನ್ನಾಡಿ ಫಲವೇನು
ಎಮ್ಮ ಪುಣ್ಯದ ಬೆಳೆಗಳೊಣಗಿದ
ಡವ್ವ ಮಾಡುವುದೇನು ಕರ್ಣನು
ನಮ್ಮದಳವಾಯೆಂದನಶ್ವತ್ಥಾಮನರಸಂಗೆ ೭

ಅರಳಿತರಸನ ವದನ ಶಕುನಿಯ
ಹರುಷಮಿಗೆ ದುಶ್ಯಾಸನಂಗು
ಬ್ಬರಿಸೆ ರೋಮಾವಳಿ ವಿಕರ್ಣಾದಿಗಳ ಮನ ನಲಿಯೆ
ಕುರುರಾಜ ಕೃಪ ಕೃತವರ್ಮ ಶಲ್ಯಾ
ದ್ಯರಿಗೆ ಹೂಸಕದೊಲಹು ವಿರಿಗಿಲಾ
ಯ್ತಿರುಳು ಕರ್ಣಗೆ ಪಟ್ಟವಾಯಿತು ಭೂಪ ಕೇಳೆಂದ ೮

ಮಗನು ದಳಪತಿಯಾದ ಗಡ ಕಾ
ಳೆಗವ ನೋಡುವೆನೆಂಬವೊಲು ಜಗ
ದಗಲದಲಿ ನಿಜರುಚಿ ಕಡಿತವಿಕ್ಕಿತು ತಿಮಿರವನದೊಳಗೆ
ಹೊಗರು ಕುವಳಯಕಳಿಯೆ ಸೊಂಪಿನ
ನಗೆ ಸರೋರುಹಕೊಗೆಯೆ ವಿರಹದ
ಧಗೆ ರಥಾಂಗದೊಳಿಳಿಯೆ ರವಿಯುದಯಾಚಲಕೆ ಬಂದ ೯

ಇಂದು ಬರಹೇಳರ್ಜುನನ ರಣ
ವಿಂದಲೇ ಭೀಮಂಗೆ ಮನದಲಿ
ಕಂದುಕಸರಿಕೆ ಬೇಡ ಕಾದಲಿ ಧರ್ಮನಂದನನು
ಹಿಂದೆ ನಂಬಿಸಿ ಭೀಷ್ಮ ಗುರುವನು
ಕೊಂದ ಗೆಲುವಿನಲುಬ್ಬಬೇಡೆಮ
ಗಿಂದು ದಳವಾಯ್ ಕರ್ಣನೆಂದುದು ಭಟ್ಟರು ಬೊಬ್ಬಿರಿದು ೧೦

ಎರಡು ದಳ ಗಂಟಿಕ್ಕಿದುದು ನೆಲ
ಬಿರಿಯೆ ಬಿರಸಿತು ಹೊಯ್ಲುರುಳುವ
ಶಿರದ ಬೀಳುವ ಭಟ್ಟರ ಮುಡಿಗೆಡೆವಾನೆ ಕುದುರೆಗಳ
ಪರಿವಿಡಿಯದಂತಿರಲಿ ದೊರೆ ದೊರೆ
ಯುರವಣಿಸಿ ಹಳಚಿದರು ಪಾಂಡವ
ರರಸ ಕೌರವರರಸರೆಚ್ಚಾಡಿದರು ಮೂದಲಿಸಿ ೧೧

ರಾಯರಿಬ್ಬರ ಮನದ ತಿಮಿರದ
ತಾಯಿಮನೆಯೆಂಬವೊಲು ತಾ ಪೂ
ರಾಯದಲಿ ಸುಂಗಿದುದು ಕತ್ತಲೆ ನಿಮಿಷದಲಿಜಗವ
ರಾಯ ಮೋಹರ ತೆಗೆದವೆರಡು ವಿ
ಡಾಯಿಯಲಿ ಬಹುವಿಧದ ವಾದ್ಯನ
ನಾಯಿ ಮಿಗೆ ನಲವಿನಲಿ ಬಂದರು ಪಾಳೆಯಂಗಳಿಗೆ ೧೨

೨. ಕರ್ಣನ ಕಾಳೆಗಕೆ ನಾವ್ ಸಾರಥಿಗಳೇ ?

ಬಂದುದಿರುಳೋಲಗಕೆ ರಾಯನ
ಮಂದಿ ದಳಪತಿ ಶಕುನಿ ಕೃಪ ಗುರು
ನಂದನಾದಿ ಪ್ರತತಿ ಸಚಿವ ಪಸ್ತಾಯಿತರು ಸಹಿತ
ಇಂದಿನಾಹವದೊಳಗೆ ಕುಂತೀ
ನಂದನರ ಬೊಬ್ಬಾಟ ಬಲುಹಾ
ಯ್ತೆಂದು ಮೆಲ್ಲನೆ ಮಾತ ತೆಗೆದನು ಕೌರವರ ರಾಯ ೧

ಬಲುಹಲೇ ಬಳಿಕೇನು ಹಗೆಯ
ಗ್ಗಳಿಕೆ ಮೆಱೆಯದೆ ಮುರ ವಿರೋಧಿಯ
ಬಲುಹ ಹೇಳಾ ಪಾರ್ಥನೆಂಬವನಾವ ಮಾನಿಸನು
ಬಲುಹು ಸಾರಥಿಯಿಂದ ರಿಪುಗಳ
ಗೆಲವು ಸಾರಥಿಯಿಂದ ಸಾರಥಿ
ಯೊಲಿದಡೇನೇನಾಗದೆಂದನು ಭೂಪತಿಗೆ ಕರ್ಣ ೨

ತೃಣಕೆ ಕೊಂಬೆನೆ ಫಲುಗುಣನ ಕಣೆ
ಗಿಣೆಯನಾ ಸಾರಥಿಯ ಕೈ ಮೈ
ಗುಣವಲೇ ಗುರುವಾಯಿಗೆಡಿಸಿತು ನಮ್ಮ ಮೋಹರವ
ರಣದೊಳಿನಗತಿಶಯದ ಸಾರಥಿ
ಮಣಿದನಾದಡೆ ನಾಳೆ ಹೆಣದಾ
ತಣವಲುಣಬಡಿಸುವೆನು ಜಂಬುಕ ಕಾಕ ಸಂತತಿಗೆ ೩

ಲೇಸನಾಡಿದೆ ಕರ್ಣ ನಿನಗಿ
ನ್ನೈಸಲೇ ಸಾರಥಿಯು ಕೊಱತೆ ಸು
ರಾಸುರರ ಥಟ್ಟಿನಲಿ ತೊಡಕುವರಾರು ನಿನ್ನೊಡನೆ
ಈ ಸಮಸ್ತ ನೃಪಾಲವರ್ಗದೊ
ಳಾಸೆಯಾರಲಿ ಸೂತಕರ್ಮಾ
ಭ್ಯಾಸಿಯನು ಜೋಡಿಸುವೆನೆಂದನು ಕೌರವರ ರಾಯ ೪

ಹಲವು ಮಾತೇನರಸ ನುಡಿದುದು
ಫಲಿಸಲರಿಯದು ದೈವಗತಿಯಲಿ
ಫಲಿಸಿತಾದಡೆ ರಾಜ್ಯಲಕ್ಷ್ಮಿಗೆ ಸೂಳೆತನವಹುದೆ
ಸುಲಭವಾದಡೆ ಮಾದ್ರರಾಜನ
ತಿಳುಹಿ ಸೈರಿಸು ರಿಪುಗಳೈವರ
ತಲೆಗೆ ಹಾಯಿಕು ಸಂಚಕಾರವನೆಂದನಾ ಕರ್ಣ ೫

ಹರಿದರರಸಾಳುಗಳು ರಾಯನ
ಬರವನೀತಂಗಱುಹಿದರು ಕಡು
ಹರುಷದಲಿ ಕಲಿಶಲ್ಯ ಹೊಱವಂಟನು ನಿಜಾಲಯವ
ಅರಸು ಮಕ್ಕಳ ವಜ್ರಮಣಿಯಾ
ಭರಣ ಕಿರಣ ಸ್ತೋಮದೀಪ
ಸ್ಫುರಿತ ಜನಮಧ್ಯದಲಿ ಕಂಡನು ಕೌರವೇಶ್ವರನ ೬

ಅಂದಣವನಿಳಿದರಸನಾತಗೆ
ವಂದಿಸಿದನಾ ಮಾದ್ರಪತಿ ಸಾ
ನಂದದಲಿ ತೆಗೆದಪ್ಪಿ ತಂದನು ರಾಜಮಂದಿರಕೆ
ಇಂದಿದೇನಿದ್ದಿದ್ದು ನೀನೇ
ಬಂದ ಕಾರ್ಯ ವಿಶೇಷವೇನುಂ
ಟೆಂದು ಕೌರವ ರಾಯನನು ಬೆಸಗೊಂಡನಾ ಶಲ್ಯ ೭

ಏನ ಹೇಳುವೆ ನಮ್ಮ ಪುಣ್ಯದ
ಹಾನಿಯನು ನುಗ್ಗಾಯ್ತು ಬಲ ಸು
ಮ್ಮಾನ ಬೀತುದು ಬಿರುದರಿಗೆ ಕಾಲೂಱಿತಪಮಾನ
ಜೈನದೀಕ್ಷೆಯ ಹಿಡಿದುದೆನ್ನ ಸ
ಮಾನ ಸುಭಟರು ಜಯ ಸಿರಿಯ ಸಂ
ಧಾನ ಮುರಿದುದು ಮಾವ ನಿಮಗಜ್ಞಾತವೇನೆಂದ ೮

ಬಱಿದೆ ಬೋಳೈಸದಿರು ಕಾರ್ಯದ
ಹೊಱಗೆಯೇನದ ಹೇಳು ಮೇಗಡೆ
ಮೆಱೆವವರು ನಾವಲ್ಲ ನುಡಿಯಾ ಬಯಲ ಡೊಂಬೇಕೆ
ಅಱುಹು ಕೇಳುವೆನೆನಲು ಶಲ್ಯನ
ಬಿಱುನುಡಿಗೆ ಬೆಚ್ಚದೆ ಮಹೀಪತಿ
ಯಱುವು ತಪ್ಪದೆ ಬಿನ್ನವಿಸಿದನು ಮಾದ್ರರಾಜಂಗೆ ೯

ಮಾವ ಸಾರಥಿಯಾಗಿ ಕರ್ಣನ
ನೀವು ಕೊಂಡಾಡಿದಡೆ ಫಲುಗುಣ
ನಾವು ಪಾಡು ಸುರಾಸುರರ ಕೈಕೊಂಬನೇ ಬಳಿಕ
ಆವುದೆಮಗಭ್ಯುದಯವದನೀ
ವಾವ ಪರಿಯಲಿ ಮನ್ನಿಸಿದಡರಿ
ಜೀವ ಕೌರವ ವಂಶವೇ ಸಪ್ರಾಣಿಸುವುದೆಂದ ೧೦

ಖೂಳನೆಂಬೆನೆ ನೀ ಸಮಸ್ತಕ
ಳಾಳಿ ನಿಪುಣನು ಬಾಲನೆಂಬೆನೆ
ಮೇಲೆ ಪಲಿತದ ಜೀಡು ಬಿಟ್ಟುದೆ ತಳಿತ ತನುವಿನಲಿ
ಹೇಳು ಹೇಳಿನ್ನೊಮ್ಮೆ ನುಡಿನುಡಿ
ಕೇಳುವೆನು ಕಿವಿಯಾರೆ ಕರ್ಣನ
ಕಾಳೆಗಕೆ ನಾವ್ ಸಾರಥಿಗಳೇ ಶಿವಶಿವಾ ಎಂದ ೧೧

ಖೂಳನನು ಹಿಡಿತಂದು ಧರಣೀ
ಪಾಲರಲಿ ಸರಿಮಾಡಿ ರಾಜ್ಯದ
ಮೇಲೆ ನಿಲಿಸಿದೆ ಬಳಿಕ ಬಂದುದು ಖೂಳತನ ನಿನಗೆ
ಕೀಳು ಮೇಲಿನ ಸೀಮೆ ನಿನ್ನಲಿ
ಬೀಳುಕೊಂಡುದು ಸಾಕು ನಮಗಿ
ನ್ನಾಳುತನವೇಕೆನುತ ಧಿಮ್ಮನೆ ನಿಂದನಾ ಶಲ್ಯ ೧೨

ಒಡನೆ ನಿಂದನು ಸೆಱಗ ಹಿಡಿದವ
ಗಡಿಸಲೇಕಿನ್ನೆನುತ ಗುಣದಲಿ
ನುಡಿಸು ಕುಳ್ಳಿರಿಸಿದನು ಸಂತೈಸಿದನು ವಿನಯದಲಿ
ನುಡಿಗೆ ಕೋಪಿಸಲೇಕೆ ಮಾನಪ್ರೊಡ
ಬಡುವುದೇ ಕೈಕೊಂಬುದಲ್ಲದ
ಡೊಡೆಯರುಂಟೇ ನಿಮಗೆ ಎಂದನು ಕೌರವರಾಯ ೧೩

ನಿನ್ನ ಕೈಯಲಿ ಬರಲಿ ಸತ್ತಿಗೆ
ಯೆನ್ನ ಕೈಯಲಿ ಹೊಡೆಸು ಚಂಡಿಯ
ನಿನ್ನ ತಮ್ಮನ ಹೆಗಲಲಾಕನ ಹಡಪ ಹಾಯ್ಕಿರಲಿ
ನಿನ್ನ ಬಂಧುಗಳವನ ಬೇಂಟೆಯ
ಕಾನ್ನಿಗಳ ಹಿಡಿಯಲಿ ಸುಯೋಧನ
ನಿನ್ನ ಭಾಗ್ಯವನೊಡೆದು ಕಳೆ ಕೇಡುಪ್ರದಿಮಗೆಂದ ೧೪

ಮುರಹರನ ಸಮುಜೋಳಿ ನೀವಾ
ನರನ ಸಮುಗ್ಗೈ ಕರ್ಣನಿಂತಿ
ಬ್ಬರನು ನೀವಿಬ್ಬರು ವಿಭ್ರಾಜಿಸಿಗೆಲಪ್ರಜೀಸರಿದು
ಸುರರ ಕಾರ್ಯದಲಂದು ಸಾರಥಿ
ಸರಸಿಜೋದ್ಭವನಾಗನೇ ಎ
ನ್ನರಸುತನವಿಂದಳಿದುಬಿದ ನೀನುಳುಹಬೇಕೆಂದ ೧೫

ಗುರು ಪಿತಾಮಹರಿಂದ ಮೋಜಿತಿಯ
ಮುರಿದ ವಿಜಯವಧೂ ಕಟಾಕ್ಷವ
ತಿರುಹಿ ಹಾಯ್ಕುವ ಗಂಡನಾವನು ನೀವು ತಪ್ಪಿದಡೆ
ಗುರು ಕುಲೋದ್ಧಾರಕನು ಮಾದ್ರೇ
ಶ್ವರನೆನಿಪ ವಿಖ್ಯಾತಿ ಬಂದುದು
ಪರಿಹರಿಸದಿರು ಮಾವ ಎಂದೆಱಗಿದನು ಚರಣದಲಿ ೧೬

ಶಿವ ಶಿವಾ ನಿರ್ಬಂಧವಿದು ಕೌ
ರವನಲಾಯಿತೆ ಮದ್ರಮುಖ ಗಂ
ಧವನು ಕುಡಿಸುವ ಪರಿಯಲಾ ತುಂಬಿಗಳ ಸೆಜ್ಜೆವಿಡಿದು
ಅವನಿಪತಿಗಳ ಸೇವೆಯಿದು ಕ
ಷ್ಟವಲೆ ಮೊದಲಲಿ ಬಳಿಕ ನಾವಿ
ನ್ನವಗಡಿಸಲೇನಹುದು ಸಾರಥಿಯಾಪೆವೇಳೆಂದ ೧೭

ಸೂತಕುಲಸಂಭವನೆ ಭುವನ
ಖ್ಯಾತ ಕರ್ಣನು ಸಾಕಿದಾತನು
ಸೂತನಾದಡೆ ಮಾವ ಕೇಳನ್ವಯಕೆ ಹಳಿವುಂಟೆ
ಸ್ವಾತಿಯುದಕದೊಳಾದ ಮೌಕ್ತಿಕ
ವ್ರಾತಕಯ್ಯನೆ ಚಿಪ್ಪು ನಿಮಗಿ
ನ್ನೇತಕೀ ಸಂದೇಹ ರವಿಸುತ ಸೂತನಲ್ಲೆಂದ ೧೮

ನಿಮ್ಮ ವಿಜಯಶ್ರೀಯ ಕಡೆಗ
ಣ್ಣಿಮ್ಮ ಮುಖದಲಿ ಮುರಿದುದಾದಡೆ
ನಮ್ಮ ಕೊರತೆಯದೇಕೆ ಕರ್ಣಂಗೈ ಸೂತನಂದನನ
ನಮ್ಮ ಹೇಳಿಕೆ ಯಾವುದದನೀ
ತಮ್ಮ ಮೀಱಿದು ನಡೆದನಾದಡೆ
ನಮ್ಮ ವಾಘೆಯ ಬಿಳುಕೊಡುವೆವು ರಾಯ ಕೇಳೆಂದ ೧೯

೩. ಈಸು ನೀನರ್ಜುನನ ಪಕ್ಷಪಾತಿಯೋ ?

ಅರಸ ಕೇಳಭ್ಯುದಿತವಾದುದು
ಸರಸ ಕೈರವರಾಜಿ ಕೋಮಲ
ಸರಸಿರುಹ ವನವಾದುದಾಕ್ಷಣ ಸುರಭಿ ನಿರ್ಮುಕ್ತ
ಕಿರಣ ತೋಮರ ದಕ್ಷಿಣೋರು
ಸ್ಫುರಣ ತಿಮಿರ ಮೃಗೀ ಕದಂಬಕ
ತರಣಿ ನೂಕಿದನುದಯ ಶೈಲಕೆ ರತುನಮಯ ರಥವ ೧

ದಿನಗಣನೆ ಹದಿನೆಂಟು ಕೋಟಿಯ
ಕನಕವಂದಿನ ದಿನದಿ ಚೆಲ್ಲಿದ
ನನುಪಮಿತ ಧನರತುನ ಭಂಡಾರವನು ತೆಗೆ ತೆಗೆಸಿ
ಮನದಣಿಯೆ ಯಾಚಕರಿಗಿತ್ತುದ
ನೆನಗೆ ಬಣ್ಣಿಸಲಳವೆ ಕೇಳೈ
ಜನಪ ಕರ್ಣನದೇನ ನಿಶ್ಚಯಿಸಿದನೊ ಮನದೊಳಗೆ ೨

ರಾಯ ಕೇಳೈ ಬಳಿಕ ಕಲಿ ರಾ
ಧೇಯ ಬರುತಿರೆ ತೋಱಿದುತ್ಪಾ
ತಾಯತವನೇನೆಂಬೆನೈ ಶಿವ ಶಿವ ಮಹಾದೇವ
ವಾಯುಸದ ತಡೆ ಭೂಮಿ ಕಂಪ ನಿ
ಜಾಯುಂಧಗಳ ಕಿಡಿ ಗಜಾಶ್ವನಿ
ಕಾಯ ರಥವಾಜಿಗಳ ಕಂಬನಿ ಕಾಣಲಾಯ್ತೆಂದ ೩

ಒದಱಿದವು ನರಿ ಮುಂದೆ ಕರ್ಣನ
ಕುದುರೆಗಳು ಮುಗ್ಗಿದವು ಪರಿವೇ
ಷದಲಿ ಸಪ್ತಗ್ರಹದ ವಕ್ರತೆ ಸೂರ್ಯಮಂಡಲಕೆ
ಇದಿರಿನಲಿ ಬಿಱುಗಾಳಿ ಧೂಳಿಯ
ಕೆದರಿ ಬೀಸಿತು ನಿಖಿಳ ಬಲ ಮು
ಚ್ಚಿದುದು ಕಂಗಳನವನಿಪತಿ ಕಂಡನು ಮಹಾದ್ಭುತವ ೪

ತೃಣಕೆ ಕೊಂಬನೆ ಕರ್ಣನಿದನಾ
ರೆಣಿಸುವರು ದುಷ್ಕರ್ಮಶೇಷದ
ಋಣನಿಬದ್ಧರು ಕಂಡು ಮಾಡುವುದೇನು ಕೌರವರು
ರಣ ಮನೋರಾಗದಲಿ ದಳಸಂ
ದಣಿಯು ನಿಲಿಸಿದನತಿರಥರ ಲಾ
ಪಣೆಗೆಗೊಂಡನು ಕರ್ಣ ಪರಿವಾರಕ್ಕೆ ಕೈಮುಗಿದು ೫

ನೊಂದವರು ನಿಲಿ ಸ್ವಾಮಿ ಕಾರ್ಯಕೆ
ಹಿಂದುಗಳೆವರು ಮರಳಿ ಮನೆಗಳ
ಹಿಂದಣಾಸೆಯ ಹೇವ ಹಜುಕರಿಗಿಂದು ಮಹನವಮಿ
ನಿಂದರೊಳ್ಳಿತು ನೃಪನ ದೆಸೆಯಲಿ
ಕಂಡು ಕಳಿಯುಳ್ಳವರು, ಕಾಳಿಗ
ವಿಂದು ಬಿಟ್ಟಿತು ಬೀಳುಕೊಂಬುದು ಭೀತಿ ಬೇಡೆಂದ ೬

ಓಡಿ ನಾಚಿಸುವರು ನಿಲಿ ರಣ
ಖೇಡರೀಗಳೆ ಮರಳಿ ಮನವ
ಲ್ಲಾಡಿ ಮರುಗುವರೇಳಿ ಮಣದಲಾನ ಫಲಸಿದ್ಧಿ
ಕೊಡುಗಲಕರು ನಿಲ್ಲಿಯಿಹಪರ
ಗೇಡಿಗರು ಹೆಜಸಾರಿ ಗುಣದಲಿ
ಬೇಡಿಕೊಂಬೆನು ಖಾತಿಗೊಳ್ಳೆನು ಹೋಗಿ ನೀವೆಂದ ೭

ಸಂದ ಸುಭಟರು ಬನ್ನಿ ಸ್ವರ್ಗದ
ಬಂದಿಕಾಱರು ಬನ್ನಿ ಮನದಿಂ
ಮುಂದೆ ಹೆಜ್ಜೆಯ ತವಕಿಗರು ಬಹುದೆನ್ನ ಸಂಗಾತ
ನೊಂದಡುಬ್ಬುವರಿತ್ತ ಬನ್ನಿ ಪು
ರಂದರನ ಸರಿಗದ್ದುಗೆಗೆ ಮನ
ಸಂದವರು ಹೊಗಿ ರಣವನೆಂದನು ಕರ್ಣ ನಿಜಬಲಕೆ ೮

ನರನ ತೋಱಿಸಿದವಗೆ ಶತ ಸಾ
ವಿರದ ಪಟ್ಟಣವರ್ಜುನನ ಮೋ
ಹರವಿದೇ ಎಂದವಗೆ ಕೊಡುವೆನು ಹತ್ತು ಸಾವಿರವ
ನರನ ತೆರಳಿಚಿ ತಂದು ತನ್ನೊಡ
ನೆಱಿಹಿದಗೆ ನೂಱಾನೆ ಹಯ ಸಾ
ವಿರದ ಪಳಿತ್ರವ ಬರಸಿ ಕೊಡುವೆನು ರಾಯನಾಣೆಂದ ೯

ಅವನ ಮುಂದಲೆ ತನ್ನ ಕೈಯಲಿ
ಅವನಕೈಯಲಿ ತನ್ನ ಮುಂದಲೆ
ಅವನ ದೇಹದ ಘಾಯವೆನ್ನಯ ಘಾಯ ಜುಂಜಿಸುತ
ಅವನ ಖಡುಗದಲೆನ್ನ ಮೈ ನಾ
ಶಿವಿದ ಖಡ್ಗಕೆ ನರನ ಮೈ ಲವ
ಲವಿಸಲಡಿಮೇಲಾಗಿ ಹೊರಳ್ದರೆ ಧನ್ಯ ತಾನೆಂದ ೧೦

ಕೇಳು ಧೃತರಾಷ್ಟ್ರಾವನಿಪ ನಿ
ನ್ನಾಳ ಖರೆಯದ ನುಡಿಯನಾಲಿಸಿ
ಕೇಳಿದನು ಕಲಿ ಶಲ್ಯ ಬೆರಳಲಿ ಮೀಸೆಗಳ ಮುರಿದು
ಹೇಳು ಹೇಳಿನ್ನೊಮ್ಮೆ ಪಾರ್ಥನ
ಹೇಳಿ ತೋಱಿಸಲೇನ ಕೊಡುವೆ ನೃ
ಪಾಲಕನ ಪದದಾಣೆ ನುಡಿ ನುಡಿ ಕರ್ಣ ನುಡಿಯೆಂದ ೧೧

ಗರುಡನೆತ್ತಲು ಕೊಬ್ಬಿದೊಳ್ಳೆಯು
ಮಱಿಯದೆತ್ತಲು ಸಿಂಹವೆತ್ತಲು
ನರಿಗಳೆತ್ತಲು ದಿಗಿಭವೆತ್ತಲು ನಾಯಮಱಿಯೆತ್ತ
ನರನೊಡನೆ ಸಮದಂಡಿಯೇ ಜಗ
ವಱಿಯದೇ ನಿನ್ನಾತನಭ್ಯಂ
ತರವನಕಟಾ ಕರ್ಣ ಸುಡು ಸೀ ಕಷ್ಟ ಹೊಗೆಂದ ೧೨

ನರನ ತೋಱಿಸಿದವಗೆ ಶತ ಸಾ
ಸಿರವ ಸೂಸುವೆನೆಂದಲಾ ನಿ
ನ್ನರಸನನು ಗಂಧರ್ವರೆಳೆದೊಯ್ದಂದು ಗಗನದಲಿ
ಅರಸಿಯರು ಸಚಿವರು ಕುಮಾರರು
ಮೊಱೆಯಿಡಲು ಫಲುಗುಣನ ಬಿಡಿಸಿದ
ಪಱಿಯ ನೀ ನೆಱೆ ಕಂಡು ಮರೆವರೆ ಕರ್ಣ ಹೋಗೆಂದ ೧೩

ಈಸು ನೀನರ್ಜುನನ ಪಕ್ಷಾ
ವೇಶಿಯೇ ಶಿವ ಶಿವ ಮಹಾದೇ
ವೇಸು ನಂಬಿಹನೋ ಸುಯೋಧನನೇನ ಮಾಡುವೆನೋ
ಸೀಸಕವೆ ರವಿಕಾಂತವಾಗಿ ದಿ
ನೇಶನನು ಕೆಣಕಿದವೊಲಿಂದವ
ನೀಶನೀತನ ನಂಬಿ ಕೆಟ್ಟನು ಕೆಟ್ಟನಕಟೆಂದ ೧೪

ಮುನಿದೆನಾದರೆ ಕೋಟಿ ಕೃಷ್ಣಾ
ರ್ಜುನರ ಕೊಂದೆನೆ ರಣಕೆ ದುರ್ಯೋ
ಧನಗೆ ಮಲೆವರ ಮಾರಿ ಪಾಂಡವ ಮೇಘ ಪವಮಾನ
ತನಗೆ ಸರಿಯಾರಿಲ್ಲ ನೆಣಗೊ
ಬ್ಬಿನಲಿ ನುಡಿವೈ ನಿನ್ನ ಬಾಂಧವ
ಜನ ಸಹಿತ ಹಿಂಡುವೆನು ಹಿಂದಿಕ್ಕುವನ ತೋಱೆಂದ ೧೫

ಝಳದ ಝಾಡಿಗೆ ಹೆದಱು ಸೂರ್ಯನ
ನುಳುಹುವನೆ ಕಲಿರಾಹು ದಾವಾ
ನಳನ ದಳ್ಳುರಿಗಳುಕುವುದೆ ಜೀಮೂತ ಸಂದೋಹ
ಫಲುಗುಣನ ಕಣೆಗಿಣೆಯು ಪವನಜ
ನಳಬಳವ ಕೈಕೊಂಬ ಕರ್ಣನೆ
ತಿಳಿಯಲಾ ಮಾದ್ರೇಶ ನನ್ನಯ ವೃಥೆಯು ಕೇಳೆಂದ ೧೬

ಪರಶುರಾಮನ ಕಂಡು ಹೊಕ್ಕೆನು
ಗರುಡಿಯನು ದ್ವಿಜನೆಂದು ಕಲಿತೆನು
ವರಧನುರ್ವೇದವನು ಪಡೆದೆನು ದಿವ್ಯ ಮಾರ್ಗಣವ
ಸುರಪತಿಯು ಜೇಳಂಬವನು ವಿ
ಸ್ತರಿಸಲೇತಕೆ ವಜ್ರ ಕೀಟೋ
ತ್ಕರವ ಕಳುಹಿದನೆನ್ನ ತೊಡೆಗಳನುಗಿದವವು ಬಳಿಕ ೧೭

ಅರುಣ ಜಲ ಹೊನಲೆದ್ದು ಮಗ್ಗುಲ
ಲುರವಣಿಸಲಾ ರಾಮ ನಿದ್ರಾ
ಭರದಲಿದ್ದವನೆದ್ದು ನೋಡಿದನೆನಗೆ ಕಡುಮುಳಿದು
ಧರಣಿಸುರನೆಂದೆನ್ನ ಠಕ್ಕಿಸಿ
ಶರವ ಬೇಡಿದೆ ಕಾಳಿಗದೊಳೀ
ಶರ ನಿರರ್ಥಕವಾಗಲೆಂದನು ಶಾಪಹಸ್ತದಲಿ ೧೮

ಆದಡೀನೀ ದಿವ್ಯಾಸ್ತ್ರ ಕಾಳಿಗ
ಕೊದಗಲಱಿಯವು ಶಲ್ಯ ಪಾರ್ಥನ
ಸದೆವುದೇನರಿದಲ್ಲ ಕುರುಪತಿ ಹೀನ ಪುಣ್ಯನಲೆ
ಇದು ನಿದಾನವು ಬಾಣ ಮತ್ತಿನ
ಗೊದಗುವುವು ಬೇಱುಂಟು ನೃಪನ
ಭ್ಯುದಯವುಳ್ಳಡೆ ಗೆಲುವೆನಹಿತರನೆಂದನಾ ಕರ್ಣ ೧೯

ಅರಸನಭ್ಯುದಯವನು ನೀಸದ್ಧಿ
ಕರಿಸಿ ಗೆಲುವಡೆ ನಿನ್ನ ಹಂಗೇ
ಕರಿಗಳನು ಜಯಿಸುವರು ನಮ್ಮೀ ಛತ್ರಧಾರಕರು
ಸೊಸಹದಿರು ಸಾರತ್ತು ತಾಗಿತು
ಪರಶುರಾಮನ ಶಾಪಗಡ ಮರು
ಳರಸ ಕೌರವ ನಿನ್ನ ಸಾಕಿದನೆಂದನಾ ಶಲ್ಯ ೨೦

ನಿನಗೆ ಸಾರಥಿಯಾದ ಬಾಹಿರ
ತನವೆ ತಾನದು ಸಾಲದೇ ಬೇ
ಱಿನಗೆ ತಲೆಗುತ್ತಾವುದೆನುತವೆ ಬಿಸುಟು ಮಾಘೆಯುವ
ಮಾನಕತದ ಮೋಱಿಯಲಿ ತತ್ಸ್ಯಂ
ದನವನಿಳಿಯಲು ಭಂಡ ಫಡ ಹೋ
ಗೆನುತ ಖಡುಗವ ಜಡಿದು ನುಡಿದನು ಭಾನುಸುತ ಮುಳಿದು ೨೧

ಒಳಗೆ ಗಜಬಜವಾಯ್ತು ಶಲ್ಯನ
ಬಲು ಭಟರು ಮುಕ್ಕುಱಿಕಿದರು ಕುರು
ಬಲದ ಮೊಳೆಯಲ್ಲಾಡಿತಲ್ಲಿಯುದಲ್ಲಿ ಗುಜು ಗುಜಿಸಿ
ಬಳಿಕ ಕೌರವರಾಯ ಹರಿತಂ
ದಿಳಿದು ದಂಡಿಗೆಯಿಂದ ಗುಣದಲಿ
ತಿಳುಹಿ ಶಲ್ಯನ ಬೇಡಿಕೊಂಡನು ರಥಕೆ ಮರಳಿಚಿದ ೨೨

ನುಡಿದು ಕರ್ಣನ ತಿಳುಹಿ ಶಲ್ಯನ
ನೊಡಬಡಿಸಿ ರವಿಸುತನನಂಘ್ರಿಗೆ
ಕೆಡಹಿ ಮಾದ್ರೇಶನ ಮನಸ್ತಾಪವನು ನಱಿ ಬಿಡಿಸೆ
ಕಡಹದಂಬುಧಿಯಂತೆ ವಾದ್ಯದ
ಗಡಣ ಮೊರೆದವು ಪ್ರಳಯ ಸಮಯದ
ಸಿಡಿಲವೊಲು ಸೂಳೈಸಿದವು ನಿಸ್ಸಾಳ ಕೋಟಿಗಳು ೨೩

೪. ಕಾವನಾರೈ ಈ ಕರ್ಣ ಮುನಿದರೆ?

ಕ್ಷಮಿಸುವುದು ಗುರುಸೂನು ರಣವನು
ನಿಮಿಷ ಚಿತ್ತೈಸುವುದು ಶೌರ್ಯ
ಭ್ರಮಿತರೀ ಪಾಂಚಾಲರನು ಬಱಿಕೈದು ತೋಱುವೆನು
ದ್ಯುಮಣಿ ಪರಿಯಂತೇಕೆ ರಶ್ಮಿಗೆ
ತಿಮಿರವಿದಿರೇ ನೀವು ನೋಟಕ
ರೆಮಗೆ ರಣ ದೆಖ್ಖಾಳವೆಂದನು ಕರ್ಣ ಗುರುಸುತಗೆ ೧

ಉರಿಯ ಪೇಟೆಗಳಲಿ ಪತಂಗದ
ಸರಕು ಮಾಱದೆ ಮರಳುವುದೆ ನಿ
ಬ್ಬರದ ಬಿರುದಿನೊಳೀ ಮಹಾರಥರಾಜಿ ರವಿಸುತನ
ಕೆರಳಿಚಿದರೈ ಕೇಣವಿಲ್ಲದೆ
ಬೆರಸಿದರು ಜೇಸಱಿಸಿದರು ಹೊಡ
ಕರಿಸಿದರು ಹೊಯ್ದರು ವಿಘಾಡಿಸಿದರು ವಿಘಾತಿಯಲಿ ೨

ತೆರಳಿದನು ಸಹದೇವ ನಸು ಪೈ
ಸರಿಸಿದನು ನಕುಳನು ಶಿಖಂಡಿಯು
ಕರಣ ತಲೆಕೆಳಕಾಯ್ತು ಕಾಣೆನು ಸಾತ್ಯಕಿಯ ರಥವ
ಮುರಿವ ಕಂಡನು ಭೀಮ ದಾಗುಡದ
ಭರದಲಿದ್ದುದು ಮಿಕ್ಕ ಬಲ ನಾ
ಲ್ಕೆರಡೊ ನಾಲ್ಕೊಂದೋ ನಿಧಾನಿಸಲಱಿಯೆ ನಾನೆಂದ ೩

ತಱಿದ ಹೊಸ ಕಾವ್ರಿಗೆಯೊಳು ರಥ
ಹರಿಯಬಲ್ಲುದೆ ಕರ್ಣ ನಾವಿಂ
ದಱಿದೆವೈ ನೀ ನೆಟ್ಟನೋಲೆಯಕಾಱನೆಂಬುದನು
ಇಱಿತಕಿವರಾರಿದಿರಹರು ನಿ
ನ್ನರವಣೆಯನಾರಾನುವರು ಮ
ತ್ಸರವ ಬಿಸುಟೆನು ಪೂತು ರವಿಸುತ ಎಂದನಾ ಶಲ್ಯ ೪

ಆಲಿಕಲುಗಳು ಸಿಡಿಲ ಮಱಿಗಳ
ಮೇಲುವಾಯ್ದುವು ಗಡ ಯುಧಿಷ್ಠಿರ
ಸಾಳುತನದಲಿ ನಮ್ರ ಜಱಿದನು ಶಲ್ಯ ನೋಡೆನುತ
ಬೋಳೆಯಂಬೈವರಲಿ ರಾಯನ
ತೋಳನೆಚ್ಚನು ಜಡಿವ ಜೋಡಿನ
ಮೇಲೆ ಮುಱಿದವು ಬಾಣ ನೃಪ ಮಗುಳೆಚ್ಚನಿನಸುತನ ೫

ಬೇಗೆವರಿ ಬೆಳುದಿಂಗಳಲಿ ಸಮ
ಗೀಗ ತೋಱಿತಲಾ ಎನುತ ಮುಱಿ
ದಾಗಳೇ ಸಂಧಿಸಿದ ತನ್ನಯ ಹಯ ರಥಾದಿಗಳ
ಈಗಲಱಿಯಾದರೆಯೆನುತ ಕಿವಿ
ಗಾಗಿ ತೆಗೆದನು ನಿಶಿತ ಬಾಣವ
ತೂಗಿಬಿಟ್ಟನು ಬೀಳೆನುತ ಕಲಿಕರ್ಣ ಬೊಬ್ಬಿರಿದ ೬

ಅರಸ ಕೇಳಾಶ್ಚರಿಯವನು ರಿಪು
ಶರವನೆಡೆಯಲಿ ಕಡಿದು ರವಿಸುತ
ನುರವನೆಚ್ಚನು ಧರ್ಮನಂದನನೆಂಟು ಬಾಣದಲಿ
ಬಿರಿಯೆ ಬಲು ವಜ್ರಾಂಗಿ ಹಾಯ್ದುವು
ಗಱಿಸಹಿತಲುಚ್ಚಳಿಸಿ ನೆಲದಲಿ
ಸರಳು ನೆಟ್ಟವು ಕರ್ಣ ನನೆದನು ರುಧಿರಧಾರೆಯಲಿ ೭

ಹೊಟ್ಟನೂಕಿ ವೃಥಾಹವದ ಜಗ
ಜಟ್ಟಿನೀ ಹೊಱಕಾಲುಗೊಂಡರೆ
ಬಿಟ್ಟನೇ ತಾ ಕರ್ಣನಱಿಯಾ ಕಾಯ್ದುಕೊಳ್ಳೆನುತ
ಕಟ್ಟಳವಿಯಲಿ ವೈರಿರಾಯನ
ನಿಟ್ಟೆಳಿಸಿ ಮುಱಿಯೆನುತ ಬರಲಡ
ಗಟ್ಟಿ ತಡೆದರು ಮತ್ತೆ ಸಕಲ ಮಹಾರಥರು ಭಟನ ೮

ಮುಸುಕುವುದು ಮುಗಿಲೊಮ್ಮೆ ಸೂರ್ಯನ
ಮಸಕಮಿಗಿಲಹುದೊಮ್ಮೆ ಮೇಘ
ಪ್ರಸರಕೊಳಗಹನೊಮ್ಮೆ ರವಿ ತೋಱುವನು ಮತ್ತೊಮ್ಮೆ
ಅಸಮ ಸಮರದೊಳೀತನಾ ಪರಿ
ಮುಸುಳುವನು ತೋಱುವನು ತೊಡೆವನು
ಪೆಸೆಗೆಡಿಸುವನು ಬಳಿಕ ಮುಳಿಸಿನೊಳಾ ಮಹಾರಥರ ೯

ಕಾವನಾರೈ ಕರ್ಣ ಮುನಿದರೆ
ಜೀವದಲಿ ಕಕ್ಕುಲಿತೆಯೇಕೆ ಶ
ರಾವಳಿಗಳಿವಲಾ ಕರಾಗ್ರದೊಳುಗ್ರಧನುವಿಡಲಾ
ನಾವು ಸೂತನ ಮಕ್ಕಳುಗಳೈ
ನೀವಲೇ ಕ್ಷತ್ರಿಯರು ನಿಮಗೆಮ
ಗಾವುದಂತರವತಿಬಳರು ನೀವೆನುತ ತೆಗೆದೆಚ್ಚ ೧೦

ಅರಿಯ ಶರಹತಿಗಡ್ಡ ಪರಿಗೆಯ
ನರಸನಭಿಮುಖಕೊಡ್ಡಿದನು ರಥ
ತುರಗವನು ಚಪ್ಪರಿಸಿ ಸಾರಥಿ ನೂಕಿದನು ರಥವ
ಧರಣಿಪತಿ ಕೇಳೈದುಶರದಲಿ
ಹರಿಗೆಯನು ಮುಱಿಯೆಚ್ಚು ಸೂತನ
ಶಿರವನಿಳುಹಿದೊಡೊಡೆದು ಕೊಂಡುದು ಮುಂಡ ಸಾರಥಿಯು ೧೧

ಕೆದಱಿದನು ಮಾರ್ಗಣೆಯೊಳರಸನ
ಹೊದೆಸಿದನು ಹುಸಿಯೇಕೆ ರಾಯನ
ಹುದಿದ ಕವಚವ ಭೇದಿಸಿದವೊಳಬಿದ್ದವಂಬುಗಳು
ಎದೆಯುಲೌಕಿದ ಬಾಣ ಬೆನ್ನಲಿ
ತುದಿಮೊನೆಯ ತೋಱಿದವು ಪೂರಾ
ಯದ ವಿಘಾತಿಯಲರಸ ಕಳವಳಿಸಿದನು ಕಂಪಿಸುತ ೧೨

ಸಿಕ್ಕಿದೆಯೆಲಾ ಸ್ವಾಮಿದ್ರೋಹಿಗ
ಳಿಕ್ಕಿ ಹೋದರೆ ಭೀಮ ಫಲುಗುಣ
ರೆಕ್ಕೆತುಳದಲಿ ತೊಡಕಿ ನೀಗಿದೆಲಾ ನಿಜೋನ್ನತಿಯ
ಚುಕ್ಕಿಗಳು ನಿನ್ನವರ ಮಡುವಿನ
ಲಿಕ್ಕಿ ಕೌರವರಾಯನನು ಮಱೆ
ವೊಕ್ಕು ಬದುಕಾ ಧರ್ಮಸುತ ಬಾ ಎಂದನಾ ಕರ್ಣ ೧೩

ಕೊಲುವಡವ್ವೆಗೆ ಕೊಟ್ಟ ಮಾತಿಂ
ಗಳುಕುವೆನು ನೀ ಹೋಗು ಹರಿಬಕೆ
ಮಲೆವರಾದರೆ ಕಳುಹು ಭೀಮಾರ್ಜುನರನಾಹವಕೆ
ಉಲುಕಿದರೆ ನಿನ್ನಾಣೆಯೆನುತ
ಗ್ಗಳಿಸಿ ನೃಪತಿಯ ಕೆಡೆನುಡಿದು ಪರ
ಬಲವ ಬರಹೇಳೆನುತ ನಿಂದನು ನುಡಿಸಿ ನಿಜಧನುವ ೧೪

ಏನ ಹೇಳುವೆನರಸ ಪಾಂಡವ
ಸೇನೆಗಾದ ವಿಪತ್ತನರಸನ
ಹಾನಿಯನು ನಿನ್ನವರ ಸುಮ್ಮಾನದ ಸಘಾಡಿಕೆಯ
ಭಾನುಸುತನೋ ಕೌರವನ ಮದ
ದಾನೆಯೋ ಕುರುಸೈನ್ಯನಳಿನೀ
ಭಾನು ಮಧ್ಯಭಾಪೆಂದು ಹೊಗಳಿತು ಕೂಡೆ ಪರಿವಾರ ೧೫

ಅಳುವವರ ನಗಿಸುವುದು ನಗುವರ
ನಳಿಸುವುದು ಗೆಲಿದವರ ಸೋಲಿಸಿ
ಗೆಲಿಸುವುದು ಸೋತವರನೀ ವಿಪರೀತ ಗತಿ ವಿಧಿಗೆ
ಅಳಲದಿರು ಸುಮ್ಮಾನದಲಿ ವೆ
ಗ್ಗಳಿಸದಿರು ನಿನ್ನವರು ನಿಮಿಷದೊ
ಳಳಲುದೊಱೆಯಲಿ ಮುಳುಗುವಂದವನಿನ್ನು ಕೇಳೆಂದ ೧೬

ನೊಂದನೇ ಧರ್ಮಜನು ಭಂಗಕೆ
ತಂದನೇ ರಾಧೇಯನಕಟಕ
ಟಿಂದು ಮಡಿದರೆ ಭೀಮ ಪಾರ್ಥರು ಭೀತಿಯೇಕಿದಕೆ
ನೊಂದನೀ ಪರಿ ತನ್ನ ಕಂಗಳ
ಮುಂದೆ ನರಪತಿ ಪಾರ್ಥನಿನ್ನೇ
ನೆಂದು ಮುನಿವನೊ ಶಿವಶಿವಾ ಎಂದಳಲಿದನು ಭೀಮ ೧೭

ನರನ ಖಾತಿಗೆ ದ್ರೌಪದಿಯ ತೊ
ತ್ತಿರುಗಳುಪಹಾಸ್ಯಕ್ಕೆ ನೃಪತಿಯ
ಮರಣ ಸಾದೃಶ್ಯಪ್ರಹಾರ ವ್ಯಥೆಯು ಕಾಣಿಕೆಗೆ
ಆರರೆ ಭಾಜನವಾದೆನೈ ಹರ
ಹರ ಮಹಾದೇವಾ ಎನುತ ತುದಿ
ವೆರಳಲಾಲಿಯ ಸೀರ ಮಿಡಿದಳಲಿದನು ಕಲಿಭೀಮ ೧೮

ವೈರಿ ಕರ್ಣನ ಕಾಂತೆಯರ ದೃಗು
ವಾರಿಧಾರೆಯಲೆನ್ನ ಭಾರಿಯ
ಘೋರ ಕೋಪಾನಳನ ಉಳಿಸುನು ತಗಿಸುವೆನೆನುತ
ಧಾರುಣೀಪತಿಗೆಱಗಿ ನಿಜಪರಿ
ವಾರವನು ಸುಯ್ದಾನವರಸೆನು
ಶಾರುಭಟೆಯಲಿ ಭೀಮ ಮೊಳಗಿದನಹಿತ ಮೋಹರಕೆ ೧೯

೫. ಅರಸನಿಂದು ಸಜೀವಿಯೋ ಸುರಪುರ ನಿವಾಸಿಯೋ ?

ಕಾಯಲಳವೇ ಕರ್ಣ ಬಱಿಯ ನ
ವಾಯಿಯಲಿ ಫಲವಿಲ್ಲ ದೇಹದ
ಬೀಯಕಿದು ಹೊತ್ತಲ್ಲ ಸಾಧಕವಿದಕೆ ಬೇಱುಂಟು
ಸಾಯಲಡಸಿದ ಬಡತನಕ್ಕೆ ಪ
ಲಾಯನವೆ ನಿಕ್ಷೇಪವಿದೆ ಬಯ
ಲಾಯಸವು ಸಮಗೇತ್ರಕೆಂದನು ಮಾದ್ರಪತಿ ನಗುತ ೧

ನೀ ಮರುಳಲಾ ಶಲ್ಯ ಫಡ ಸ್ತು
ತ್ರಾಮನೇ ಸಮವರ್ತಿಯೇ ಜಿತ
ಕಾಮನೇ ಬಡಭೀಮನುಱುಬೆಗೆ ಶೀತನಾದೆಯಲ
ತಾಮಸನ ತಡೆಗಡಿದು ಭೂತ
ಸ್ತೋಮಕುಣಬಡಿಸುವೆನು ಜಯ ಸಂ
ಗ್ರಾಮ ರುದ್ರನು ಕರ್ಣನಾತೆಂದರಿಯೆ ನೀನೆಂದ ೨

ಅಕಟ ಬಲುಗೈಯಹೆ ಕಣಾ ಸಾ
ಧಕನು ನಾನದಕೆನ್ನೆನಿಂದಿನ
ವಿಕಟ ಕೋಪಾಟೋಪ ಭೀಮನ ದಂಡಿಯುಧು ಬೇಱೆ
ತ್ರಿಕಟುಕದ ಕಜ್ಜಾಯವಿದು ಬಾ
ಲಕರ ಸೊಗಸೇ ಕರ್ಣ ಹೇಳ್ ಕೌ
ತುಕದ ಮಾತೇ ನಿನ್ನ ಮೇಲಾಣೆಂದನಾ ಶಲ್ಯ ೩

ಎಲವೊ ಸೂತನ ಮಗನೆ ರಾಯನ
ನಳಲಿಸಿದೆಲಾ ನಿನ್ನ ರಕುತವ
ತುಳುಕುವೆನು ಹಿಂದಿಕ್ಕಿಕೊಂಬನ ತೋಱುತೋಱೆನುತ
ಬಲುಸರಿಯು ನಾರಾಚದಲಿ ಕ
ತ್ತಲಿಸೆ ದೆಸೆ ಕೈಮಾಡಿದನು ಕೈ
ಚಳಕದೆಸುಗೆಯ ಕೇಣದಳತೆಯನಱಿಯೆ ನಾನೆಂದ ೪

ಹೊಡೆದು ಕಲಿಯನು ಹಗೆಯ ರಕುತವ
ಕುಡಿವನಲ್ಲದೊಡವನಿಪಾಲನ
ಕೆಡೆನುಡಿದ ನಾಲಗೆಯ ಕೀಳುವೆನೆನುತ ಕೋಪದಲಿ
ಸಿಡಿವ ಕಿಡಿಗಳ ಕೋಪಶಿಖಿಯು
ಗ್ಗಡದ ಮಾರುತಿ ಹೊಯ್ದು ಕರ್ಣನ
ಕೆಡಹಿದನು ಮುರಿಯೊಡೆದಿಡನೆದೆಯನು ಹಾಯ್ದು ಮುಂದಲೆಗೆ ೫

ಥಟ್ಟುಗೆಡಹಿದ ಕರ್ಣನನು ಕೈ
ಮುಟ್ಟದಿರು ಹೆಜಸಾರು ಪಾರ್ಥನು
ಕೊಟ್ಟ ಭಾಷೆಯ ಮಱೆದಲಾ ಕೈತಪ್ಪ ಮಾಡದಿರು
ಬಿಟ್ಟು ಹಿಂಗೆಲೆ ಭೀಮ ಭೀತಿಯ
ಬಿಟ್ಟು ಬೆರಸಿದೆ ಸಾಕು ಹರಿಬಕೆ
ಮುಟ್ಟಿಸಿದ ಗೆಲವಾಯ್ತು ಮರಳೆನ್ನೆಂದನಾ ಶಲ್ಯ ೬

ರಥಕೆ ಮರಳಿದನಾತನೀತನ
ವ್ಯಥೆಯನೇನೆಂಬೆನು ಸುಯೋಧನ
ರಥಿಗಳುಬ್ಬಟೆ ಗರ್ಭವಿಕ್ಕಿತು ನಿಮಿಷಮಾತ್ರದಲಿ
ರಥದೊಳಗೆ ಮಾದ್ರೇಶನೀ ಸಮ
ರಥನ ಸಂತೈಸಿದನು ಕವಳ
ಪ್ರಥಿತ ಮಂತ್ರೌಷಧಿಗಳಲಿ ಹದುಳಿಸಿದನಾ ಕರ್ಣ ೭

ಸವಱಿದನು ರವಿಸುತನ ಪರಿವಾ
ರವನು ಮುಗುಳುಬ್ಬೆದ್ದ ಕೌರವ
ನಿವಹದಲಿ ಕಾದಿದನು ದುರ್ಯೋಧನ ಸಹೋದರರ
ತಿವಿದು ನಾಲ್ವರ ಕೊಂದನುಬ್ಬರಿ
ಸುವರ ಗರ್ವವ ಮುಱಿದು ಪ್ರಳಯದ
ಭವನ ರೌದ್ರದವೋಲು ಭುಲ್ಲಯಿಸಿದನು ಕಲಿಭೀಮ ೮

ಶಿವಶಿವಾ ಕೌರವನ ತಮ್ಮದಿ
ರವಗಡಿಸಿದರು ನಂದೋಪನಂದರು
ಜವಗೆ ಜೀವಣಿಯಾದರೇ ಕಲಿಭೀಮನಿದಿರಿನಲಿ
ಶಿವಿವರಿನ್ನಾರೆನುತ ಗುರು ಸಂ
ಭವ ಕೃಪಾದಿಗಳೊತ್ತಿ ನಡೆತಹ
ರವವ ಕೇಳಿದು ಕುದಿದನವಮಾನದಲಿ ಕಲಿಕರ್ಣ ೯

ಪೂತು ದೈವವೆ ಭೀಮಸೇನನ
ಘಾತಿಯಲಿ ಸೊಪ್ಪಾದೆನ್ನೈ ಸುಡ
ಲೇತಕೀ ಧನುವೇತಕೀ ದಿವ್ಯಾಸ್ತ್ರನಿಕರಗಳು
ಜಾತಿ ನಾನೆಂದೆನ್ನನಗ್ಗಿಸಿ
ಭೂತಳಾಧಿಪ ಸಾಕಿದನು ತಾ
ನೇತಱಿಂದುಪಕಾರಿ ಎಂದನು ಸುಯ್ದು ಕಲಿಕರ್ಣ ೧೦

ಎಲೆ ಮರುಳೆ ರಾಧೇಯ ಫಡ ಮನ
ವಿಳುಹದಿರು ತಪ್ಪೇನು ಸೋಲವು
ಗೆಲವು ದೈವಾಧೀನ ವಿನ್ನಾಕ್ಷಣಕೆ ಕುಂದೇನು
ಹಲಬರಮರಾಸುರರೊಳಗೆ ಹೆ
ಬ್ಬಲವೆ ದುರ್ಬಲವಾಯ್ತು ನೀ ಮನ
ವಳುಕದಿರುಹಿಡಿ ಧನುವಸನುವಾಗೆಂದನಾ ಶಲ್ಯ ೧೧

ಖಾತಿ ಮೊಳೆತುದು ಮತ್ತೆ ಬಲ ಸಂ
ಘಾತಕಭಯವನಿತ್ತು ಬಾಣ
ವ್ರಾತವನು ಹೊಡೆಗೆದಱಿ ಹೊಸಹೊಗಱಿದ್ದನಡಿಗಡಿಗೆ
ಭೂತನಾಥನ ಮಱೆಯ ಹೊಗಲಿ ಮ
ಹೀತಳೇಶನ ಹಿಡಿವೆನೆನುತ ವಿ
ಧೂತರಿಪುಬಲ ರಥವ ಬಿಟ್ಟನು ಧರ್ಮಜನ ಹೊರೆಗೆ ೧೨

ಕಾಲಯಮನೋ ಕರ್ಣನೋ ಭೂ
ಪಾಲಕನ ಬೆಂಬತ್ತಿದನು ಪಾಂ
ಚಾಲಿಯೋಲೆಯು ಕಾಪರಿಲ್ಲಾ ಎನುತ ಬಲನೊದಱೆ
ಕೇಳಿದನು ಕಳಕಳವನೀ ರಿಪು
ಜಾಲವನು ಜಱೆದಡ್ಡಹಾಯ್ದನು
ಗಾಳಿಗುದಿಸಿದ ವೀರನದ್ಭುತ ಸಿಂಹನಾದದಲಿ ೧೩

ಚೆಲ್ಲಿತವನೀ ಪತಿಯ ಮೋಹರ
ವೆಲ್ಲ ನೆಱೆ ನುಗ್ಗಾಯ್ತು ರಾಯನ
ಘಲ್ಲಿಸಿದನೇಳೆಂಟು ಬಾಣದಲೀತನಡಿಗಡಿಗೆ
ಅಲ್ಲಿಯದುಭುತರಣವನಪ್ರತಿ
ಮಲ್ಲ ಮಾರುತಿ ಕೇಳಿದನು ಮಗು
ಳಲ್ಲಿಯೇ ಮೊಳಗಿದನು ನಿಮಿಷಕೆ ಕರ್ಣನಿದಿರಿನಲಿ ೧೪

ಅಳಲಿಸಿದನೇ ಧರ್ಮಪುತ್ರನ
ಬಳಿಚಿಪಟ್ಟೆನು ನಾಯು ಕೊಲ್ಲದೆ
ಕಳುಹಿದರೆ ಬೆಂಬಿಡನಲಾ ಮಱುಕೊಳಿಸಿ ಮಱುಕೊಳಿಸಿ
ತಲೆ ಕೊರಕ ಸಂಪ್ರತಿಗೆ ಭೇದವ
ಬಳಸಿದರೆ ಸಾಕೈಸಲೇ ಎನು
ತುಲಿದು ಕಣೆಗಳ ಕೆದಱ ಕರ್ಣನ ತಱುಬಿದನು ಭೀಮ ೧೫

ಅಖಿಳ ಬಲ ಭಾರಣೆಯುಲೊಂದೇ
ಮುಖದಲೊಡ್ಡಿತು ಪವನಜನ ಸಂ
ಮುಖದೊಳನಿಬರು ಕೆಣಕಿದರು ಕಲ್ಪಾಂತ ಭೈರವನ
ಸುಖಿಗಳಕಟಾ ನೀವು ಸಮರೋ
ನ್ಮುಖರಹರೆ ಕರ್ಣಂಗೆ ಸಾವಿನ
ಸಖಿಗಳೇ ಲೇಸೆನುತ ಕೈಕೊಂಡೆಚ್ಚನಾ ಭೀಮ ೧೬

ಸರಳ ಹತಿಯಲಿ ನಕುಲ ಸಾತ್ಯಕಿ
ಬಿರುದ ಸಹದೇವಾದಿ ವೀರರು
ಹಿರಿದು ನೊಂದರು ಮತ್ತೆ ತಱುಬಿದನವನಿಪಾಲಕನ
ಅರಸ ಹಿಡಿ ಹಿಡಿ ಧನುವನಿನ್ನೆರ
ಡರಸನಾನದು ಧರಣಿಯೊಬ್ಬನ
ಶಿರವ ಬರಹವ ತೊಡೆವೆನಿದೆಯೆಂದೆನುತ ತೆಗೆದೆಚ್ಚ ೧೭

ಅಕಟಕಟ ರಾಧೇಯ ಕೇಳೀ
ನಕುಳನೀ ಸಹದೇವನೀ ಸಾ
ತ್ಯಕಿ ನರೇಶ್ವರನೆನಿಸುವೀ ಕುಂತೀ ಕುಮಾರಕರು
ಅಕುಟಿಲರು ನಯ ಕೋವಿದರು ಧಾ
ರ್ಮಿಕರ ಕೊಲ ಬೇಡಿವರನತಿ ಬಾ
ಧಕರು ಭೀಮಾರ್ಜುನರ ಸಂಹರಿಸೆಂದನಾ ಶಲ್ಯ ೧೮

ಎನಲು ಕಿಡಿಕಿಡಿವೋಗಿ ಭೀಮಾ
ರ್ಜುನರ ತೋಱಾದರೆ ಎನುತ ನಿಜ
ಧನುವ ಮಿಡಿದಬ್ಬರಿಸಲಿತ್ತಲು ರಾಯದಳದೊಳಗೆ
ಅನಿಲಜನ ಕಾದಾಟ ಕದಳೀ
ವನದ ಕಾಡಾನೆಯ ಮೃಗಾಳಿಯ
ವನಚರರ ದೆಖ್ಖಾಳದಬ್ಬರ ಕಾಣಲಾಯ್ತೆಂದ ೧೯

ಕವಿದು ಕೆಂಧೂಳಿಡುವ ಸೇನಾ
ಟವಿಯ ನೋಡುತ ಹಿಂದೆ ಕರ್ಣನ
ಲವಲವಿಕೆಯಾಯತವ ಕಂಡನು ಕದನ ಕೇಳಿಯಲಿ
ಅವನಿಪನ ದರುಶನವೆನಗೆ ಸಂ
ಭವಿಸಲಱಿಯದು ಭಾಪುರೇ ಕೌ
ರವ ಮಹಾರ್ಣವವೆನುತ ಮುಕುಟವ ತೂಗಿದನು ಪಾರ್ಥ ೨೦

ಬರುತ ಭೀಮನ ಕಂಡರಾತನ
ಹೊರೆಗೆ ಬಿಟ್ಟರು ರಥವನರ್ಜುನ
ಕರೆದು ಬೆಸಗೊಂಡನು ನೃಪಾಲನ ಕ್ಷೇಮ ಕೌಶಲವ
ಅರಸನಿಂದು ಸಜೀವಿಯೋ ಸುರ
ಪುರ ನಿವಾಸಿಯೊ ಹದನನೇನೆಂ
ದಣಿಯಿಸೀ ಸಂಗ್ರಾಮ ಧುರವೆನಗೆಂದನಾ ಭೀಮ ೨೧

ಆದಡಲೆ ಪವಮಾನಸುತ ನೀ
ನಾದರಿಸು ನಡೆ ನೃಪತಿಯನು ನಾ
ಕಾದುವೆನು ಕೌರವರ ಸಕಲ ಬಲಸಂಘಾಟದಲಿ
ಕೈದುಕಾಱರು ನಿಖಿಳದೆಸೆಗಳ
ಲೈದಿ ಬರುತಿದೆ ನೀ ಮರಳು ನಾ
ಛೇದಿಸುವನರಘಳಿಗೆ ಮಾತ್ರದಲೆಂದನಾ ಪಾರ್ಥ ೨೨

ಎಲೆ ಧನಂಜಯ ನೀನೆ ಬಲುಗೈ
ಯುಳಿದವರು ರಣವೀಡರೇ ಕುರು
ಬಲವನೊಬ್ಬನೆ ಕೇಣಿಗೊಂಡೆನು ಕರ್ಣ ಮೊದಲಾಗಿ
ಅಳಿಕಿಸುವೆನೀ ಕ್ಷಣಕೆ ತನ್ನ
ಗ್ಗಳಿಕೆಯನು ನೋಡವನಿಪಾಲನ
ಬಳಲಿಕೆಯ ಸಂತೈಸು ನಡೆ ನೀನೆಂದನಾ ಭೀಮ ೨೩

ಕೇಳು ಧೃತರಾಷ್ಟ್ರಾವನಿಪ ಬಲು
ಗಾಳಿಗವ ಭೀಮಂಗೆ ಸೇರಿಸಿ
ಪಾಳಯಕೆ ತಿರುಗಿದರು ಕೃಷ್ಣಾರ್ಜುನರು ಮಗುಳುದಲಿ
ಹೇಳು ಮುರಹರ ಬುದ್ಧಿ ಕದಡಿ ಥ
ಡಾಳಿಸಿತು ಪರಿಭೇದ ಮೊಸಗೆಯ
ಕೇಳಲಚ್ಚರಿಯೆನಿಸು ರಾಜವಾರ್ತೆಯನೆಂದನಾ ಪಾರ್ಥ ೨೪

೬. ಪಾರ್ಥನ ಭಾಷೆ ಸಂದರೆ ಸಾಕು !

ನೊಂದೆಲಾ ನರನಾಥ ವಿಧಿಯೇ
ನೆಂದು ಮುನಿದುದೊ ನಿನಗೆನುತ್ತ ಮು
ಕುಂದನತಿ ಕಾರುಣ್ಯ ದೃಷ್ಟಿಯಲವನಿಪನ ನೋಡಿ
ಮಂದ ಮಂದದಿ ಪಾಣಿ ಪಲ್ಲವ
ದಿಂದ ತಡವಿದನೇಳ್ವನಾಗಳೆ
ಕಂಡೆಱೆದು ನೋಡಿದನು ಭೂಪತಿ ಕೃಷ್ಣ ಫಲುಗುಣರ ೧

ಹರಿಕರಾಬ್ಜ ಸ್ಪರ್ಶಮಾತ್ರ
ಸ್ಫುರಣದಿಂದಾಪ್ಯಾಯಿತಾಂತಃ
ಕರಣನಾದನು ನನೆದನುದ್ಗತ ಬಾಷ್ಪವಾರಿಯಲಿ
ಮುಱಿಯದೇಱಿನ ಮೈವಳಿಗೆ ಲಘು
ತರದ ಲುಳ್ಳಿಯಲಿ ಮೈಯು ಬಲಿದಾ
ದರಿಸಿ ಕುಳ್ಳಿರ್ದನು ಮಹೀಪತಿ ಮಾನಿನಿಯ ಮಲ್ಗಿ

ಎಲೆ ಧನಂಜಯ ಸೂತ ತನಯನ
ಗೆಲಿದು ಬಂದೆಯೊ ದಿವಿಜನಗರಿಗೆ
ಕಳುಹಿ ಬಂದೆಯೊ ಕಂಡು ಕೆಣಕದೆ ಬಂದೆಯೋ ಮೇಣು
ಉಳುಹಿ ಬಿಡುವನೆ ಸಮರ ಮುಖದಲಿ
ಮಲೆತನಾದರೆ ಕರ್ಣನೇನ
ಗ್ಗಳಿಕೆವಡೆದನೋ ಶಿವ ಶಿವಾ ಎಂದರಸ ಬಿಸುಸುಯ್ದ ೨

ಜೀಯ ಖಾತಿಯಿದೇಕೆ ಕರ್ಣನ
ಕಾಯಿದುಳುಹಿದೆನೊಂದು ಬಾರಿ ವಿ
ಘಾಯದಲಿ ಘಟ್ಟಿಸುವೆನೀಗಳೆ ಹಾಯ್ಕು ವೀಳೆಯವ
ರಾಯದಳಗಿಳವೆನ್ನಕೂಡೆ ವ
ವಾಯಿಯೋ ಕಲಿಕರ್ಣಸಾಯುಷ
ಹೋಯಿತಿದೆಯೆಂದೊರಸಿದನು ವಾಮಾಂಘ್ರಿಯಲಿ ನೆಲನ ೩

ನಾಲಗೆಯ ನೆಣಗೊಬ್ಬು ಮಿಕ್ಕು ಥ
ಥ್ರಾಳಿಸಿದರೇನಹುದು ಕರ್ಣನ
ಕೋಲಗಳು ಸೋಂಕಿದರೆ ಸೀಯದೆ ಸಿತ್ರಗತನ ಸಿನಗೆ
ವೀಳೆಯವ ತಾ ಕರ್ಣನಾಯುಷ
ಕ್ರೋಳುವ್ರೋಯಿತ್ತೆಂಬ ಗರ್ವನ
ಗ್ರಾಳುತನನನು ನಂಬಲಜಾನೆನೆ ಪಾರ್ಥ ಹೇಳೆಂದ

ಜಾಣತನದಲಿ ಕಾದಿ ಹಿಂಗುವ
ದ್ರೋಣನಲ್ಲಳವಿಯಲಿ ಕಳವಿನ
ಕೇಣದಲಿ ಕೊಂಡಾಡುವರೆ ಗಾಂಗೇಯನಿವನಲ್ಲ
ಸಾಣೆಗಂಡಲಗಿವನು ಸಮರಕೆ
ಹೂಣಿಗನು ರಿಪು ಬಲದ ಹಾಣಾ
ಹಾಣಿಕಾರನು ಕರ್ಣನಳುಕುವನಲ್ಲ ನಿನಗೆಂದ

ಎವಗೆ ವಿಕ್ರಮವೆಂಬಡೀ ರೌ
ರೌರವ ಕಂಡೆನು ಕರ್ಣನಂತಿರ
ಲಿವಗೆ ಧೀವಸಿಯಾಗ ಕಾದುವನೆಂಬರವರಿಲ್ಲ
ಬವರ ಗೆಲುವರೆ ಹರಿಗೆ ಕೊಡು ಗಾಂ
ಡಿವವ ಸಾರಥಿಯಾಗು ನೀನೆಂ
ದವಗ್ಡಿಸಿದನು ವೀರನಾರಾಯಣನ ವೈದುನನ

ಆಯುಧವ ಹಿಡಿದೊಳಗೆಯುನುಗಿದನ
ಡಾಯುಧವ ಝಳಪಿಸುತ ರೌದ್ರ
ಸ್ಥಾಯಿಭಾವದ ಭಾರದಲಿ ಘುಲ್ಲಯಿಸಿ ಭಯಪಡಗ
ದಾಯನಲ್ಲಿಗೆ ಮೆಲ್ಲಮೆಲ್ಲನು
ಪಾಯಗತಿ ಪಲ್ಲವಿಸಲುಪ್ಪರ
ಘಾಯದಲಿ ಲಾಗಿಸುವ ಪಾರ್ಥನ ಕಂಡುದಖಿಳಜನ

ಅಹಹ ಕೈತಪ್ಪಾಯ್ತು ಹಾಹಾ
ರಹ ವಿಧೇನೇನೆನುತ ರಾಯನ
ಮಹಿಳೆ ಬಿದ್ದಳು ಮೇಲು ಖಡ್ಗಕೆ ತನ್ನಸಡೆಯೊಡ್ಡಿ
ಬಹಳಶೋಕದಲಖಿಳ ಜನವು
ಮ್ಮಹವ ಬಿಸುಟರು ದೈವಗತಿ ದು
ಸ್ಸಹವಲಾ ಎನುತಸುರರಿಪು ಹಿಡಿದನು ಧನಂಜಯನ ೯

ಬಿದಱಿಸದಿರೈ ಕೃಷ್ಣ ದುಷ್ಕ
ರ್ಮದಲಿ ಸುಳಿಯೆನು ಭೂಪತಿಯ ಗ
ದ್ಗದ ವಚೋವಿನ್ಯಾಸವನ್ಯಾಯ ಪ್ರಪಂಚವಿದು
ಅದಱಿನೀತನ ಪ್ರೊಯ್ದು ಕೊಂದ
ಲ್ಲದೆ ಸುನಿಷ್ಕೃತಿಯಿಲ್ಲ ಸತ್ಯಾ
ಭ್ಯುದಯವೇ ತನ್ನುದಯವದಱಿನೆನ್ನ ಲಯವೆಂದ ೧೦

ದೇವ ಪೂರ್ವದಲೆನ್ನ ನುಡಿ ಗಾಂ
ಡೀವವೇತಕೆ ನಿನಗೆ ನಿನಗೀ
ದೇವಧನು ಸಾಧ್ಯಕ್ಕವೇ ತೆಗೆಯೆಂದು ರೋಷದಲಿ
ಆವನೊಬ್ಬನು ನುಡಿದನಾತನ
ಜೀವನವ ಜಕ್ಕುಲಿಸಿಯೆನ್ನ ವ
ಚೋ ವಿಳಾಸವ ಕಾಯ್ದೆನೆಂದೆನು ಕೃಷ್ಣ ಕೇಳೆಂದ ೧೧

ಲೇಸು ಲೇಸಿದು ತಮ್ಮನಾಡಿದ
ಭಾಷೆ ಬಾಹಿರವಾಗಬೇಡ ವಿ
ನಾಶಕಾನಂಜೆನು ಮುರಾಂತಕ ಬಿಡು ಧನಂಜಯನ
ಆಸೆಯೆನಗೀ ರಾಜ್ಯದಲಿ ಮೇ
ಣೀ ಶರೀರದಲಿಲ್ಲ ಪಾರ್ಥನ
ಭಾಷೆ ಸಂದರೆ ಸಾಕು ಸಾರೆಂದನಾ ಭೂಪ ೧೨

ಎಲೆ ಧನಂಜಯ ಧರ್ಮಪುತ್ರನ
ಕೊಲುವೆ ಸುಳುಹುವದಿಲ್ಲವೆಂಬ
ಗ್ಗಳಿಕೆಯಿದು ನಗೆಯಲ್ಲವೇ ನಿಷ್ಠುಯುವೆ ಹಿಂಸೆಯಲಿ
ಕಲುಮನವಲಾ ನಿನಗಕಟ ನಿ
ರ್ಮಳದ ಧರ್ಮಸ್ಥಿತಿ ರಹಸ್ಯವ
ತಿಳುಪಿದವರಾರೆನುತ ತಲೆದೂಗಿದನು ಮುರವೈರಿ ೧೩

ಈಸು ನಿರ್ದಯನೆಂಬುದನು ನಾ
ವೀಸುದಿನವರಿಯೆವು ಮಹಾದೇ
ವೇಸು ಪರಿಯುಂತಿದ್ದುದೋ ನಿನ್ನಂತರಂಗದಲಿ
ಏಸನೋದಿದಡೇನು ಪಾಪವಿ
ಳಾಸ ರಚನಾ ರೌರವಾತ್ಮರ
ವಾಸನೆಗಳವು ಬೀಳಿ ಹರಹರ ಎಂದನಸುರಾರಿ ೧೪

ನನೆದುದಂತಃಕರಣ ಮಧುಸೂ
ದನನ ಸೂಕ್ತಿ ಸುಧಾರಸದಿ ನೆಱೆ
ನೆನೆದುಪಾತಕ ವೈ ವಿಲೋಚನವಾರಿ ಪೂರದಲಿ
ಮನದ ಪರಿತಾಪವ್ಯಥಾದು
ರ್ಮನನು ಖಡ್ಗವ ನೊಱೆಯೊಳೌಕುತ
ವಿನಯದಲಿ ಕೃಷ್ಣಂಗೆ ಬಿನ್ನಹಮಾಡಿದನು ಪಾರ್ಥ ೧೫

ಇಂದಿನಲಿ ಹದಿನೇಳು ದಿನವಿ
ಲ್ಲಿಂದ ಹಿಂದಣ ಬವರದಲಿ ನೀ
ನೊಂದುದುಂಟೇ ದ್ರೋಣ ಭೀಷ್ಮರ ಕೋಲ ತೋಹಿನಲಿ
ಒಂದು ತೂಱಂಬಿನಲಿ ಗಡನೀ
ನಿಂದು ಜೀವವ ಜಾಱಿಸುವೆ ಸುಡ
ಲಿಂದು ಕುಲಕಂಟಕರನಿಱಿದರೆ ದೋಷವೇನೆಂದ ೧೬

ಕೇಳು ಧೃತರಾಷ್ಟ್ರಾವನಿಪ ಭೂ
ಪಾಲನನು ಸಾಮದಲಿ ಮುರರಿಪು
ಜೋಳವಿಸಿ ಭಾವಜ್ಞ ನಂದಿಸಿದನು ಮನೋವ್ಯಥೆಯ
ಮೇಲುಸುರ ಬಿಕ್ಕುಳಿನ ಬಿಗುಹಿನ
ತಾಳಿಗೆಯ ನೀರುಗಳ ಮುಕ್ಕುಳಿ
ನಾಲಿಗಳ ನರನಾಥ ತೆಗೆದಪ್ಪಿದನು ಫಲುಗುಣನ ೧೭

ದೇವ ಪರಿವಾರಕ್ಕೆ ನೇಮವ
ನೀವ ಸಮಯದಲಿಂದು ನಿಮ್ಮ ಕೃ
ಪಾವಲೋಕನವಾವುದೆನ್ನ ಪರಾಕ್ರಮಾನಳಕೆ
ಜೀವಸಖನಲ್ಲಾ ಸುಯೋಧನ
ನಾವ ಪಾಡು ವಿರೋಧಿ ಕಲುವಿ
ದ್ರಾವಣಕೆ ಕೊಡು ತನಗೆ ನೇಮವನೆಂದನಾ ಪಾರ್ಥ ೧೮

ಬರಿಸು ಭಾಷೆಯನಿಂದು ಕರ್ಣನ
ಶಿರವುಳಿದು ತಾವರೆಯ ನಗೆ ಪೈ
ಸರಿಸಿದರೆ ವೈ ಬೆಸುಗೆ ಬಿಟ್ಟರೆ ಜಕ್ಕವಕ್ಕಿಗಳ
ಇರುಳ ಬೀಜವನಿಂದು ನಭದಲಿ
ಹೆರಹಿದರೆ ಕಲಿ ಭೀಮನಯ್ಯನ
ಹರಹು ನಿಂದರೆ ಬಳಿಕ ನಿಮ್ಮಯ ತಮ್ಮನಲ್ಲೆಂದ ೧೯

ಅರಸ ಕೇಳೈ ಸಮರ ಭೂಮಿಗೆ
ಪರಿದರರಸಾಳುಗಳು ರಾಯನ
ಸಿರಿಮುಡಿಗೆ ಸುಕ್ಷೇಮ ಮುಚ್ಚಿದವೇಳುಮುದ್ದಿನಲಿ
ಮರಳಿ ನೇಮವಕೊಂಡು ಫಲುಗುಣ
ಬರುತಲೈದನೆ ಜೀಯ ನಿಮ್ಮಯ
ಚರಣಸರಸಿಜದಾಣೆಯೆಂದರು ಭೀಮಸೇನಂಗೆ ೨೦

೭. ಸೊಗಸೇ ಖಳನ ದಂತಶ್ರೇಣಿ?

ಧಾರುಣೀಪತಿ ಕೇಳು ನಿನ್ನ ಕು
ಮಾರರಲಿ ತೊಂಬತ್ತಯೆಂಟಜಿ
ಪಾರುಪ್ರಾಣೆಯು ಲೆಕ್ಕ ಸಂದುದು ನಿಮ್ಮ ಚಿತ್ತದಲಿ
ಸಾರ ಭೂತರಲೇ ಸಮಸ್ತ ವಿ
ಕಾರಿಗಳೊಳಿ ವಿಪ್ರ ನೃಪ ಸಂ
ಹಾರರಿಬ್ಬರ ಜೀಯುವನು ಮೇಲಿನ್ನು ಕೇಳೆಂದ ೧

ಸವೆಯೆ ಸರಳೆಚ್ಚಾಡಿದರು ಕಲಿ
ಪವನಸುತ ದುಶ್ಯಾಸನರು ರಣ
ದವಕಿಗರ ಕೋಪಾಗ್ನಿ ಭುಗಿಭುಗಿಲೆಂದುದಡಿಗಡಿಗೆ
ಅವನಿಗಿಳಿಬಿಡು ಧನುವ ತೆಗೆ ಖಡು
ಗವನೆನುತ ರಥದಿಂದ ಹಾಯ್ದರು
ಬವರಿಗರು ಬಿನ್ನಣದಿ ಹೊಯ್ದಾಡಿದರದಾಯುಧದಿ ೨

ಸಿಕ್ಕಿದೆಯಲಾ ಸ್ವಾಮಿ ದ್ರೋಹಿಯೆ
ಸೊಕ್ಕಿದೆಯಲಾ ಹಿಂದೆ ಜೂಜಿನ
ಲಕ್ಕಜವ ಮಾಡಿದೆಯಲಾ ಮಾನಿನಿಯ ಮುಡಿಹಿಡಿದು
ಚುಕ್ಕಿಗಳಲಾ ನಿನ್ನವರು ಕೈ
ಯಿಕ್ಕ ಹೇಳಾ ನಿನ್ನನೊಬ್ಬನ
ನಿಕ್ಕಿ ನೋಡಿದರಕಟೆನುತ ಮೂದಲಿಸಿದನು ಭೀಮ. ೩

ಎತ್ತಿಕಳೆದಿರಿ ವನಕೆ ನಾವ್ ನಿ
ಮ್ಮೆತ್ತುಗಳಲಾ ಬೀದಿಯಲಿ ಬೆಂ
ಬತ್ತಿ ಕೊಂಕಿನ ಬೆರಳಲೀಡಿಸಿ ಬಯ್ದು ಭಂಗಿಸಿದ್ರೈ
ತೊತ್ತಲಾ ಪಾಂಚಾಲೆ ನಾವ್ ನಿ
ಮ್ಮೆತ್ತುಗಳಲಾ ಹಿಂದೆ ಕಿಚ್ಚಿನ
ತುತ್ತು ವಿಷದುಬಟ್ಟೆಗಳನು ನೆನೆಯೆಂದನಾ ಭೀಮ ೪

ಆಕೆವಾಳರು ಕರ್ಣ ಗುರುಸುತ
ರೀ ಕೃಪಾಚಾರಿಯರು ತಾವೇ
ಕೈಕವೀರರು ನಿನ್ನನೊಬ್ಬನನೊಪ್ಪುಗೊಟ್ಟರಲಾ
ಏಕೆ ತಱುಬಿದಿರಿವರನಾಹವ
ಭೀಕರರನವಿವೇಕಿಗಳು ಇವ
ರೇಕೆ ನೀವೇಕೆಂದು ದುಶ್ಶ್ಯಾಸನನ ನೋಡಿದನು ೫

ಮರಣ ಹೊರೆ ಹೊರೆಯಾಯ್ತು ನಿನ್ನಯ
ಹರಣವೆನ್ನಂಗಯ್ಯಲಿದೆ ನಿ
ವ್ಮರಸನನ ಕರಸೆಲವೊ ಕಾದಿಸು ನಿನ್ನ ರಕ್ಷಿಸಲಿ
ಅರಿಬಲದೊಳಿದಿರಿಲ್ಲ ನಿಜವೋ
ಹರಮೊಳಗೆ ಮಿಡುಕುಳ್ಳ ವೀರರು
ಮರೆಚಲಿ ನಿನ್ನುವನೆನುತ ನೋಡಿದನು ತನ್ನವರ ೬

ಎಲವೊ ಧೃಷ್ಟದ್ಯುಮ್ನ ಸಾತ್ಯಕಿ
ಎಲಿ ಶಿಖಂಡಿ ಪ್ರಮುಖ ನಾಯಕ
ರಳುಕದಿಹ ಮನವುಳ್ಳಡಿದಿರಾಗಿವನ ಸಲಹುವುದು
ಹರಬರಲಿ ಫಲವೇನು ದಾನವ
ಕುಲ ದಿಶಾಪಟ ಕೃಷ್ಣ ಮುನಿದಡೆ
ಕಳಿದುಕೊಳು ಕೌಮೋದಕಿಯನೆಂದೊದಱಿದನು ಭೀಮ ೭

ಕೇಳು ಫಲುಗುಣ ಲೋಕ ಮೂಜಗಕೆ
ಆಳು ನೀನೆಂದೆಂಬ ಗರ್ವವ
ಪಾಲಿಸುವಡಿದಿರಾಗು ತೊಡು ಗಾಂಡಿವದಲಂಬುಗಳ
ಆಳುತನ ನಿನಗುಳ್ಳೊಡಹಿತನ
ಪಾಲಿಸುವೊಡೇಳೆಂದೆನಲು ಜಯ
ಲೋಲ ಸುಗತಿಯೊಳಿಳಿದನರ್ಜುನನಮಳ ಮಣಿರಥವ ೮

ಅಹುದಹುದು ತಪ್ಪೇನು ತಪ್ಪೇ
ನಹಿತ ದುಶ್ಯಾಸನನ ಸಲಹುವೆ
ಸಹಿತ ಬಲವೆನಗನಿಲಸುತನೆನುತ್ತೈದೆ ಬರೆ ಕಂಡು
ಬಹಳ ಭೀತಿಯೊಳಸುರರಿಪು ಸ
ನ್ನಿಹಿತ ಚಾಪವ ಹಿಡಿದು ಮನದು
ಮ್ಮಹವ ಕೆಡಿಸಿ ಕಿರೀಟಿಯನು ನಿಲಿಸಿದನು ರಥದೊಳಗೆ ೯

ಅಹುದು ಭೀಮನ ಗೆಲುವ ಭಟನೀ
ನಹೆಯಲೇ ನಾವಂಜುವೆವು ನಿ
ರ್ವಹಿಸಬಹುದೇ ಕಾಲರುದ್ರನ ಕೆಣಕಿ ಕದನದಲಿ
ಸಹಜವಿದು ಸಾಕ್ಷಾದುಮಾಪತಿ
ಯಹ ಕಣಾ ಪವನಜನ ನೋಡಲು
ಬಹಡೆ ನೋಡೆಂದಸುರರಿಪು ನುಡಿದನು ಧನಂಜಯಗೆ ೧೦

ಕಂಡನರ್ಜುನ ತ್ರಿಪುರ ದಹನದ
ಖಂಡ ಪರಶುವೊಲಿರ್ದ ಭೀಮನ
ದಂಡಿಯನು ಥಟ್ಟೈಸಿ ಭೂತಗಳೆಡಬಲದೊಳಿರಲು
ಚಂಡಬಲನಹನೈ ವೃಕೋದರ
ಗಂಡುಗಲಿಗಿದಿರಾವನೆನುತಾ
ಖಂಡಲಾತ್ಮಜನೆಜಗಿದನು ಮುರವೈರಿಯಂಘ್ರಿಯಲಿ ೧೧

ಉಭಯ ವೀರರ ನೋಡಿ ಸಂಗರ
ರಭಸದಲಿ ಮೂದಲಿಸಿ ಚಾಪ
ಪ್ರಭವ ಚಪಲರ ಚದುರುಗೆಡಿಸಿದ ಭುಜಬಲೋನ್ನತಿಯ
ಸಭೆಯೊಳಾದವಮಾನದಹನ
ಪ್ರಭೆಯ ನಂದಿಸಲಾಯ್ತುಲಾ ರಿಪು
ಸುಭಟನುರವೆಂಬಭ್ರಸಂಭವರುಧಿರ ಜಲವೆಂದ ೧೨

ಘನಪರಾಕ್ರಮಿ ಭೀಮಸೇನಗೆ
ವಿನುತ ಭುಜಗೇಂದ್ರಂಗೆ ದುಶ್ಶಾ
ಸನನ ಜೀವಾನಿಳನ ಪ್ರಾರ್ಥನೆ ಸಮರ ಭೂಮಿಯಲಿ
ಮುನಿವಸಾರಿವನೊಳಗೆ ಕರುಳಿನ
ಘನನಿಶಾಕರ ಬಿಂಬದುದಯದೊ
ಳನಿಲಜನ ಮುಖಕುಮುದ ನಸುನಗೆಯೆಸಳು ಪಸರಿಸಿತು ೧೩.

ಬಳಿಕ ಪರಿತೋಷದಲಿ ಮಾರುತಿ
ಲಲನೆಯಲ್ಲಿಗೆ ಕಳುಹಿದನು ತ
ನ್ನೊಲವಿನಾಹವವಾದುದೈ ಕಪುದೆನಲು ಬೇಗದಲಿ
ನಳಿನಮುಖಿ ನಲವೇಱಿ ಮೇಳದ
ಕೆಳದಿಯರು ಕೈಗೊಡಲು ನೇವುರ
ದೆಳಮೊಳಗು ಮೋಹಿಸಲು ಮಾನಿನಿ ಬಂದಳಾಯೆಡೆಗೆ ೧೪

ಬರುತ ಕಂಡಳು ಭೀಮಸೇನನ
ಧುರ ಪರಾಕ್ರಮ ವಹ್ನಿ ಭುಗಿಲೆಂ
ದರಿ ಭಯಂಕರ ರೌದ್ರ ರೂಪಿನೊಳಿರಲು ಬರಲಂಜಿ
ತಿರುಗೆ ಕಂಡನು ಪವನಸುತ ಪಂ
ಕರುಹಮುಖಿಯನು ಕರೆದು ನಿನ್ನಯ
ಭರದ ಬಯಕೆಯಿದಾಯ್ತು ಗಿಟೆ ನೋಡೆಂದು ತೋಱಿಸಿದ ೧೫

ಆರಿವನು ನೀ ಕೊಟ್ಟ ಭಾಷೆಯ
ಕಾರಣಿಕ ಖಳರೊಳಗಿದಾವನು
ವೀರ ದುಶ್ಶಾಸನ ಕಣಾ ಅಂತಾದದಾಯ್ತೆನುತ
ಸಾರಿದಳು ಸರಸಿಜವದನೆ ಭ
ರ್ತಾರನನು ನಸುನಗುತ ಚರಣದ
ಚಾರು ನೇವುರವುಲಿಯಲೊದೆದಳು ಖಳನ ಮಸ್ತಕವ ೧೬

ತರುಣಿ ಕುಳ್ಳಿರು ಸ್ವಾಮಿದ್ರೋಹಿಯ
ಕರುಳ ಮುಡಿ ಬಾ ನಿನ್ನ ಖಾತಿಯ
ಪರಿಹರಿಸುವೆನು ಖಳನ ರುಧಿರ ಸ್ನಾನಕೆಳಸುವರೆ
ಸರಸಿಜಾನನೆ ಕೊಳ್ಳೆನುತ ಖಳ
ನುರವನಿಬ್ಬಗಿ ಮಾಡಿ ಕುಡಿತೆಯ
ಲರುಣ ಜಲವನು ನೊಗೆದು ಮಾನಿನಿಗಿತ್ತನಾ ಭೀಮ ೧೭

ಶೋಣಿತಾಂಬುವಿನಿಂದ ತರುಣಿಯ
ವೇಣಿಯನು ನಾದಿದನು ದಂತ
ಶ್ರೇಣಿಯಲಿ ಬಾಚಿದನು ಬೈತಲೆದೆಗೆದು ಚೆಲುವಿನಲಿ
ರಾಣಿ ಹುಸಿಯದೆ ಹೇಳು ಹೇಳಿ
ನ್ನಾಣೆ ಸೊಗಸೇ ಖಳನ ದಂತ
ಶ್ರೇಣಿ ತ್ರಪೆ ಪಾವನವೆಯೆಂದನು ಪವನಸುತ ನಗುತ ೧೮

ಖಳನ ತೆಳುದೊಗಲುಗಿದು ವಾಸ
ಚ್ಚಲವ ಸಲಿಸಿದವನವನ ಜಠರದೊ
ಳೊಳಗೆರುಳನುಗಿದಬುಜವದನೆಯ ಮುಡಿಗೆ ಮುಡಿಸಿದನು
ತಳುಕಿದನು ಖಳನುರದ ರಕ್ತದ
ತಿಳಕವನು ರಚಿಸಿದನು ಹುರುಷದೊ
ಳುಲಿದು ಕೀಚಕವೈರಿ ನೋಡಿದನೊಲಿದು ನಿಜ ಸತಿಯ ೧೯

ಇವನ ನೆತ್ತ್ರುಜ ಕುಡಿವ ರಿಪುಕೌ
ರವರ ನೂರ್ವರ ಕಡಿವ ಭಾಷೆಗ
ಳಿವಗೆ ಪೂರಾಯುವು ಸುಯೋಧನ ಹರಣವೊಂದುಳಿಯೆ
ಅವನಿ ಜಳ ಶಿಖಿ ಪವನ ಪುಷ್ಕರ
ದಿವಿಜ ದನುಜೋರಗಮುಖಾಖಿಳ
ಭುವನ ಜನ ನೀವ್ ಕೇಳಿಯೆಂದನು ಭೀಮ ಮೊಗನೆಗಹಿ ೨೦

೮. ಐದಂಗುಲಕೆ ರಥವನು ನೆಡಿಸಿದನು ಹರಿ ಧರೆಗೆ

ವೀರ ದುಶ್ಶಾಸನನು ಕರ್ಣ ಕು
ಮಾರಕರು ನೀ ಸಾಕಿದಗ್ಗಳ
ವೀರದಳ ಕೌರವ ಸಹೋದರ ಸೇನೆ ಮೊದಲಾಗಿ
ತೀರಿತಾಹವದಲಿ ಕುರುವ್ರಜ
ವಾರಿಧಿಗೆ ಸರಿಯಾಯ್ತು ನಿನ್ನ ಕು
ಮಾರನಿಗಿಂತವಱಿದು ಸಮರಕೆ ಕರ್ಣನೆಂದಾತ ೧

ಸರಳ ಹೊದೆಗಳ ತುಂಬಿ ಬಂಡಿಯ
ನರಸ ಕಳುಹಿದನೆಂಟು ನೂಱನು
ಚರರು ಪರಿವೇಷ್ಟಿಸಿತು ಪರಿಚಾರಕರ ವಿಗ್ರಹವ
ಸರಿಸ ಸಿಂಧುವನೆತ್ತಿಸುತ ಬೊ
ಬ್ಬಿಱಿದು ಜವಸಿಕೆವಿಡಿದು ಭೀಮನೊ
ನರನೊ ನಿಲುವವರಾರು ಬರಹೇಳೆಂದನಾ ಕರ್ಣ ೨

ಮುಸುಕಿತೋ ಕರ್ಣಪ್ರತಾಪದ
ಬಿಸಿಲು ಪಾಂಡವ ಕುಮುದಕಾನನ
ವಿಸರವನು ವಿಗ್ರಹದ ಮುಖ ಲೇಸೆನುತ ಕುರುಸೇನೆ
ಮಸಗಿದಂಬುಧಿಯಂತೆ ಮಿಗೆ ಗ
ರ್ಜಿಸಲು ಗರುವರ ಗಾಢಶೌರ್ಯದ
ಬಿಸುಗೆ ಬಿಡೆ ಗಾಂಡಿವವ ದನಿ ಮಾಡಿದನು ಕಲಿ ಪಾರ್ಥ ೩

ರಾಯತನದಲಿ ಬೆಱೆತು ರಾಜ್ಯ
ಶ್ರೀಯು ನೆಱೆ ಹೋಗಾಡಿ ಪರರಿಗೆ
ಜೀಯ ಬೆಸಸುವುದೆಂದು ಜೀವಿಸುವರು ನಾವಲ್ಲ
ರಾಯತನವೆಮಗಿಲ್ಲ ಕೌರವ
ರಾಯ ನೋಲೆಯಕಾಱರಹೆವೆ
ನ್ಯಾಯತವು ತಾ ಬೇಱೆನುತ ಕವಿದೆಚ್ಚನಾ ಕರ್ಣ ೪

ಆವ ಹಂಜರಕೂಳಿ ವೊಗವಲೆ
ಯಾವ ಗಾಣವು ಬೇಸುಲೆಯುಜಿ
ಶೀವಿದುಪಕದ ಹುಡುವೆಯಿದು ಸಂಗ್ರಾಮ ಭೂಮಿ ಕಣಾ
ಹೇವವಿಲ್ಲದೆ ಕಾದ ಬೇಹುದು
ಧೀವರರವ್ರೋಲ್ ತಡಿಕೆವಲೆಯುಲಿ
ಲಾವುಗೆಯ ಹೊಯ್ಪಂಡವಲ್ಲಿನುತಿಚ್ಚಸಾ ಪಾರ್ಥ ೭

ನಿಮಿಷನಿಮಿಷಕೆ ಹೆಚ್ಚಿತಿಬ್ಬರ
ಶಿಮಿರವುಯ ಘನರೋಷವಿಬ್ಬರ
ಸಮರ ಸಾಹಸ ಶೌರ್ಯವಿಬ್ಬರ ಕಣೆಯು ಕೈಚಳಕ
ಶ್ರಮವಿಧಾನ ವ್ಯಾಪ್ತಿಯಿಬ್ಬರ
ಗಮಕವಿಬ್ಬರ ಗಾಢವಿಬ್ಬಿರ
ಸಮತೆಯಿಬ್ಬರ ಗರ್ವವಿಬ್ಬರ ಶೀವ್ರತರ ತೇಜ ೬

ಜನಪ ಕೇಳ್ಳೈ ಬಳಿಕ ಕರ್ಣಾ
ರ್ಜುನರ ಸಮ ಸಂಗ್ರಾಮವನು ಗುರು
ತನುಜ ಕಂಡನು ಕೌರವೇಂದ್ರನ ಬಳಿಗೆ ನಡೆತಂದು
ತನತನಗೆ ತೊಲಗಿತು ಮಹೀಶರ
ವೊನೆಯ ಸಮರಥರಾಜಿ ಗುರುನಂ
ದನನಲಾ ಎನುತಿದಿರುವಂದನು ನಿನ್ನ ಮಗ ನಗುತ ೭

ಏನು ಬಂದಿರಿ ಕಾಳೆಗದ ಹದ
ನೇನು ಪಾಂಡವರಾಜ ಶಿಮಿರಕೆ
ಭಾನುವಿನ ಭಾರಣೆಯು ಬಲುಹೇ ನಿಮ್ಮ ದಳಪತಿಯು
ಆನಲಳವೇ ಪಾರ್ಥನೀತನ
ನೇನು ಹದನೈ ರಾಜಕಾರ್ಯವ ನಿ
ಧಾನವೇನೆಂದರಸ ನುಡಿದನು ದ್ರೋಣನಂದನನ ೮

ಏನನೆಂಬೆನು ಜೀಯ ಕರ್ಣನ
ನಾನುವಡೆ ಫಲುಗುಣನ ಪಾಡೆ ಕೃ
ಶಾನುನೇತ್ರನೊ ಕೈಟಭಾರಿಯೊ ಕಮಲಸಂಭವನೊ
ಆ ನಿರೂಢಿಯ ದೊರೆಗಳಿವನ ಸ
ಮಾನರೇ ಗುಣದಲಿ ಸಮತ್ಸರ
ಮಾನಿಸನೆ ನಿನ್ನಾಣೆ ಭಾರದ್ವಾಜನಾಣೆಂದ ೯

ಸಂಗಳಿವೆನೆರಡಂಕವನು ನಾ
ಕರಸಿ ಕೊಡವೆನು ಧರ್ಮಜನನೆರ
ಡರಸುಗಳು ಸರಿಯಾಗಿ ಭೋಗಿಸುವುದು ಮಹೀತಳವ
ಅರಸ ಕರ್ಣನ ಕೆಡಿಸದಿರು ನಿ
ಷ್ಠುರದ ನುಡಿಯಿದು ಕೆಂಡದಲಿ ಕ
ರ್ಪುರವ ಹಾಯ್ಕದಿರೆಂದು ರಾಯನ ಗಲ್ಲವನು ಪಿಡಿದ ೧೦

ಆಗಲಿದು ತಪ್ಪೇನು ಸಂಪ್ರತಿ
ಯಾಗಬೇಡೆಂದೆನೆ ಮಹಾಹವ
ವೀಗ ಸರಿಬರಿಯಾಯ್ತು ಬಂದದು ವಾಸಿಯೆಂದಿರಲೆ
ಈಗಲಭಿಮನ್ಯುವಿಗೆ ಲಕ್ಷಣ
ಹೋಗಲಾ ಸೈಂಧವಗೆ ದುಪ್ರದನ
ನೀಗಲದು ಸರಿಯಾಗಲೆಂದನು ಕೌರವರರಾಯ ೧೧

ಗುರು ನದೀಸುತರಳಿವುಭಯರಾ
ಯರಿಗೆ ಸರಿ ದುಶ್ಶಾಸನನ ನೆ
ತ್ತರದಿ ಪಾಸಕ್ರೀಡನಾಸೌಭಾಗ್ಯಸಂಪದಕೆ
ಸರಿಯದಾವದು ಕರ್ಣತನಯನ
ಮರಣಕಾವುದು ಸರಿಸ ಭೀಮನ
ಕರುಳಲೆಸ್ನಯ ಕರುಳ ತೊಡಕಲು ಮೇಲೆ ಸಂಧಾನ ೧೨

ಗುರುತನುಜ ನೀವಾಡಿದುದ ಧಿ
ಕ್ಕರಿಸುವವರಾವಲ್ಲ ಕರ್ಣನ
ಒರಸು ಮಗನನು ಪಾರ್ಥಸುತರದೊಳಾ ಸಹೋದರನ
ದುರುಳ ಭೀಮನ ಬಸಿಱ ಬಗಿದು
ತ್ತರಿಸುವೆನು ಭಾಷೆಯಿದು ನೀವ್ ಒರಿ
ಯರಸರಲಿ ಯುವರಾಳಿಲಿ ಸಂಧಿಯ ಮಾಡಿಕೊಡಿಯೆಂದ ೧೩

ಕೇಳು ಧೃತರಾಷ್ಟ್ರಾವನಿಪ ಭೂ
ಪಾಲ ವೊಗದಿರುಹಿದೊಡೆ ಬಳಿಕೀ
ಕೋಲ ಗುರುವಿನ ಸೂನು ಮುರಿದನು ಬಿಗಿದ ದುಗ್ಗುಡದಲಿ
ಕೋಲ ಹೊದೆಯೆಂಬತ್ತು ಬಂಡಿಯ
ಹೇಳಿದನು ಕರ್ಣಂಗೆ ಕುರು ಭೂ
ಪಾಲ ತಾನೊತ್ತಾಗಿ ನಿಂದನು ಸಕಲ ದಳಸಹಿತ ೧೪

ಅರಸ ಹೇಳುವುದೇನು ಬಳಿಕಿ
ಬ್ಬರ ಮಹಾಕೋದಂಡ ಚಂಡ
ಸ್ಫುರಿತ ಮೌರ್ವೀನಾದ ಮುಸುಕಿತು ಸಕಲ ದಿಗುತಟವ
ಸ್ಫುರದಮಂದೋದ್ಭಿನ್ನ ಭಾಸ್ವ
ತ್ಕಿರಣಗರ್ಭಿತ ಚಾಪ ಭದ್ರಾ
ಕರಣಕಲಿತಧ್ವಾಂತಬಿಂಬಗಳೆಂಬ ಸಂತತಿಯು ೧೫

ಬರಸೆಳೆದ ಬಿಲುಗೋಲಿನಲಿ ನಿ
ಷ್ಠುರದ ಶರಸಂಧಾನದಲಿ ರಥ
ತುರುಗವನು ಕೆಡೆಯೆಚ್ಚನರ್ಜುನನಸಮಬಾಣದಲಿ
ಸುರಪನಾಯುಧ ಹತಿಗೆ ಕುಲಗಿರಿ
ತೆರಳುವಂತಿರಲೊಂದು ಯೋಜನ
ವರೆಗೆ ಕಿರ್ರನೆ ಕಿಲುಗಿ ತೊಲಗಿತು ಕರ್ಣರಥವಂದು ೧೬

ಔಕಿ ವಾಘೆಯ ಕೊಂಡು ಶಲ್ಯನು
ನೂಕಿದನು ತೇಜಿಯನು ಸಮರ
ವ್ಯಾಕುಳದಿನಾ ಕರ್ಣ ಸೆಳೆದನು ದಿವ್ಯ ಮಾರ್ಗಣವ
ನಾಕನಿಳಯರು ನಡುಗೆ ಶರಕ
ರ್ಣಾಕರುಷಣಪ್ರೌಢಿಯಲಿನಿಂ
ದಾ ಕಿರೀಟಿಯ ರಥವನೆಚ್ಚನು ಭಾನುಸುತ ಮುಳಿದು ೧೭

ಅರಿಯ ಶರಹತಿಗಳುಕಿ ತಿಱ್ರನೆ
ತಿರುಗಿ ಪಾರ್ಥನ ತೇರು ಬಿಲ್ಲಂ
ತರಕೆ ಹಿಂದಕೆ ತೊಲಗೆ ಕಂಡು ಮುರಾರಿ ಬೆಱಗಾದ
ಅರರೆ ಧಣು ಧಣು ಪ್ರೌಢ ಪಾಯಿಕು
ಸರಿಯ ಕಾಣೆನು ಭಾಪೆನುತ ವಿ
ಸ್ತರಿಸಿ ದಾನವವೈರಿ ಕರ್ಣನ ಹಿರಿದು ಹೊಗಳಿದನು ೧೮

ಸಲವು ಸಿಲೆ ಫಲುಗುಣನು ಹೂಡಿದ
ಹಿಳುಕನೀಡಾಡಿದನು ಲೋಕದ
ಬಳಕೆ ಕೌತುಕವೆನುತ ತೂಗಿದನವುಳ ಮುಕುಟವನು
ಒಲವರವಲಾ ಮುರಹರಂಗೀ
ಬಲದೊಳಗೆ ಸಾಹಸವ ಸಹಸು
ಡಲಿಸುತ ದುಗುಡವ ಹಿಡಿದು ಫಲುಗುಣನಿಳುಹಿದನು ಧನುವ ೧೯

ಏನು ಫಲುಗುಣ ಧರ್ಮಜನ ಮದ
ದಾನೆ ದುಗುಡವಿದೇನು ಪೇಳ್ಳೈ
ನೀನು ಧನುವನು ತೊಱೆದ ಕಾರಣವೇನು ಪ್ರಸಂಗ
ಏನು ಹದ ಹೇಳೆನಲು ಕೇಳಿಲೆ
ದಾನವಾಂತಕ ನುಡಿಯಲಾವುದು
ಹಾನಿಯೆಮಗಿಲ್ಲೆನುತ ಮೇಗರೆ ನುಡಿದನಾ ಪಾರ್ಥ ೨೦

ಒಂದು ಯೋಜನವರೆಗೆ ತಿರುಗಿತು
ಹಿಂದಕಹಿತನ ತೇರು ತಾನೆಸ
ಲೊಂದು ಬಲ್ಲಂಶರಕೆ ತೊಲಗಿತು ನಮ್ಮ ರಥವಿಂದು
ಇಂದು ಕರ್ಣನ ಸಾಹಸಕೆ ಮನ
ಸಂದು ಪತಿಕರಿಸಿದಿರಿ ಕೌತುಕ
ವೆಂದು ಕಾಲವ ಜೈದೆನೆಂದನು ಪಾರ್ಥನಾ ಹರಿಗೆ ೨೧

ಆಳುತನದಲಿ ವೀರಕರ್ಣನ
ಹೋಲುವರ ನಾ ಕಾಣೆನೈ ಸುರ
ಪಾಲಕರು ತಾವಾನಸಬಹುದೇ ಕರ್ಣನುರವಣೆಯು
ಕೋಲು ಯೋಜನವರೆಗೆ ತೊಲಗಿಸಿ
ಜಾಳಿಸಿತ ನೀನುಡಿವೆ ನಿಜ ಬಿ
ಲ್ಲಾಳತನವನು ನಿನ್ನ ಮನದಲಿ ತಿಳಿದು ನೋಡೆಂದ ೨೨

ಬಸುಜಠೊಳಗೆ ಬ್ರಹ್ಮಾಂಡ ಕೋಟಿಯು
ಮುಸುಕಿಕೊಂಡಿಹ ನಾ ಸಹಿತ ಮೇ
ಲೆಸೆವ ಸಿಂಧದ ಹನುಮಸಹಿತೀ ದಿವ್ಯಹಯ ಸಹಿತ
ಎಸುಗೆಯಲಿ ತೊಲಗಿಸುವ ಕರ್ಣನ
ಅಸಮ ಸಾಹಸ ಪಿರಿದೊ ಹುಲುರಥ
ದೆಸುಗೆ ನಿನ್ನಗ್ಗಳಿಕೆ ಪಿರಿದೋ ಪಾರ್ಥ ಹೇಳೆಂದ ೨೩

ಎನಲು ತಳವೆಳಗಾಗಿ ಫಲುಗುಣ
ಧನುವ ಕೊಂಡನು ದನುಜವೈರಿಗೆ
ಮನದ ಗರ್ವವನುಸುರಲಜ್ಜೆಯುಡೆ ಬಾಗಿದನು ಶಿರವ
ಮೊನೆಯಲಗಿನಂಬಿನಲಿ ಕರ್ಣನ
ಧನುವನಿಕ್ಕಡಿಗಳೆದು ಫಲುಗುಣ
ನನವರತ ಬಹುಸತ್ವದಲಿ ಮತ್ಸರಿಸಿ ಕಾದಿದನು ೨೪

ಆಗಳೇ ತೆಗೆದುರಗ ಬಾಣವ
ತೂಗಿ ಬಿಟ್ಟನು ನಿನ್ನ ಕರ್ಣನ
ಲಾಗುವೇಗವನೇನನೆಂಬೆನು ಚಾಪತಂತ್ರದಲಿ
ಸೀಗುರಿಸುವುರಿವಿಷದ ಲೋಳೆಯು
ಲಾಗಿಸುವ ನಾಲಗೆಯ ಸುಯ್ಲಿನ
ಬೇಗುದಿಯ ತೊಡಬೆಗಳ ಹಾವ್ ತುಡುಕಿದವು ಥಟ್ಟಿನಲಿ ೨೫

ಎಲೆಲೆ ಹಾವೋ ಹಾವು ಕೆಂಡದ
ಮಳೆಯು ತಡೆವನೆ ಕೊಡೆಯೆನುತ ಕಳ
ವಳಿಸಿತಲ್ಲಿಯದಲ್ಲಿ ಹರಿಮುದು ಹುದುಗಿ ಹೊದರೊಡೆದು
ಬಲುವಿಷದ ಕಿಱುವನಿಯ ಹಾವಿನ
ಮಳೆಗೆ ಗರುಡಾಸ್ತ್ರದಲಿ ತನ್ನಯ
ದಳಕೆ ಒಡಿದನು ಕೊಡೆಯುನರೆಘಳಿಗೆಯಲಿ ಕಲಿ ಪಾರ್ಥ ೨೬

ಆತನಲಿ ಕೌಬೇರ ಮಾರ್ಗಣ
ವೀತನಲಿ ವಾಯುವ್ಯಶರ ಬಳಿ
ಕಾತನಲಿ ನೈರುತ್ಯವಿತ್ತಲು ಸೋಮವರ್ತಿಶರ
ಆತನಲಿ ಸಾಮುದ್ರರೋಷಣ
ವೀತನಲಿ ವಡಬಾಸ್ತ್ರವಿಂತಿರ
ಲಾತನೀತನ ಸಮರ ಸರಿ ನರನಾಥ ಕೇಳೆಂದ ೨೭

ಸೈರಿಸರ್ಜುನ ಶಿವನೊಡನೆ ನೀ
ಹೋರಿದಾತನು ನಿನ್ನ ಕೊಲುವಡೆ
ಶೀರದೇ ತಪ್ಪೇನು ತಾಳುವಿತು ಪೇಳಲೇಕೆನುತ
ಕೂರಲಗಿನಂಬುಗಳ ಓಳುಕಿನ
ಸಾರದಲಿ ಮುದ್ರಿಸಿದನುದಯದ
ಲಾರನಿದಿರಲಿ ಕಂಡನೋ ಕಡು ನೊಂದನಾ ಪಾರ್ಥ ೨೮

ನರನ ಬಿಗಿದುದು ಪೂರ್ಥೆ ಭೀಮನ
ಹರಣ ಕೊರಳಲಿ ಮಿಡುಕುತದೆ ಮುರ
ಹರನುಸುರ ವೈಹಾಳಿಯುಬಿ ಮೂಗಿನಲಿ ಮೋಹರಿಸಿ
ಬಿರುದ ಸಾತ್ಯಕಿ ನಕುಲ ಸಹದೇ
ವರಿಗದಾವುದು ಹದನು ನಾವಿ
ನ್ನುಪಾಯವನೈ ನೀವ್ ನೋಡಿಯೆಂದನು ನಗುತ ಕುರುರಾಯ ೨೯

ಕಳಶಜಲದಲಿ ಮೆಯ್ಯ ನೆತ್ತರ
ತೊಳೆದು ಪೊಸ ಮಡಿವರ್ಗದಲಿ ಮುರಿ
ಪುಲಕ ಬಿಗಿದನು ಧರಿಸಿ ಸಾಧು ಜವಾಜಿ ಕಸ್ತುರಿಯು
ಉಳಿಯ ಹೊಸ ಸೀಸಕದ ಕವಚವ
ನಳವಡಿಸಿ ಕರ್ಪುರದ ಕವಳದ
ಹಳುಕ ಹಾಯಿಕಿಕೊಳುತ ಕೊಂಡನು ಮತ್ತೆ ಗಾಂಡಿವವ ೩೦

ಎಲೆಲೆ ಕರ್ಣ ಕಿರೀಟಿಯುಜುಬಿಗೆ
ನಿಲುವುದರಿದ್ದೈ ಹಾವನರೆಗಡಿ
ದುಳುಹಿ ಕೆಡಿಸಿದೆ ಪಾಪಿರಾಯನ ರಾಜಕಾರಿಯವ
ತೊಲಗಿಸುವೆನೇ ರಥವನೆನೆ ಹೆ
ಕ್ಕಳಿಸಿ ಜಜಿದನು ಕರ್ಣ ಶಲ್ಯನ
ನೆಲಪೊ ಘಡ ನೋಡೆನುತ ತೆಗೆದೆಚ್ಚನು ಧನಂಜಯನ ೩೧

ಜೋಳವಿಸಿದನು ಶಲ್ಯನನು ನಿಗೆ
ಸೂಕನಿಸಿದನು ಭುಜವನುಬ್ಬಿ ಸೊ
ಳ್ಳಾಳವಿಸಿದನು ಚಾಪಗಾನಸ್ತ್ರಾಸಕವನಜಿಂದು
ಮೋಳವಿಸಿ ನಿಜರಥವ ಕೆಲದಲಿ
ಜೋಳವಿಸಿ ಹುಡಿಯೆಂಬನಹಿತನ
ಪಾಳಿಸುವಡಂಬಿದೆಯೆನುತ ತೂಗಿದನು ಮಾರ್ಗಣೆಯ ೩೨

ಪೂತು ಮಝುರೇ ಕರ್ಣವಿಶಿಖ
ವ್ರಾತವೊಂದಿನಿತಿಲ್ಲ ಲಂಕೆಯ
ಘಾತಕರ ಚಾಪಳವ ಕಂಡೆನು ಚಾಪತಂತ್ರದಲಿ
ಈತನತಿಶಯ ಬಾಣರಚನಾ
ಜಾತಿಯಿದು ಭೀಷ್ಮಾದಿ ಸುಭಟ
ವ್ರಾತಕೆಲ್ಲಿಯದೆಂದು ತಲೆದೂಗಿದನು ಹನುಮಂತ ೩೩

ಉಗಿದನುರಗಾಸ್ತ್ರವನು ಪೊಮ್ಮು
ಡಿಗೆಯೊಳಗೆ ಹೊರಕಯ್ಯ ಗಾಳಿಗೆ
ಹೊಗೆಯ ಹೊದರಿನ ಹೊರಳಿ ಹಬ್ಬಿತು ಕೂಡೆ ಕಿಡಿಯಿಡುತ
ಗಗನ ಗಮನದ ನಿಖಿಳ ವಿಹಗಾ
ಳಿಗಳು ಬೆಂದವು ಗಾಢ ಗರಳದ
ಸೊಗಡ ಸೋಂಕಿಗೆ ಕಂಠಣಿಸಿತ್ತರೊಡ್ಡು ಕಳವಳಿಸಿ ೩೪

ಹೊರಿಯುವರು ಮರನಾದರಾ ರಥ
ತುರಗತತಿ ಲಟಕಟಿಸಿದವು ನಿ
ಬ್ಬರದ ಬೆರಗಿನೊಳದ್ದು ಹೋದನು ಶಲ್ಯ ನಿಮಿಷದಲಿ
ಉರಿ ಛಡಾಳಿಸಿ ಪ್ರತ್ಯತಿಯ ಪಂ
ಜರದೊಳಗೆ ಪಲ್ಲವಿಸಿತುಬ್ಬಿದ
ಹೊರಳಿ ಹೊಗೆಯಂಬರವ ತುಂಬಿತು ಭೂಪ ಕೇಳೆಂದ ೩೫

ಮೂಡಿಗೆಯೊಳಂಬುಗಿದು ತಿರುವಿಗೆ
ಹೂಡಲೀ ಪದನಾಯಿತ್ತು ಚಾಪದೊ
ಳೋಡಿಸಿದಡೇನಹುದು ಹರ ಹರ ಹರ ಮಹಾಸ್ತ್ರವಲಿ
ನೋಡಿರೈ ಗುರುಸುತ ಕೃಪಾದಿಗ
ಳೋಡದಿರಿ ನೀವೆನುತ ಪುಳಕದ
ಬೀಡಿನಲಿ ಮೈಮುಳುಗಿ ತೂಗಾಡಿದನು ಕುರುರಾಯ ೩೬

ಹೂಡಿದನು ತಿರುವಿನಲಿ ಬಾಣದ
ಝಾಡಿಯುರಿನಾಲಗೆಯು ನಿರುತವ
ನೋಡಿ ಪಾರ್ಥನ ಗಳಕೆ ಸಂಧಾನವ ನಿಧಾನಿಸುತ
ನೋಡಿದನು ಶಲ್ಯನನು ಮಿಗೆ ತೂ
ಗಾಡಿದನು ಕೌರವನ ಪುಣ್ಯದ
ಬೀಡು ಬಿಡುಪಡೆ ಕಾಣಲಹುದಿಂದೆಂದನಾ ಕರ್ಣ ೩೭

ಏನು ಸಾರಥಿ ಸರಳು ಪಾಂಡವ
ಸೇನೆಯನು ಗೆಲಲಹುದೆ ಪಾರ್ಥನ
ಮಾನಿನಿಗೆ ವೈಧವ್ಯ ದೀಕ್ಷಾವಿಧಿಯ ಕೊಡಲಹುದೆ
ಅನಲಮ್ಮುವರುಂಟೆ ನಿನಗಿದು
ಸಾನುರಾಗವೆ ಹೇಳೆನಲು ರವಿ
ಸೂನುವಿನ ರೌದ್ರಾಸ್ತ್ರವನು ಹೊಗಳಿದನು ಮಾದ್ರೇಶ ೩೮

ಲೇಸು ಮಾಡಿದೆ ಕರ್ಣ ಕೌರವ
ನೀಸುದಿನ ಸಾಕಿದ ಫಲವ ನೀ
ನೈಸಲೀ ತೋರಿದವನೀ ನೃಪಸೈನ್ಯ ಶರಧಿಯಲಿ
ಈಸು ಕಾಳಿಗವಾದುದೀ ಕ
ಟ್ಟಾಸುರದ ಸರಳೆಲ್ಲಿ ಗುಪ್ತಾ
ವಾಸವಾದುದು ಪೊತುರೆಂದನು ಶಲ್ಯನಿನಸುತನ ೩೯

ಆಯಿತಿದು ಸರಳೊಳ್ಳಿತೈ ಕುರು
ರಾಯನಭ್ಯುದಯ ಪ್ರಪಂಚ ವಿ
ದಾಯಿತಾ ಸಂಧಾನವೊಡಬಡದೆನ್ನ ಚಿತ್ತದಲಿ
ಸಾಯಕವ ನೀ ತಿರುಗಿ ತೊಡು ನಿ
ರ್ದಾಯದಲಿ ನೆಲನಹುದಲಾ ರಾ
ಧೇಯ ಎಂದನು ಶಲ್ಯನವನೀಪಾಲ ಕೇಳೆಂದ ೪೦

ಕೊರಳಿಗೊಡ್ಡಲು ಹೊಳ್ಳುವಾಜಿಂದ
ಸರಳು ಮಕುಟವ ತಾಗುವುದು ಮೇ
ಣಾರಕೆ ತೊಟ್ಟರೆ ಕೊಯ್ವುದೀಗಳೆ ಕೊರಳನರ್ಜುನನ
ಮರಳಿ ತೊಡು ತೊಡು ಬೇಗ ಕೌರವ
ನರಸುತನವುಳಿವುದು ಕಣಾ ಹೇ
ವರಿಸದಿರು ಹೇಳುವುದು ಪಥ್ಯವಿದೆಂದನಾ ಶಲ್ಯ ೪೧

ಒಂದು ಶರಸಂಧಾನ ನಾಲಗೆ
ಯೊಂದು ನಮ್ಮಲಿ ಕುಟಿಲವಿದ್ಯವ
ನೆಂದು ಕಂಡೈ ಶಲ್ಯ ನಾವಡಿಯಿಡೆವಧರ್ಮದಲಿ
ಇಂದು ಹೂಡಿದ ಶರವನಿಳುಹುವು
ದೆಂದವೇ ನೀನಱಿಯೆ ಹೆಱಿಸಾ
ರೆಂದು ತಿರುವಿನೊಳಂಬನೊದೆದನು ಕರ್ಣ ಬೊಬ್ಬಿಡುತ ೪೨

ಹಾ ವೃಕೋದರ ನಕುಲ ಹಾ ಸಹ
ದೇವ ಹಾ ಧರ್ಮಜ ಧನಂಜಯ
ಹಾವಿನಗ್ನಿಗೆ ಹವಿಗಳಾದಿರೆ ಹಾ ಮಹಾದೇವ
ಸಾವಡೆಯು ಶಸ್ತ್ರಪ್ರಹಾರದ
ಸಾವು ಕ್ಷತ್ರಿಯ ಕುಲಕೆ ಭಂಗವೆ
ಹಾ ವಿಧಿಯೆ ಎಂದೊದಱಿ ಮಱುಗಿತು ಪಾಂಡುಸುತೆ ಸೇನೆ ೪೩

ನಡುಗುತಿರ್ದುದು ಸುರಕಟಕ ಬೊ
ಬ್ಬಿಡುತಲಿರ್ದುದು ನಮ್ಮ ಬಲ ಮೊಱೆ
ಯಿಡುತಲಿರ್ದುದು ಪಾರ್ಥನಳವಿಗೆ ಪಾಂಡುಸುತಸೇನೆ
ತಡೆಯದೈದಂಗುಲಕೆ ರಥವನು
ನೆಡಿಸಿದನು ಹರಿ ಧರೆಗೆ ಪಾರ್ಥನ
ಮುಡಿಯ ಸರಿಸಕೆ ಬಾಣ ಬಂದುದು ಕೊಲುವ ತವಕದಲಿ ೪೪

ಅಣೆದುಗಿಹಿ ಮುಕುಟವನು ತಾರಾ
ಗಣದ ಮಧ್ಯದ ಚಂದ್ರಮನ ಕೊ
ಯ್ಯುಣದೊಳಡಸಿದ ರಾಹುವಿನ ರಹಿಯಾಯ್ತು ನಿಮಿಷದಲಿ
ಕುಣಿಕೆ ಮುರಿದುದು ಮೌಕ್ತಿಕದ ಕೆ
ಲಣದ ವಜ್ರದ ಮಾಣಿಕದ ವರ
ಮಣಿನಿಕರ ರಕುತ ನಿದುಕೊಡಸೂಸಿದಂಪದಲಿ ೪೫

ಬಿದ್ದುದೇ ಫಲಗುಣನ ತಲೆಯಡಿ
ಗದ್ದುದೇ ನಮ್ಮಾಟ ಜಯವಧು
ಕದ್ದಳೇ ರಣದೊಸಗೆಗೇಸ್ಟಳಿ ದ್ರೌಪದಾದೇವಿ
ಇದ್ದುದೇ ಧರ್ಮಜನ ಸಿರಿ ತಳ
ಕದ್ದುದೇ ನಮ್ಮೊಡಲನುಸು ಬಿಡ
ದಿದ್ದುದೇ ಹಾ ಎನುತ ಭೀಮಾದಿಗಳು ಹೊರಳಿದರು ೪೬

ವಿಷದ ತೆಗೆರಳು ದ್ರುಪದ ಸುತೆ ಕೈ
ಮುಸುಕಿನಲಿ ಚೀಲಾಯುವುಗಿದನು
ವಸುಮತೀಶ್ವರನಾ ಮುಹೂರ್ತಕೆ ದೂತನೈತಂದು
ಒಸಗೆ ಜೀಯರ್ಜುನನ ಮುಕುಟದ
ಬೆಸುಗೆ ಮುರಿದುದು ಹರಿ ವರೂಥವ
ಕುಸಿಯಮೊತ್ತಿದನಿಂದು ತಪ್ಪಿತು ತೀವ್ರ ಫಣಿಬಾಣ [ಎಂದನು] ೪೭

ತೊಡುತೊಡಿಸ್ಸೊಮ್ಮೆನ್ನ ನಕಟಾ
ಕೆಡಿಸಿದೆಯಲಾ ರಾಜಕಾರ್ಯವ
ನುಡಿದು ಹೇಳನೆ ನಿನ್ನ ಸಾರಥಿ ಲಕ್ಷ್ಯಭೇದನವಾ
ಅಡಗಲಿನ್ನೇರೇಳು ಭುವನದೊ
ಳಡಗಿತೆಂಬೆನು ನರನನೆಂದವ
ಗಡಿಸಿ ಕರ್ಣನ ಬೇಸನ ಬೇಡಿತು ಮತ್ತೆ ಫಣಿಬಾಣ ೪೮

ಶಿವನ ಮಱೆಯನು ಹೊಗಲಿ ನೀರ್ ವಾ
ಸವನ ಸೀಮೆಯೊಳಿರಲಿ ಪಾತಾ
ಳವನು ಹೊಗಲಂಬುಧಿಯ ಮುಳುಗಲಿ ಜವನಸಕೆಳೆಗೊಳಲಿ
ಭುವನಕತಿಶಯವಾಗಿ ರಣದಲಿ
ತಿವಿವೆ ಪಾರ್ಥನನೆನಲು ಕೇಳಿದು
ರವಿಯ ಮಗ ಬೆಱಗಾಗಿ ಬೆಸಗೊಂಡನು ಶಿಳೀಮುಖವ ೪೯

ಎಸಲು ಸರಳುಗಳತ್ತಲೇ ಕೀ
ಲಿಸುವವಲ್ಲದೆ ಮತ್ತೆ ಮರಳಿದು
ಬೆಸನ ಬೇಡುವ ಬಾಣನೆಂಬುದನಱಿಯೆ ನಾ ಕೇಳ್ವ
ವಿಶಿಖ ನೀನಾರೆನಲು ಕಿಡಿಗಳ
ಕುಸುರಿಗಳನುಗ್ಘರಿಸಿ ನುಡಿದುದು
ವಿಷಮನಱಿಯಾ ಕಾಳಕೂಟಕರಂಡಕಾನನದ ೫೦

ಉರಗಪತಿ ತಾನಶ್ವಸೇನನು
ಸುರಪತಿಯ ಖಾಂಡವದೊಳಿಹೆನದ
ನುರುಹಿದಂದಿನೊಳೆನ್ನನರೆಗಡಿದೀ ದುರಾತ್ಮಕನ
ಶಿರವನರಿವೆನು ಬೇಗ ತೊಡು ತೊಡು
ಬೆರಗ ಹಾರದಿರೆನಲು ಸತ್ಯದ
ಪರಮ ಸೀಮೆಗೆ ತಪ್ಪಲಮ್ಮದೆ ಕರ್ಣನಿಂತೆಂದ ೫೧

ಅಱಿಯೆ ನಾ ನೀನೆಂದು ಲೋಗರ
ಮಱೆಯಲರಿಗಳ ಗೆಲುವ ಕರ್ಣನೆ
ಯಱಿಯಲಾ ನೀನೆನ್ನ ಹವಣನು ತೊಡುವುದಿಲ್ಲೆನಲು
ಮುಱುಗಿದನು ಶಲ್ಯನು ನೃಪಾಲನ
ನಿಱಿದೆಯೋ ರಾಧೇಯ ನೀನೆಂ
ದುಱುಬೆಯಲಿ ಕೋಪಿಸುತ ಕರ್ಣನ ಬಯ್ದು ಗಜರಿದನು ೫೨

ತೊಡು ತೊಡೆಲವೋ ಶರವ ರಿಪುವನು
ತಡೆಗಡಿವೆನೆಂದೊದಱುತದೆ ನೃಪ
ನೊಡಿಕಸಕೆ ನೀ ಬಯಸಿದಾ ಮತವುಂಟೆ ರಿಪುಗಳಲಿ
ನುಡಿದ ಭಾಷೆಗೆ ನಾವು ಹೇಳಿತ
ನೊಡಬಡುವ ನೀನಲ್ಲ ಕುರುಪತಿ
ಬಿಡದೆ ನಿಮ್ಮನು ಸಲಹಿತಪ್ಪುಪಕಾರಿ ನೀನೆಂದ ೫೩

ಎಲವೊ ನಿನ್ನನು ಜಗವಱಿಯೆ ಕ
ಬ್ಬಿಲನ ಮಗನನು ಮಱಸಿ ಕುರುಪತಿ
ಕುಲಜನನು ಮಾಡಿದನಲಾ ಒಡನುಂಡು ಪತಿಕರಿಸಿ
ನೆಲನು ಹೇಸದೆ ನಿನ್ನ ಕೀರ್ತಿಯ
ಬೆಳಗು ಮಾಸದೆ ಬಿಡದೆ ಸಾಕಿದ
ಹೊಲೆಯನನವಸರಕೊದಗುವನು ನೀ ಕಷ್ಟ ಹೋಗೆಂದ ೫೪

ನಂಬಿ ಹಿಡಿದರೆ ನದಿಯ ಮಗ ಹಗೆ
ಯಂಬಿಗಿತ್ತನು ಕಾಯುವನು ಮಗ
ನೆಂಬ ನೆವದಲಿ ತನುವ ಬಿಸುಟನು ಗರುಡಿಯಾಚಾರ್ಯ
ಅಂಬು ಬೆಸನನು ಬೇಡಿದಡೆ ನೀ
ನೆಂಬನೀ ವಿಧಿಯಾದೆ ಮೂವರ
ನಂಬಿ ಕೌರವ ಕೆಟ್ಟನಕಟಕಟೆಂದನಾ ಶಲ್ಯ ೫೫

ಮಾತೆಗಿತ್ತೆನು ಭಾಷೆಯನು ನಿ
ನ್ನಾತಗಳೊಳೈವರೊಳಗಾರಿದಿ
ರಾಂತಡೆಯು ತಲೆಗಾಪು ಬಿಡುವೆನು ಕೊಲುವುದಿಲ್ಲೆಂದು
ಮಾತುಗಳು ಕವಲಾದ ಬಳಿಕಿ
ನ್ನೇತಕೀ ತನುವಿದನು ಪಾರ್ಥನ
ಘಾತಿಗೊಪ್ಪಿಸಿ ಕಳೆವೆನೆಂದನು ತನ್ನ ಮನದೊಳಗೆ ೫೬

ಮರುಳಲಾ ಮಾದ್ರೇಶ ಮರಳಿದ
ಶರವ ತೊಡುವೆನೆ ಸೈರಿಸೆನೆ ಕಾ
ತರಿಸಿ ವಾಘೆಯ ಬಿಸುಟು ಕಿಡಿಕಿಡಿವೋಗಿ ಖಾತಿಯಲಿ
ಅರಸನೊಲಿದಂತಾಗಲೆನ್ನದು
ಮರುಳುತನ ಕುಲಹೀನನಲಿ ಗುಣ
ವಜಿಸಲೇಕೆಂದೆನುತ ಧುಮ್ಮಿಕ್ಕಿದನು ಧಾರುಣಿಗೆ ೫೭

೯. ಕೊಲ್ಲನೇ ಅಭಿಮನ್ಯುವನು!

ಕೇಳು ಧೃತರಾಷ್ಟ್ರಾವನಿಪ ನಿ
ನ್ನಾಳ ಜಯಸಿರಿ ಸರ್ಪಬಾಣದ
ಮೊಳೆಸಿದ ಸೀಮೆಯಲಿ ನಿಂದುದು ಹಲವು ಮಾತೇನು
ಹೇಳಿ ಫಲವೇನಿನ್ನು ಮುಂದಣ
ಕಾಳಗದ ಕರ್ಣಾಮೃತದ ಮಳೆ
ಗಾಲಮಾಡು ವಿಲೋಚನದ ಮಳೆಗಾಲವಾಯ್ತೆಂದ ೧

ಅಗಳಳಿದುದು ಸರ್ಪಶರ ತಾ
ನಾಗಳೇ ಗುರುರಾಯ ಭುಜವನು
ನೀಗಿದಳು ಜಯವಧು ಧರಾವಧು ಭಾಗ್ಯವಧು ಸಹಿತ
ಆಗಳೇ ಬಿನ್ನೈಸನೇ ರಣ
ದಾಗು ಹೋಗಿನ ಹೊಱಗೆಯನು ತಾ
ನೀಗಿ ಬಿಸುಟನು ತನ್ನ ಸತ್ಕೀರ್ತಿಗೆ ಕಲಿಕರ್ಣ ೨

ಬಾಯಿಬಡಿಕನಲಾ ವೃಥಾ ರಾ
ಧೇಯ ಮದವೇಕಿನ್ನು ನಿನಗಹಿ
ಸಾಯಕದ ಹಾವಿನಲಿ ನೀಗಿಸುವೆನು ನೆತ್ತರಲಿ
ತಾಯ ಬಸುಱಿಂಬಿಲ್ಲ ನೀನುಳಿ
ವಾಯತಿಕೆಯಿನ್ನೆಂತು ಕೌರವ
ರಾಯ ನೋಡಲಿ ಕಡಿಯುತ ತೆಗೆದೆಸ್ಗನಾ ಪಾರ್ಥ ೩

ಧರೆ ನೆನೆದ ದುಷ್ಕೃತವದೇನಂ
ದರಸ ಬೆಸುಗೊಂಬೈ ನಿರಂತರ
ಸುರಿವ ರುಧಿರಾಸಾರದಲಿ ಕೆಸರೇಳ್ದು ಕಣನೊಳಗೆ
ಹರಿವ ಬಿಂಕದ ರಥದ ಗಾಲಿಯು
ಗರುವತನ ಗಾಳಾಯ್ತಲೇ ಖೊ
ಸ್ಫುರಿಸಿ ತಗ್ಗಿತು ತೇರು ತಡೆದುದು ಭಟನ ಸಾಹಸವ ೪

ಗಾಲಿಯುದ್ದವು ಕೂಡೆ ಯಂತ್ರದ
ಕೀಲುಗಳು ಕಳಚಿದವು ಹಯತತಿ
ತೂಳಿ ಸತ್ವದಲೌಕಿ ಸೆಳೆದವು ಕುಸಿದು ನಿಜಮುಖವ
ಮೇಲು ಮಿಡುಕದು ತೇರು ಕುರುಬಲ
ಜಾಲ ಜರಿದುದು ವೈರಿ ಬಲದಲಿ
ಸೋಲವಿಸಿದರು ಭುಜವನೊದಱುತು ಬೆರಳ ಬಾಯ್ಗಳಲಿ ೫

ಮೂಗಿನಲಿ ಬೆರಳಿಟ್ಟು ಮುಕುಟವ
ತೂಗಿ ತೊನೆದನು ಪೂತು ಮಝು ನಿ
ರ್ಭಾಗಧೇಯನು ರಾಯನಕಟಾ ಶಿವ ಮಹಾದೇವ
ಈಗಳಿದು ತಾನೇನು ವಿಧಿ ಬರೆ
ದೋಗಟೆಯೊ ಕುರುವಂಶ ವಜ್ರದ
ಬೇಗಡೆಯೊ ಮಾಮಾ ಎನುತ ಮುಱುಗಿದನು ಕಲಿ ಕರ್ಣ ೬

ಇಳುಹಿದನು ರಥದೊಳಗೆ ಚಾಪವ
ನಳವಡಿಸಿದನು ಸೆಱಗನಲ್ಲಿಂ
ದಿಳಿದು ಗಾಲಿಯನಲುಗಿ ಪಾರ್ಥನ ನೋಡಿ ನಸುನಗುತ
ಎಲೆ ಧನಂಜಯ ಸೈರಿಸುವುದರೆ
ಗಳಿಗೆಯನು ರಥವೆತ್ತಿ ನಿನಗಾ
ನಳವಿಗೊಡುವೆನು ತನ್ನ ಪರಿಯನು ಬಳಿಕ ನೋಡೆಂದ ೭

ರೂಢಿಸಿದ ಭಟ ನೀನು ಪಂಥದ
ಪಾಡುಗಳ ಬಲ್ಲವನು ಶಾಸ್ತ್ರವ
ಷೋಡಿಗಳೆವವನಲ್ಲ ಲೌಕಿಕ ವೈದಿಕ ಸ್ಥಿತಿಯ
ನಾಡೆ ಬಲ್ಲಿರಿ ಶಸ್ತ್ರಹೀನರ
ಕೂಡೆ ವಾಹನಹೀನರಲಿ ಕೈ
ಮಾಡಲನುಚಿತವೆಂಬ ಮಾರ್ಗವನೆಂದನಾ ಕರ್ಣ ೮

ಎನುತ ಗಾಲಿಯನಲುಗಿ ಕೀಲ
ಚ್ಛಿನಲಿ ಮುಂಗೈಗೊಟ್ಟು ಮೊಳಕಾ
ಲಿನಲಿ ಧರಣಿಯ ನೌಕಿ ತಗ್ಗಿದ ರಥವ ನೆಗಹುತಿರೆ
ದನುಜರಿಪು ಚಮ್ಮಟಿಗೆಯಲಿ ಫಲು
ಗುಣನ ತಿವಿದನು ನೋಡು ರಾಧಾ
ತನುಜನಿರವನು ಬೇಗ ಮಾಡೆಂದರ್ಜುನನ ಜಱಿದ ೯

ಎಸು ಮರುಳೆ ಗಾಂಡೀವಿಯಾಪ
ತ್ತಿಸಗಿದಾಗಳೆ ಹಗೆಯ ಗೆಲುವುದು
ವಸುಮತೀಶರ ನೀತಿ ತೊಡು ತೊಡು ದಿವ್ಯಮಾರ್ಗಣವ
ವಿಷಮ ವೀರನು ರಥವ ಮೇಳಾ
ಪಿಸದ ಮುನ್ನವೆ ಹಱುವ ನೆನೆ ಸೈ
ರಿಸಿದ ಬಳಿಕೀ ಕರ್ಣ ಕೈಕೊಂಬನೆ ತ್ರಿಯಂಬಕನ ೧೦

ಏನನೆಂಬೆನು ಜೀಯ ಕರ್ಣಂ
ಗೇನಹನೊ ಫಲುಗುಣನು ಬಳಿಕಾ
ದಾನವಾರಿಯ ನುಡಿಯ ಕೇಳಿದು ಕೇಳಿದಾಕ್ಷಣಕೆ
ಗ್ಲಾನಿಯಲಿ ಮುಳುಗಿದನು ಮುನಿದಭಿ
ಮಾನ ಸರ್ಪನ ಕಡೆಹಿ ಧೈರ್ಯನಿ
ಧಾನವನು ಕೈಸೂರೆಗೊಂಡುದು ಶೋಕವರ್ಜುನನ ೧೧

ಮುಕ್ಕಿದನು ಮುಹಿಮೆಯನು ಕಂಗಳು
ಮುಕ್ಕಳಿಸಿದವು ನೀರನಹಿತನೊ
ಳುಕ್ಕುವನುರಾಗದಲಿ ಕೊಂಡನು ಬಳಿಕ ವೀಳೆಯವ
ಸಿಕ್ಕಿದನು ಕರುಣಾಲತಾಂಗಿಯ
ತೆಕ್ಕೆಯಲಿ ನಾನೇನ ಹೇಳುವೆ
ನೊಕ್ಕಲಿಕ್ಕಿತು ಶೋಕವರ್ಜುನನಂತರಂಗದಲಿ ೧೨

ತೇರಿನಲಿ ಚಾಚಿದನು ಮೆಲ್ಲನೆ
ಭಾರಿ ಧನುವನು ಕಯ್ಯ ಕಣೆಗಳ
ನೋರೆಯಲಿ ಸೈತಿರಿಸೆ ಕಂಡನು ಮತ್ತೆ ಮುರವೈರಿ
ಹಾರವೇಕೈ ಕಂಗಳಲಿ ಕ
ಸ್ತೂರಿಯೇಕೈ ಕದಪಿನಲಿ ಶೃಂ
ಗಾರವಿದು ವಿಪರೀತವೆಸ್ಸೈ ಪಾರ್ಥ ಹೇಳೆಂದ ೧೩

ದೇವ ಹಗೆಯಾಗಿರನು ಕರ್ಣನಿ
ದಾವ ಹದನೆಂದರಿಯೆ ಮನದಲಿ
ನೋವು ಮಿಗುವುದು ಕೈಗಳೀಳವು ತುಡುಕುವರೆ ಧನುವ
ಜೀವವೀತನ ಮೇಲೆ ಕರಗುವು
ದಾವ ಸಖನೋ ಶತ್ರುವೆಂಬೀ
ಭಾವನೆಯು ಬಗೆ ಬೀಳುಕೊಂಡುದು ಕರ್ಣನಾರೆಂದ ೧೪

ಋಷಿಗಳನುಮತಿಯಿಂದ ಕುಂತಿಯು
ಬಸುಱಲೇನುದಯಿಸನಲೇ ನೀ
ನಸುರರಿಪು ಬಹು ಕಪಟನಾಟಕ ಸೂತ್ರಧಾರನಲೆ
ವಸುಮತಿಯ ಭಾರವನು ಸಲೆ ಹಿಂ
ಗಿಸುವ ಕೃತ್ಯವು ನಿನ್ನದೆನಗು
ಬ್ಬಸವಿದೇನೆಂದರಿಯೆನಕಟಾ ಕರ್ಣನಾರೆಂದ ೧೫

ಧರೆಯ ಬಿಡುವೆವು ಕುರುಪತಿಗೆ ನಾ
ವಱುವರೊಡವುಟ್ಟಿದರು ವಿಪಿನಾಂ
ತರದೊಳಗೆ ಭಜಿಸುವೆವು ನಿನ್ನನು ಭಾವಶುದ್ಧಿಯಲಿ
ತೆರಳುವೀ ಸಿರಿಗೋಸುಗರ ಸೋ
ದರನ ಕೊಲುವೆನೆ ಕೃಷ್ಣ ಕರುಣಿಸು
ಕರುಣಿಸಕಟಾ ಕೃಷ್ಣ ಕರುಣಿಸು ಕರ್ಣನಾರೆಂದ ೧೬

ಅರಸ ಕೇಳೈ ಬಳಿಕ ಪಾರ್ಥನ
ಕರುಣರಸದಾಳಾಪ ವಾಗ್ವಿ
ಸ್ತರಕೆ ಮನದಲಿ ಮುಳಿಸಿಗಿದನು ಮುರವೈರಿ ನಸುನಗುತ
ಕೆರಳಿದನು ಮಾತಿನಲಿ ಸುಡು ಬಾ
ಹಿರನಲಾ ನೀ ನಿನ್ನ ವಂಶಕೆ
ಸರಿಯೆ ಸೂತನ ಮಗನಿದೇನೆಂದಸುರರಿಪು ಜರೆದ ೧೭

ವಾಸಿಗಾದುದೆ ಜಾತಿಸಂಕರ
ಬೇಸಱಾಯಿತೆ ಧೃತಿಗೆ ಕಲಿತನ
ಕೀಸು ಮೊಲೆಗಳು ಮೂಡಿದವಲಾ ಪಾರ್ಥ ಸಮರದಲಿ
ಹೊಸಕದ ಛಲವೀಯಹಂಕೃತಿ
ಮೀಸಲಳಿದುದೆ ಶಿವಾಶಿವಾ ನಿ
ರ್ದೋಷದಲಿ ಬಹು ದೋಷವಿದು ವಿಪರೀತವಾಯ್ತೆಂದ ೧೮

ಹೇಳು ಹೇಳಿನ್ನೊಮ್ಮೆ ಧರ್ಮವ
ಕೇಳಿದಱಿಯೆವು ನಿಮ್ಮ ಕಯ್ಯಲಿ
ಕೇಳಲಾಗದೆ ರಾಜಧರ್ಮ ಪುರಾಣಸಂಗತಿಯ
ಆಳಿವನಘಾಟವೆ ದೊರಾರಿಸಿ
ಸೋಲಿಸುವುದೇನರಿದೆ ಬಲುಗೈ
ಯಾಳಲಾ ನೀ ರಣಕೆ ಡಿಟ ವಸುದೇವನಾಣೆಂದ ೧೯

ಈಗಲೀ ಧರ್ಮಶ್ರವಣ ನೀ
ನಾಗಳೇರಿಸಿ ನುಡಿದ ಭಾಷೆಗೆ
ಮೂಗು ಹೋದುದೆ ಮುಱಿದಲಾ ಮಾತುಗಳು ಹಳುಸುವುವೆ
ಹೋಗಲೆಲೆ ಮರುಳೇ ವಿಭಾಡಿಸು
ಬೇಗದಲಿ ಬಹು ರಾಜಕಾರ್ಯವ
ನೀಗಳೇ ತಿದ್ದುವೆನು ತೊಲಗಿಸು ಸೂತಜನ ಶಿರವ ೨೦

ಅಕಟ ನಿಷ್ಕರುಣಿಯೆ ವೃಥಾ ಪಾ
ತಕವಿದೇಕೈ ಹೇಳು ಜಯಕಾ
ಮುಕರು ನಾವೊಲ್ಲದಡೆ ನಿಮಗೇಕೀಸು ನಿರ್ಬಂಧ
ಪ್ರಕಟ ಕುರುವಂಶದಲಿ ಯದುರಾ
ಜಕರೊಡನೆ ಹಗೆಯಿಲ್ಲಲೇ ಮತಿ
ವಿಕಳನಾದೆನು ಕೃಷ್ಣ ಕರ್ಣನ ಕೊಲುವನಲ್ಲೆಂದ ೨೧

ಬಿಸುಟು ಹೋದನು ರಥವ ಸಾರಥಿ
ವಸುಧೆಯಲಿ ರಥವದ್ದು ಕೆಡೆದುದು
ನಿಶಿತ ಮಾರ್ಗಣವಿಲ್ಲ ಕಯ್ಯಲಿ ದಿವ್ಯ ಧನುವಿಲ್ಲ
ಎಸುವಡೆಂತೇಳುವುವು ಕಯ್ ನೀ
ಬೆಸಸುವಡೆ ಮನವೆಂತು ಬಂದುದು
ಬಸುಱಿ ಶಿಖಿ ಬಲುಹಾಯ್ತು ಕರ್ಣನ ಕೊಲ್ಲವನಲ್ಲೆಂದ ೨೨

ಗುರುವನೆಸುವಡೆ ಮೇಣು ಭೀಷ್ಮನ
ಸರಳ ತಡಿಕೆಗೆ ಚಾಚುವಡೆ ಧಿ
ಕ್ಕರಿಸುವಡೆ ಕೃಪ ಶಲ್ಯ ಸೈಂಧವ ಮುಖ್ಯಬಾಂಧವರ
ತೆರಳಿದೆನೆ ತೇರೈಸಿದೆನೆ ಹೇ
ವರಿಸಿದಿನೆ ಹೋರಿದೆನೆ ಕಲಿತನ
ಕರಗಿತೇನೆಂದರಿಯೆ ಕರ್ಣನ ಕೊಲುವನಲ್ಲೆಂದ ೨೩

ಎಲೆ ಧನಂಜಯ ನೀನು ಹಿಮಕರ
ಕುಲದ ಸುಕುಮಾರಕನು ಲೋಕದ
ಕುಲಹೀನನು ಕರ್ಣನಿವ ನಿನಗೆಂತು ಸರಿಯಹನು
ತಲೆಯ ಮಾಱಿ ಶರೀರವನು ಸಲೆ
ಸಲಹಲೋಸುಗ ಕೌರವನ ತಂ
ಬುಲಕೆ ಕಯ್ಯಾಂತವನು ಬಂಧುವೆ ಪಾರ್ಥ ಹೇಳೆಂದ ೨೪

ಕೊಲ್ಲನೇ ಅಭಿಮನ್ಯುವನು ಹಗೆ
ಯಲ್ಲವೇ ಮಾರುತಿಯ ಕೊರಳನು
ಬಿಲ್ಲ ಕೊಪ್ಪಿನೊಳೆಳೆಯನೇ ಕೆಡೆಯೆಸನೆ ಧರ್ಮಜನ
ಖುಲ್ಲ ನೀತಿಯ ನೆನೆಯದಿರು ನೀ
ನೆಲ್ಲಿಯವನೀ ವೈರಿ ಕರ್ಣನ
ಜೆಲ್ಲಿಯವನೆಸು ಮರುಳೆ ಎಂದನು ನಿಜವ ತೋಱಿಸದೆ ೨೫

ಬೀಸಿದನು ನಿಜಮಾಯೆಯನು ದೊ
ಳ್ಳಾಸದಲಿ ಹರಹಿದನು ತಮವನು
ರೋಷವನು ಬಿತ್ತಿದನು ಮನದಲಿ ನರನ ಕಲಿಮಾಡಿ
ಐಸೆ ಬಳಿಕೇನೆನ್ನಖಿಳಗುಣ
ದೋಷ ನಿನ್ನದು ಪುಣ್ಯಪಾಪದ
ವಾಸಿ ನಮಗೇಕೆನುತ ಕೊಂಡನು ಧನುವನಾ ಪಾರ್ಥ ೨೬

ರಥವ ಸಂತೈಸಿದನು ಬಳಿಕತಿ
ರಥ ಭಯಂಕರನೇಱಿದನು ನಿಜ
ರಥವನತಿಹರುಷದಲಿ ತೊಳೆದನು ಚರಣ ಕರತಳವ
ಪೃಥಿವಿ ನೆನದಪಕಾರ ಲೋಕ
ಪ್ರಥಿತವಾಯಿತು ಸಾಕು ಬದುಕಲಿ
ಪೃಥೆಯ ಮಕ್ಕಳೆನುತ್ತ ಕೊಂಡನು ನಗುತ ವೀಳೆಯವ ೨೭

ಧನುವ ಕೊಂಡನು ಹಯನ ಜರ್ಜದ
ರ್ಜನನ ತಱುಬಿದನಖಿಳ ಕುರುಬಲ
ವನಧಿಗಭಯವನಿತ್ತು ಮುಸುಕಿದನಂಬಿನಲಿ ನರನ
ಕನಲಿದವು ನಿಸ್ಸಾಳ ರಿಪುನೃಪ
ಜನವ ಬಯ್ದವು ಕಹಳೆ ಬಹು ವಿಧ
ನಿನದವಲಿ ಗರ್ಜಿಸಿದವೆರಡೊಡ್ಡಿನಲಿ ಘನವಾದ್ಯ ೨೮

೧೦. ಭಟಾಗ್ರಣಿ ನಿನ್ನ ಸರಿದೊರೆ ಎರಡು ಯುಗದಲಿ ಕಾಣೆನು

ಸಾಲದೇ ಕಥೆಯಿನ್ನು ಮೇಲಣ
ಕಾಳೆಗದ ಮಾತುಗಳನಕಟಾ
ಕೇಳಿಜೀವವ ಹಿಡಿಯಲಾಪೈ ತಂದೆ ಧೃತರಾಷ್ಟ್ರ
ಹೇಳುವಡೆ ಕರ್ಣವ್ಯಥೆಯ ಸಂ
ಭಾಳಿಸುವಡೆನಗರಿದು ನುಡಿಗಳ
ಕಾಳಕೂಟವ ಬಡಿಸುವೆನು ಕಿವಿಯಾರೆ ಸವಿಯೆಂದ ೧

ಕುಲಕೆ ಕೀಳಿವನೆಂದು ಟೆಕ್ಕರಿ
ಗಳೆದಡಾ ಬಹು ಬಂಧು ವರ್ಗವ
ನುಳಿದು ಸಿಂಹಾಸನದಲೆನಗಭಿಷೇಕವನು ಮಾಡಿ
ಕುಲದ ಮಲಿನವ ತೊಳೆದು ಕೌರವ
ಕುಲದದೊಳೊಡಜೆಚ್ಚವನಿಪಾಲಕ
ತಿಲಕ ಕುರುಪತಿಗಾಪ್ತರಿಲ್ಲೆಂದಳಲಿದನು ಕರ್ಣ ೨

ನೋಡಿ ದಣಿಯನು ನಿಚ್ಚಲುಚಿತವ
ಮಾಡಿ ದಣಿಯನು ಪ್ರೀತಿ ಮೇಳದ
ಲಾಡಿ ದಣಿಯನು ಶಿವಶಿವಾ ತನ್ನೊಡನೆ ಕುರುರಾಯ
ಓಡಲರಿಯನೆ ದ್ರೋಣ ಭೀಷ್ಮರು
ಗೂಡ ತಲೆಗೊಟ್ಟೈಸಜಿಲೆ ತಾ
ಮಾಡಿತೇನರಸಂಗೆನುತ ಮುರುಗಿದನು ಕಲಿಕರ್ಣ ೩

ಮೊದಲೊಳಾತ್ಮಜರಳಿವನೊಡವು
ಟ್ಟಿದರ ಮೈಯ್ಯಲಿ ಮುರಿದನೊಡವು
ಟ್ಟಿದರು ನೂರ್ವರು ಮಡಿಯೆ ಮುರಿದನು ತನ್ನ ಸುಳುವಿನಲಿ
ಕದನವೆನ್ನಯ ಸುಳಿವನೊಳಕೊಂ
ಡುದು ಸುಯೋಧನ ನೃಪತಿಗಿನ್ನಾ
ಪ್ತದರ ಕಾಣೆನು ಶಿವ ಶಿವಾ ಎಂದಳಲಿದನು ಕರ್ಣ ೪

ಸಲಹಿದೊಡೆಯನ ಜೋಳವಾಳಿಗೆ
ತಲೆಯ ಮಾಱುವುದೊಂದು ಪುಣ್ಯದ
ಫಲವು ಮರಣದ ಹೊತ್ತು ಕೃಷ್ಣನ ಕಾಬ ಸುಕೃತಫಲ
ಇಳೆಯ ಮೇಲೆನಗಲ್ಲದಾರಿಗೆ
ಫಲಿಸುವುದು ತಾ ಧನ್ಯನೆನುತೆನೆ
ಹಳಚದಸುರಾಂತಕನನೀಕ್ಷಿಸುತಿರ್ದನಾ ಕರ್ಣ ೫

ಒಳಗೆ ಹೃದಯಾಂಬುಜದ ಮಧ್ಯ
ಸ್ಥಳದೊಳಗೆ ಮುರವೈರಿಯನು ಹೊಱ
ವಳಯದಲಿ ಫಲುಗುಣನ ಮಣಿರಥದಗ್ರ ಭಾಗದಲಿ
ಹೊಳೆವ ಹರಿಯನು ಕಂಡಸಿದು ಹೊಱ
ಗೊಳಗೆ ಹರಿ ತಾನೆಂಬ ಭೇದವ
ತಿಳಿದು ನಿಜದೆಚ್ಚಱ ಸಮಾಧಿಯೊಳಿರ್ದನಾ ಕರ್ಣ ೬

ಅರಸ ಚಿತ್ತೈಸಾಚೆಯಲಿ ಮುರ
ಹರನಲೇ ನಿಮ್ಮನ್ವಯವ ಸಂ
ಹರಿಸಿದಾತನು ಭೀಮಸೇನನೊ ಪೇಳ್ ಧನಂಜಯನೊ
ಸರಳ ತೊಡು ತೊಡು ಪಾರ್ಥ ಕರ್ಣನ
ಶಿರವನಿಳುಹಾ ಹಾರದಿರು ಹೇ
ವರಿಸದಿರು ತೆಗೆ ದಿವ್ಯಶರವನು ಬೇಗ ಮಾಡೆಂದ ೭

ಈಸು ಕರ್ಣನ ಮೇಲೆ ಬಹಳ
ದ್ವೇಷವೇನೋ ಎನುತ ಮನದಲಿ
ಘಾಸಿಯಾದನು ಪಾರ್ಥ ಕರುಣಕ್ರೋಧಮುಪಟಳಕೆ
ಆಸೆಯಿನ್ನೇಕೆನುತ ಸೆಳೆದನು
ಸೂಸುಗಿಡಿಗಳ ಹೊಗೆಯ ಹೊದಱಿನ
ಮೀಸಲಳಿದಾರೆಂಜಲಿಸದಂಜಳಿಕ ಮಾರ್ಗಣವ ೮

ಪರಮ ಕರುಣಾಸಿಂಧು ಕರ್ಣಂ
ಗಿರದೆ ನಿಜಮೂರ್ತಿಯನು ತೋಱಿದ
ಸುರುತರ ಪ್ರೇಮದಲಿ ಮುಕುತಿಯ ಪದವ ನೇಮಿಸಿದ
ಸರನನೆಚ್ಚರಿಸಿದನು ಕರುಣೆಗೆ
ಕರುಣದನುಸಂಧಾನ ಮಾಣದು
ಧರೆಯೊಳಚ್ಚರಿಯೆನುತ ಬೆಱಗಿನೊಳಿರ್ದ್ದುದಸುರಗಣ ೯

ಹಿಂದೆ ಪಾಶುಪತಕ್ಕೆ ಬಳುವಳಿ
ಬಂದುದಂಜನ ಬಾಣವದಱೊಳೆ
ಯಿಂದ ತೆಗೆದನು ಗಿರಿಜೆಯಂಘ್ರಿಯ ನೆನೆದು ಮಂತ್ರಿಸುತ
ಮಂದರಾಚಲ ನಡುಗೆ ಕಿಡಿಗಳ
ಸಂದಣಿಯ ಸುರಿವಂಬನಾ ರವಿ
ನಂದನನ ಕೊರಳೆಡೆಯೊಳೆಚ್ಚನು ವಾಸವನ ಸೂನು ೧೦

ಅರಸ ಕೇಳೈ ಕರ್ಣನೊಡಲಲಿ
ಪರಮ ತೇಜಃಪುಂಜವೊದೆದು
ಸ್ಫುರಿಸಿ ಹಾಯ್ದುದು ಹೊಳೆದುದಿನಮಂಡಲದ ಮಧ್ಯದಲಿ
ಅರರೆ ಭಾಪುರೆ ಕರ್ಣ ಮಝ ಭಾ
ಪುರೆ ಭಟಾಗ್ರಣಿ ನಿನ್ನ ಸರಿದೊರೆ
ಯೆರಡು ಯುಗದಲಿ ಕಾಣೆನೆಂದಳಲಿದನು ಹನುಮಂತ ೧೧

ಕಳಚಿ ದುರಿಯೋಧನನ ಬೆಳುಗೊಡೆ
ನೆಲಕೆ ಬೀಳ್ವಂದದಲಿ ಕೌರವ
ಕುಲದ ನಿಖಿಳೈಶ್ವರ್ಯವೆಳೆಗೊಗುರ್ಡಿಸಿ ಕೆಡೆವಂತೆ
ಥಳಥಳಿಪ ನಗೆಮೊಗದ ಗಂಟಿಕ್ಕಿ
ಬಲಿದ ಹುಬ್ಬಿನ ಬಿಟ್ಟ ಕಂಗಳ
ಹೊಳೆವ ಹುಲುಗಳ ಕರ್ಣಶಿರ ಕೆಡೆದುದು ಧರಿತ್ರಿಯಲಿ ೧೨

ದ್ಯುಮಣಿ ಕರ್ಣದ್ಯುಮಣಿ ಸಹಿತ
ಸ್ತಮಿಸೆ ಕಮಲಿನಿ ಕೌರವನ ಮುಖ
ಕಮಲ ಬಾಡಿತು ತಿಮಿರ ಹೆಚ್ಚಿತು ಶೋಕತಮದೊಡನೆ
ಅಮಳ ಚಕ್ರಾಂಗಕ್ಕೆ ಭೂಪೋ
ತ್ತಮನ ವಿಜಯಾಂಗನೆಗೆಯುಗಲಿಕೆ
ಸಮನಿಸಿತು ಕೇಳಯ್ಯ ಜನಮೇಜಯ ಮಹೀಪಾಲ ೧೩

ಕ್ಲಿಷ್ಟಪದಕೋಶ

ಅ

ಅಕ್ಕಜ–ಅಶ್ಚರ್ಯ
ಅಗ್ಗಳಿಕೆ–ಅಧಿಕ್ಯ, ಹೆಚ್ಚಿಗೆ
ಅಘಾಟ (?)
ಅಳಬಳ–ಸಾಮರ್ಥ್ಯ

ಆ

ಆಲಿಕುಲ–ಆಲಿಕಲ್ಲು; ಕಾರ್ಗಾಲದಲ್ಲಿ ಬೀಳುವ ಮಂಜಿನ ಹರಳು
ಆಹವ–ಯುದ್ಧ

ಉ

ಉತ್ತಮಿಕೆ–ಶ್ರೇಷ್ಠತೆ
ಉತ್ತರಾಯಿ–ದೂರದವರು, ನಂಟತನ ಬಿಟ್ಟುಹೋದವರು
ಉತ್ಪಾತ–ಅಪಶಕುನ
ಉಪಟಳ–ಉಪದ್ರವ, ತೊಂದರೆ
ಉರವಣಿಸು–ಮುನ್ನುಗ್ಗು, ಮೇಲೆಬೀಳು

ಎ

ಎಕ್ಕತುಳ–ಶೌರ್ಯ (?)
ಎಚ್ಚಾಡು–ಬಾಣಗಳನ್ನು ಬಿಟ್ಟು ಯುದ್ಧ ಮಾಡು ಧಾ. ಇಸು

ಏ

ಏಱು–ಗಾಯ

ಒ

ಒಗ್ಗುಡಿಸಿ–ಒಟ್ಟುಸೇರಿ
ಒಪಬಡು–ಒಪ್ಪು
ಒಳ್ಳೆ–ನೀರಹಾವು

ಓ

ಓಗಟೆ–ಒಗಟೆ

ಕ

ಕಕ್ಕುಲಿತೆ–ಆಸೆ, ಚಪಲತೆ
ಕಂದುಕಸರಿಕೆ–ಕಶ್ಮಲ, ಸಂಶಯ
ಕಳಂಬ–ಬಾಣ
ಕೀಲಚ್ಚು–ಚಕ್ರದಗುಂಬ
ಕುಮ್ಮರಿ–ಮರಗಳನ್ನು ಕಡಿದಿರುವ ಕಾಡಿನ ಪ್ರದೇಶ
ಕೂಡುಗಲಕ–ಒಕ್ಕಟ್ಟನ್ನು ಮುರಿಯುವವರು; ಕೂಡಿದ್ದನ್ನು ಕಲಕುವರು
ಕೆತ್ತು–ನಡಗು
ಕೆರಳಿಚಿ–ಕೆರಳಿಸಿ, ಕೋಪಬರುವಂತೆಮಾಡಿ
ಕೇಣ–ಮಾತ್ಸರ್ಯ, ಸೇಡು
ಕೈದು–ಆಯುಧ
ಕೈರವ–ಕನ್ನೈದಿಲೆ
ಕೊಜಗೆ–ಅರಕೆ, ಅಗತ್ಯ
ಕೋಲಗುರು–ದ್ರೋಣಾಚಾರ್ಯ
ಕೋಲು–ಬಾಣ

ಖ

ಖರೆಯ–ಸತ್ಯದ
ಖೋಡಿಗಳೆ–ನಿರುಪಯುಕ್ತವಾಗಿಸು,
ಹೀನೈಸು

ಗ

ಗತಾಕ್ಷ–ಧೃತರಾಷ್ಟ್ರ

ಚ

ಚಪ್ಪರಿಸು–ಬೆನ್ನ ಮೇಲೆ ತಟ್ಟು

ಜ

ಜಿತಕಾಮ–ಶಿವ
ಜೀಮೂತ–ಮೋಡ
ಜೈನದೀಕ್ಷೆ–ಅಹಿಂಸಾವ್ರತ

ಝ

ಝಳ–ಕಾಂತಿ

ಡ

ಡೊಂಬು–ಹೆಮ್ಮೆ, ಡಂಭ, ಒಣಹೆಮ್ಮೆ

ತ

ತಡಿಕೆವಲೆ–ಒಂದು ರೀತಿಯ ಬಲೆ,
ಮೀನು ಹಿಡಿಯುವ ಸಾಧನ
ತಱಿದ–ಕತ್ತರಿಸಿದ
ತಱುಬು–ಅಡ್ಡಗಟ್ಟು
ತಿಮಿರ–ಕತ್ತಲೆ
ತ್ರಿಕಟುಕ–ಒಂದಕ್ಕೆ ಮೂರರಷ್ಟು
ಕಾರವಾದ ; ತುಂಬ ಅಸಹ್ಯವಾದ
ತೊಡೆ–ನಾಶಮಾಡು, ಒರಸು
ತೋಮರ–ಈಟಿ
ತೆರಳಚಿ–ತಿರುಗಿಸಿ

ನ

ದಡ್ಡಿ–ಜವನಿಕೆ, ತೆರೆ
ದಂಡಿಗೆ–ಪಲ್ಲಕ್ಕಿ
ದಳವಾಯ್–ದಳದಬಾಯಿ, ದಳಪತಿ
ದಿಗಿಭ–ದಿಕ್ಕಿನ ಆನೆ
ದೊಠಾರಿಸು–ಆತ್ಮಗೌರವವನ್ನು
ಮೆರೆದು (?)
ದ್ಯುಮಣಿ–ಆಕಾಶದ ರತ್ನ, ಸೂರ್ಯ,
ದೆಪ್ಪಾಳ–ಘನತೆ
ದೀವರ–ಬೆಸ್ತ, ಬೇಡ

ಧ

ಧೀವಸಿ–ಶತ್ರು

ದ

ನಾರಚ–ಬಾಣ
ನಿಬ್ಬರ–ಅತಿಶಯ, ನಿರ್ಭರ (ತ್ಭ)
ನಿರರ್ಥಕ–ವ್ಯರ್ಥ
ನೆಗಹು–ಎತ್ತು, ಮೇಲಕ್ಕೆ ಎಳೆ

ಪ

ಪಲಿತ–ನರೆತಕೂದಲು
ಪ್ರತತಿ–ಗುಂಪು
ಪಾರುಖಾಣೆ–ಲೆಕ್ಕಾಚಾರ, ಮರಣ
ಪುರಂದರ–ಇಂದ್ರ
ಪೂರಾಯ–ಪೂರ್ಣ
ಪೈಸರಿಸು–(?)

ಬ

ಬವರಿಗ–ಯುದ್ಧಮಾಡುವ, ಉತ್ಸಾಹ ಉಳ್ಳವ
ಬಳಿಚಿ–ಸೆಳೆದು, ದೋಚಿ
ಬಾಹಿರತನ–ಕೀಳುತನ
ಬೀಸುವಲೆ–ಒಂದು ರೀತಿಯ ಬಲೆ, ಮೀನು ಹಿಡಿಯುವ ಸಾಧನ
ಬೆಸುಗೆ–ಕೂಟ, ಹೊಂದಿಕೆ, ಬೆಸಗೆ
ಬೇಗಡೆ–ರಂಧ್ರ, ತೂತು
ಬೇಳಂಬ–ಬಲಿಕೊಡುವುದು, (ಹೋಮ ಮಾಡುವುದು)
ಬೋಳೈಸು–ಸಮಾಧಾನಮಾಡು

ಭ

ಭಾಜನ–ಆಶ್ರಯ
ಭುಲ್ಲಯಿಸು–ವ್ಯಾಪಕವಾಗು (?)

ಮ

ಮುಗ್ಗು–ಆಯಾಸಹೊಂದು
ಮನಕತ–ಮನಸ್ಸಿಗಾದ ನೋವು, (ಹತ)
ಮಲೆ–ಎದುರಿಸು
ಮಾರ್ಗಣೆ–ಬಾಣ
ಮೊಗವಲೆ–ಒಂದು ರೀತಿಯ ಬಲೆ, ಮೀನು ಹಿಡಿಯುವ ಸಾಧನ

ಯ

ಯಾಚಕ–ಬೇಡುವವನು

ರ

ರಣಬೀಡ–ಯುದ್ಧಕ್ಕೆ ಹೆದರುವವ
ರವ–ಶಬ್ದ

ಲ

ಲಳಿ–ಉತ್ಸಾಹ
ಲಾವಣಿಗೆ–ಗುತ್ತಿಗೆಗೆ ತೆಗೆದುಕೊ
ಲಾವುಗೆ–ಒಂದು ಹಕ್ಕಿ

ವ

ವಾಘೆ–ಲಗಾಮು
ವಾಜಿ–ಕುದುರೆ
ವಾಯಸ–ಕಾಗೆ
ವಿಪರೀತಗತಿ–ಹಿಂದುಮುಂದಾಗಿ ನಡೆಯುವುದು
ವಿಭಾಡಿಸು–ಸೋಲಿಸು, ಓಡಿಸು

ಸ

ಸಘಾಡಿಕೆ–ಹೆಚ್ಚಳ
ಸತ್ತಿಗೆ–ಕೊಡೆ
ಸಂಚಕಾರ–ಮುಂದಾಗಿ ಸಲ್ಲಿಸುವ ಹಣ; ಅಗಾವು
ಸಂಪ್ರತಿ–ಒಪ್ಪಂದ, ಸಂಧಿ
ಸ್ಪಂದನ–ತೇರು
ಸಮಜೋಳಿ–ಸರಿಸಮಾನ
ಸಮದಂಡಿ–ಸರಿಸಮಾನ
ಸಮವರ್ತಿ–ಯಮ
ಸರಕು–ವ್ಯಾಪಾರದವಸ್ತು
ಸರಳು–ಬಾಣ
ಸಿಂಧ–ಬಾವುಟ
ಸೀಸಕ–ಸೀಸ (?)
ಸುತ್ರಾಮ–ಇಂದ್ರ
ಸುಮ್ಮಾನ–ಸಂತೋಷ
ಸುರಭಿ–ಸುವಾಸನೆ
ಸೂತಕರ್ಮ–ಸಾರಥ್ಯ, ತೇರು ನಡೆಸುವುದು

ಸೂತಕುಲ–ಬೆಸ್ತರ ವಂಶ
ಸೂಳೈಸು–ಮೊಳಗು, ಶಬ್ದಮಾಡು
ಸೊಗಡ–ವಾಸನೆ, ಸ್ಪರ್ಶ
ಸೊರಹು–ಹರಟು

ಹ

ಹಡಪ–ತಾಂಬೂಲವಿಡುವ ಚೀಲ
ಹರಿಗೆ–ಗುರಾಣಿ
ಹರಿಬ–ಕರ್ತವ್ಯ
ಹಱವು–ಕೊನೆ, ನಾಶ
ಹಳಚು–(ಪಳಂಚು) ತಾಗು
ಹಳಚದೆ–(ರೆಪ್ಪೆಹೊಡೆಯದೆ)
ಹಂಜರಕೂಳಿ–ಮೀನು ಹಿಡಿಯುವ ಕುಕ್ಕೆ
ಹೂಸಕ–(ಲೇಪನ) ಕಪಟ, ಕೃತಿಮ
ಹೆಱಸಾರು–ಹಿಂದೆ ಹೋಗು
ಹೇಳಿಗೆ–ಬುಟ್ಟಿ, ಪೆಟ್ಟಿಗೆ
ಹೊಟ್ಟು–ನೀರಸವಾದುದು ; ಶಕ್ತಿಹೀನರು

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೮

B. K. Kop
c/o V. S. Kulkarni
Bloom L. L. B.
Malawalli charities
S. C. Road, Sheshadri
Puram, 1st main Road
Bangalore 20.
Near Kamat Hotel

Sister Emanuel (V. G. Joshi)

27716